ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

02 ಆಗಸ್ಟ್ 2017 ಪುಟ 16 ರೂ. 15/-




ಬಂಗಾಳೀ ಸಮಾಜದೊಳಗಿನ ಕೋಮುವಾದ



ನಮ್ಮ ನಾಡು ನಮ್ಮ ಧ್ವಜ

ಕಿಡ್ನ್ಯಾಪ್ ಹಿಂದೆ ಸಿಡಿ ರಹಸ್ಯ




ದಾವಣಗೆರೆ ರವೀಂದ್ರನ ರಾಜಕೀಯಕ್ಕೆ ಚರಮಗೀತೆ ಸಿದ್ಧ!

ದೇವದುರ್ಗ ಶಾಸಕ ಶಿವನಗೌಡ ನಾಯಕನಿಂದ ಹಗಲು ನಾಟಕ

ಕೊಪ್ಪಳ ಅಖಾಡಕ್ಕೆ ಇಳಿಯುತ್ತಾ ಕರಡಿ ಕುಡಿ?

ಆಗಸ್ಟ್ 5-6 ಬೆಂಗಳೂರು: ಈ ಕಾಲಕ್ಕೆ ತಕ್ಕ ವಿದ್ಯಾರ್ಥಿ ಸಮಾವೇ




ಆಯಾ ಕಾಲಕ್ಕೆ ತಕ್ಕುನಾದದ್ದು ಎಂದರೆ ಏನು? ಆದರ ಹಿಂದಿನ ತಲೆಮಾರಿನವರು ತಮಗೆ ಸಾಧ್ಯವಾದ್ದನ್ನು ಮಾಡುತ್ತಾ, ಮಾಡುತ್ತಾ ಒಂದು ಜಾಡಿಗೆ ಬದ್ದಿರುತ್ತಾರೆ. ಕೆಲವು ವ್ಯಕ್ತಿಗಳಲ್ಲಿ ಅಗಾಧ ಹುಮ್ಮಸ್ಸು ಇರುತ್ತದಾದರೂ, ಒಂದು ಸಮೂಹವಾಗಿ ಅದರ ಚೈತನ್ಯ ಕಡಿಮೆಯಾಗಿರುತ್ತದೆ. ಕೆಲವು ಸಮಸ್ಯೆಗಳು ಬಹುಕಾಲದಿಂದ ಜಾಡ್ಯದಂತೆ ಅಂಟಿಕೊಂಡಿರುತ್ತವೆ. ಆ ಜಾಡ್ಯಗಳಿಂದ ಕಳಚಿಕೊಂಡರೆ, ಅದು ಸಮಸ್ಯೆಯಿಂದ ಹೊರಬಂದಂತೆ ಆಗುತ್ತದೋ ಅಥವಾ ಇದುವರೆಗೆ ನಂಬಿಕೊಂಡು ಬಂದ ತತ್ವವನ್ನೇ ಬಿಟ್ಟುಕೊಟ್ಟಂತೆ ಆಗುವುದೋ ಎಂಬ ತೊಳಲಾಟದಲ್ಲಿ ಹಿರಿಯರು ಸಿಕ್ಕಿಬಿದ್ದಿರುತ್ತಾರೆ. ಒಂದು ರೀತಿಯಲ್ಲಿ ಅವರು ಅಡ್ಡಿಯೂ ಆಗಿರುತ್ತಾರೆ. ಆಗ ಹಳೆಯದನ್ನು ಹರಿದುಕೊಂಡು ಹೊಸದು ಹುಟ್ಟಬೇಕು. ಇಲ್ಲದಿದ್ದರೆ, ಹೊಸದು ಅಷ್ಟು ಹೊಸದಾಗಿರದೇ ಹೋಗಬಹುದು.

ಇವತ್ತಿನ ಸಂದರ್ಭ ಅಂತಹ ಹೊಸದು ಹುಟ್ಟುವ ಸಂದರ್ಭವಾಗಿದೆಯೇ? ಕಳೆದ 20ಕ್ಕೂ ಹೆಚ್ಚು ವರ್ಷಗಳಿಂದ ಯುವ ತಲೆಮಾರು ಸಾಮಾಜಿಕ ಕ್ರಿಯಾಶೀಲತೆಯಿಂದ ವಿಮುಖವಾಗುತ್ತಾ ಬಂದಿತ್ತೆಂಬುದು ಎಲ್ಲರೂ ಒಪ್ಪಿಕೊಳ್ಳುವ ಸಂಗತಿ. ಹಾಗಾಗಿಯೂ ಸಾಮಾಜಿಕ ರಂಗದಲ್ಲಿ ಸ್ವಲ್ಪ ಹಿರಿಯರೇ ಹೆಚ್ಚೆಚ್ಚು ಕಾಣುತ್ತಿದ್ದರು. ಅವರುಗಳಿಗೆ ಸ್ಫೂರ್ತಿಯಾಗಿದ್ದ ಅದಕ್ಕೂ ಹಿಂದಿನ ತಲೆಮಾರುಗಳ ಮುಂದಾಳುಗಳೇ ಬಹುಕಾಲದವರೆಗೆ ಸ್ಫೂರ್ತಿ ಮತ್ತು ಪ್ರೇರಣೆಯಾಗಿದ್ದರು. ಕರ್ನಾಟಕದಲ್ಲಿ ಲಂಕೇಶ್, ಪ್ರೊ.ಎಂ.ಡಿ.ನಂಜುಂಡಸ್ವಾಮಿ ಥರದ ಕೆಲವರು ಮೂರ್ನಾಲ್ಕು ದಶಕಗಳ ಕಾಲ ಈ ರೀತಿಯಾಗಿ ವಿಜೃಂಭಿಸಿದರು. ವ್ಯಕ್ತಿಗಳಂತೆಯೇ ಈ ಮಾತು ಚಳವಳಿಗಳಿಗೂ ಅನ್ವಯಿಸುತ್ತದೆ. ಆದರೆ, ಶತಮಾನ (ಮತ್ತು ಸಹಸ್ರಮಾನ) ಹೊರಳಿಕೊಳ್ಳುವ ಹೊತ್ತಿಗೆ, ಈ ಸಾಲಿನವರು - ವ್ಯಕ್ತಿಗಳು, ಚಳವಳಿಗಳು - ಒಂದೋ ಅಸ್ತಂಗತವಾಗಿದ್ದಾರೆ, ಇಲ್ಲವೇ ಶಕ್ತಿಯಾಗಿ ಉಳಿದಿಲ್ಲ. ಆಯಾ ಕಾಲಕ್ಕೆ ಬೇಕಾದ ಮುಂಚೂಣಿ ವ್ಯಕ್ತಿಗಳು, ಗುಂಪುಗಳು ಮತ್ತು ಸಂಘಟನೆಗಳನ್ನು ಸಂದರ್ಭವೇ ಸೃಷ್ಟಿಸಿ ಮುಂದು ಮಾಡಿತ್ತು.

ಈಗ ಎಲ್ಲವೂ ಹಳತಾಗಿದೆ. ಹಳತು ಕೊಳೆಯಲು ಆರಂಭಿಸಿ ಬಹಳ ಸಮಯವಾಗಿದೆ. ಹಳತು ಕೊಳೆಯುವುದರ ಜೊತೆಗೆ ಕಾಲ ಕಳಿತು ಹೊಸದು ಹುಟ್ಟಬೇಕಿತ್ತು. ಆದಾಗಲಿಲ್ಲ. ಈ ಕೊಳೆಯಲ್ಲಿ ಬೆಳೆದದ್ದು ಮತ್ತೂ ಕೊಳಕಾದದ್ದು. ಇದು ಕರ್ನಾಟಕಕ್ಕೆ ಸೀಮಿತವಾದ ವಿದ್ಯಮಾನವಲ್ಲ; ದೇಶವ್ಯಾಪಿಯಾದದ್ದು; ಇನ್ನೂ ಹೇಳಬೇಕೆಂದರೆ ಜಾಗತಿಕವಾದದ್ದು. ಭಾರತವೆಂಬ ದೇಶದ ಪರಿಕಲ್ಪನೆಯೇ ಛಿದ್ರವಾಗುತ್ತದೋ ಎಂಬಷ್ಟು ಅಪಾಯದ ಸ್ಥಿತಿಗೆ ಅದು ನಮ್ಮನ್ನು ಕರೆದೊಯ್ಯುತ್ತಿದೆ.

ಇದೀಗ ಸವಾಲು. ಈ ಸವಾಲನ್ನು ಎದುರಿಸುವ ಅಂತಃಶಕ್ತಿಯು, ಮುಂದೆ ಬಾಳಿ ಬದುಕಬೇಕಾದ ಯುವ ತಲೆಮಾರಿಗೆ ಇದೆಯೇ? ಅದಕ್ಕೆ ದಿಕ್ಕು ದೆಸೆ ತೋರಬಹುದಾದ, ಚೈತನ್ಯದಾಯೀ ಪ್ರೇರಣೆ ಒದಗಿಸಬಹುದಾದ ಕಿಂದರಿ ಜೋಗಿತನ ಆ ಯುವತಲೆಮಾರಿನೊಳಗಿನಿಂದಲೇ ಮೂಡಿಬರುತ್ತದೆಯೋ, ಅಥವಾ ಹಿರಿಯರಿಂದಲೋ? ಯಾರಿಂದ ಎಂಬುದು ಯಾರದ್ದೋ ವ್ಯಕ್ತಿಗತ ಮಹತ್ವಾಕಾಂಕ್ಷೆ







ಅಥವಾ ಬಯಕೆಯಿಂದ ತೀರ್ಮಾನವಾಗುವುದಿಲ್ಲ, ಸಂದರ್ಭ ತೀರ್ಮಾನಿಸುತ್ತದೆ.

ಹಾಗೆ ಕಳೆದ ಮೂರು ವರ್ಷಗಳಲ್ಲಿ ಸಂದರ್ಭವೇ ಮುಂದೆ ಮಾಡಿ ನಿಲ್ಲಿಸಿದ ನಾಲ್ಕೈದು ವ್ಯಕ್ತಿಗಳನ್ನು ನೋಡಿದರೆ ಒಂದು ಅಂಶ ಎದ್ದು ಕಾಣುತ್ತಿದೆ. ಅವರೆಲ್ಲರೂ 35 ವರ್ಷದೊಳಗಿನ ವಯಸ್ಸಿನವರು. ರೋಹಿತ್ ವೇಮುಲ (ಸತ್ತಾಗ 26), ಕನ್ಹಯ್ಯ ಕುಮಾರ್ (30), ಹಾರ್ದಿಕ್ ಪಟೇಲ್ (24), ಚಂದ್ರಶೇಖರ್ ರಾವಣ್ (31), ಜಿಗ್ನೇಶ್ ಮೇವಾನಿ (34). ಇದರಲ್ಲಿ ಹಾರ್ದಿಕ್ ಪಟೇಲ್ **odd man out** ಅಂತ ಅನ್ನಿಸಬಹುದು. ಉದ್ದೇಶಪೂರ್ವಕವಾಗಿ ಆತನನ್ನು ಇಲ್ಲಿ ಸೇರಿಸಲಾಗಿದೆ. ಇವರುಗಳಲ್ಲಿ ರೋಹಿತ್, ಕನ್ಹಯ್ಯ ಮತ್ತು ಜಿಗ್ನೇಶ್ ಅವರ ವಿಚಾರಗಳು ಈಗಾಗಲೇ ಸಾರ್ವಜನಿಕ ವಲಯದಲ್ಲಿ ಲಭ್ಯವಿದೆ. ಈ ಮೂವರೂ ತಮ್ಮ ಹಿಂದಿನ ತಲೆಮಾರಿಗಿಂತ ಭಿನ್ನ ಬಗೆಯಲ್ಲಿ ಯೋಚಿಸಿ ಮಾತನಾಡಿದವರು. ದಲಿತ ಹಿನ್ನೆಲೆಯ ರೋಹಿತ್ ಕಮ್ಯುನಿಸ್ಟ್ ಸಂಘಟನೆಗಳ ಬಗ್ಗೆ ಬೇಸರ, ಒಂದು ಬಗೆಯ ತಿರಸ್ಕಾರ ಹೊಂದಿದ್ದರೂ, ಆತನ ಫೇಸ್‌ಬುಕ್ ಪುಟದಲ್ಲಿ ಹೆಸರಾಂತ ಮಾರ್ಕ್ಸ್‌ವಾದಿಗಳ ಮಾತುಗಳು ಅಲ್ಲಲ್ಲಿ ಎದ್ದು ಕಾಣುತ್ತಿದ್ದವು. ನಾವು ಬೆರಗಾಗುವ ಪ್ರಮಾಣಕ್ಕೆ ಈತ ವಿಜ್ಞಾನ ಹಾಗೂ ತತ್ವಶಾಸ್ತ್ರವನ್ನು ತನ್ನೊಳಗೆ ಇಳಿಸಿಕೊಂಡಂತೆ ಕಾಣುತ್ತಾನೆ. ಇಂತಹ ರೋಹಿತ್ ಇಲ್ಲದೇ ಹೋಗಿದ್ದು ಈ ಕಾಲದ ದೊಡ್ಡ ನಷ್ಟವಾಗಿದೆ. ಕಟ್ಟರ್ ಕಮ್ಯುನಿಸ್ಟ್ ಊರು, ಸಂಘಟನೆ ಮತ್ತು ವಿಶ್ವವಿದ್ಯಾಲಯದಿಂದ ಬಂದ ಕನ್ಹಯ್ಯ ಕೆಂಪು ನೀಲಿಯ ಸಂಗಮಕ್ಕೆ ಪದೇ ಪದೇ ಒತ್ತು ಕೊಟ್ಟು ಮಾತನಾಡುತ್ತಾನೆ. ಇವರಿಬ್ಬರಿಗಿಂತ ಹಿರಿಯರಾದ ಜಿಗ್ನೇಶ್ ಇವೆಲ್ಲವನ್ನೂ ಸಹಜವಾಗಿ ಅಂತರ್ಗತ ಮಾಡಿಕೊಂಡಂತೆ, ಸಿದ್ಧಾಂತಕ್ಕಿಂತ ಜನರ ಸಮಸ್ಯೆಗಳ ಬಗ್ಗೆ ಹೆಚ್ಚು ಮಾತಾಡುತ್ತಾರೆ. ಇದಕ್ಕೆ ವಯಸ್ಸು ಮಾತ್ರ ಕಾರಣವಲ್ಲ; ಅವರು ತಳಮಟ್ಟದ ಜನರ ದೊಡ್ಡ ಚಳವಳಿ ಕಟ್ಟುವ ಜವಾಬ್ದಾರಿ ಹೊತ್ತಿದ್ದಾರೆ.

ಇವರೆಲ್ಲರೂ ಪ್ರಚಾರಕ್ಕೆ ಬಂದವರು. ದೆಹಲಿಯ ಹೊರಗಿನ ಗುರ್‌ಗಾಂವ್‌ನಲ್ಲಿ ಮಾರುತಿ ಸುಜುಕಿ ಕಾರ್ಮಿಕರ ಮಧ್ಯೆ ಸಂಘಟನೆ ಮಾಡುತ್ತಿರುವ ಅಮಿತ್‌ರಂತಹವರೂ ಸೇರಿದಂತೆ ಇನ್ನೂ ಎಷ್ಟೋ ಯುವಜನರು ದೇಶದ ಬೇರೆ ಬೇರೆ ಭಾಗಗಳಲ್ಲಿದ್ದಾರೆ. ಬಹುಶಃ ಹೊಸತಲೆಮಾರಿನ ನಾಯಕ ನಾಯಕಿಯರು ಸಿದ್ಧಗೊಳ್ಳುತ್ತಿದ್ದಾರೆ.

ಇದು ಕೆಲವು ವ್ಯಕ್ತಿಗಳ ಪ್ರಶ್ನೆಯಲ್ಲ, ಇದೊಂದು ವಿದ್ಯಮಾನವಾಗಿ ರೂಪುಗೊಳ್ಳುತ್ತಿರಬಹುದಾದ ಪ್ರಕ್ರಿಯೆ. ಮೇಲೆ ಹೆಸರಿಸಲಾದ ಕೆಲವರು ಮುಂದಿನ ದಿನಗಳಲ್ಲಿ ನೇಪಥ್ಯಕ್ಕೆ ಸರಿದುಬಿಡಬಹುದು. ಮತ್ತಷ್ಟು ಹೊಸಬರು ದೊಡ್ಡ ಸಂಖ್ಯೆಯಲ್ಲಿ ಬಂದು ಮುಂದಿನ ಸಾಲುಗಳಲ್ಲಿ ಕೂರಲೂಬಹುದು. ಆದರೆ ಒಂದು **trend** ಕಾಣುತ್ತಿದೆ. ಈ ಹೊಸಬರಲ್ಲಿ ವಿವಿಧ ಸೈದ್ಧಾಂತಿಕ ಧಾರೆಗಳ ಸಮಾನ ಮನಸ್ಕರನ್ನು ಒಳಗೊಳ್ಳುವ ಗುಣ ಇರುವುದು ಆಶ್ಚರ್ಯಕರವಾಗಿದೆ. ಕಟ್ಟಾ ಕಮ್ಯುನಿಸ್ಟ್ ಪಕ್ಷದ ಹಿನ್ನೆಲೆಯ ಕನ್ಹಯ್ಯ ಕುಮಾರ್, ಕಮ್ಯುನಿಸ್ಟ್ ಸಂಘಟನೆಗಳ ಧೋರಣೆ ಬಗ್ಗೆ ಬಿಡುಬೀಸಾಗಿ ಮಾತನಾಡುತ ಹಿಂದಿನ ತಲೆಮಾರಿಗೆ ಸಾಧ್ಯವಾಗದಷ್ಟು ಅಂಬೇಡ್ಕರರನ್ನು ಎತ್ತಿಹಿಡಿಯುತ್ತಾರೆ. ಇ ವ್ಯಕ್ತಿಗಳಿಗಿಂತ ಹೆಚ್ಚಾಗಿ ಕಾಲದ ಗುಣವೇ ಇ


ಮೇಲಿನೆಲ್ಲಾ ಅಂಶಗಳನ್ನು ಈಗ ಕಾರಣವಿದೆ. ಆಗಸ್ಟ್ 5 ಮತ್ತು 6ರಂದು ಬೆಂ ಅಖಿಲ ಭಾರತ ಮಟ್ಟದ ವಿದ್ಯಾರ್ಥಿ ನಡೆಯಲಿದೆ. ಆ ಸಮಾವೇಶವು ರೂಪುಗೊಂಡಿ ರೂಪುಗೊಳ್ಳುತ್ತಿರುವ ಬಗೆಯೇ ವಿಶಿಷ್ಟವಾಗಿದೆ. ಶುರುವಾಗಿದ್ದು ಮೈಯ್ಯೆಲ್ಲಾ ಹಣ್ಣಾಗಿರುವ ಅಜ್ಜ ಸದ್ಗೋಪಾಲ್ ಅವರಿಂದ. ದೇಶದ ಬೇರೆ ಬೇರೆ ಚಿಲುಮೆಗಳಂತೆ ಮೇಲೇಳುತ್ತಿರುವ ವಿದ್ಯಾರ್ಥಿ ಗ ಸಂಘಟನೆಗಳು/ಚಟುವಟಿಕೆಗಳನ್ನು ಒಂದೆಡೆ ಅಖಿಲ ಭಾರತ ಸಮಾವೇಶ ಆಗಬೇಕೆಂದು ಹಕ್ಕಾಗಿ ಅಖಿಲ ಭಾರತ ವೇದಿಕೆಯಲ್ಲಿ ಚರ್ಚೆ ಆಗಿನಿಂದ ಇಲ್ಲಿಯವರೆಗೆ ಕಳೆದೆರಡು ಡಾ.ಸದ್ಗೋಪಾಲ್ ಪಾದರಸದಂತೆ ಓಡಾ ವಾಸ್ತವದಲ್ಲಿ ಅವರು ಸಂಘಟನೆಯ ಕೆಲಸದಿಂದ 'ಒಂದು ವರ್ಷ ರಜೆ' ಕೇಳಿ ಮಂಜೂರೂ ಆಗಿತ್ತು. ಆದರೆ, ಒಂದು ರಜೆ ತೆಗೆದುಕೊಳ್ಳಲಾಗಲಿಲ್ಲ. ಈಶಾನ್ಯ ಸೇರಿದಂತೆ ಎಲ್ಲೆಡೆ ಅವರು ಸುತ್ತಿದರು. ಮ ನಡೆದ ಸಭೆಗೆ ಹೋದಂತೆ, ಪೂರ್ವಭಾವಿ ಬೆಂಗಳೂರಿಗೂ ಬಂದುಹೋದರು.

ಈ ಸಮಾವೇಶದ ವಿಶಿಷ್ಟತೆ ಎಂ ವೇದಿಕೆಯ ಭಾಷಣಕಾರರು ಹೆಚ್ಚು ಪ ವುದಿಲ್ಲ. ಬಂದಿರುವ ಪ್ರತಿನಿಧಿಗಳು ಮಾತ ಪ್ರತಿಯೊಬ್ಬ ಪ್ರತಿನಿಧಿಯೂ ಮಾತನಾ ಅವಕಾಶವಾಗುವಂತೆ ಕಾರ್ಯಕ್ರಮದ ವಿನ್ಯಾಸ ಇ ಹೆಚ್ಚು ಗುಂಪುಗಳಲ್ಲಿ ಪೂರ್ವನಿಗದಿತ ಥೀ ಚರ್ಚೆ ನಡೆಯುತ್ತದೆ. 'ದೊಡ್ಡ' ವಿದ್ಯಾರ್ಥಿ ಸಂಘ ಕಾರ್ಯಕ್ರಮದ ಸಂಘಟಕರಲ್ಲಿ ಇದ್ದಾರಾದರೂ ಎಲ್ಲೆಡೆ ಆವರಿಸಿಕೊಳ್ಳಲು ಬಯಸುತ್ತಿಲ್ಲ. ಶಿಕ್ಷಣದ ಅಖಿಲ ಭಾರತ ವೇದಿಕೆಯ ಮಾರ್ಗದರ್ಶ ಕರ್ನಾಟಕ ವಿದ್ಯಾರ್ಥಿ ಸಂಘಟನೆ, ಅಖಿಲ ಭಾರತ ಒಕ್ಕೂಟ, ಬಹುಜನ ವಿದ್ಯಾರ್ಥಿ ಸಂಘ, ಇಸ್ಲಾಮಿಕ್ ಸಂಘಟನೆ, ದಲಿತ ವಿದ್ಯಾರ್ಥಿ ಸಿಗ್ನಾ, ಜೆಎಫ್‌ಟಿಐ, ಸಮಾನ ಶಿಕ್ಷಣಕ್ಕಾಗಿ ಜನ ನಗಳು ಸ್ಥಳೀಯ ಆಯೋಜನೆಯ ಹೊಣೆ ದೇಶದ ಎಲ್ಲ ಭಾಗಗಳ ವಿದ್ಯಾರ್ಥಿ ಗು ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಬಹುತೇ ವಿದ್ಯಾರ್ಥಿ ಪ್ರತಿನಿಧಿಗಳು ಈಗಾಗಲೇ ಬರು ಖಾತರಿಪಡಿಸಿದ್ದಾರೆ.

ಕಾರ್ಯಕ್ರಮದಲ್ಲಿ ಪ್ರತಿನಿಧಿಗಳು ಚರ್ಚೆ ಮ ಥೀಂಗಳು ಇನ್ನೂ ವಿಶೇಷತೆಯಿಂದ ಕೂಡಿ 'ಹಳೆ ತಲೆಮಾರಿನ ಚಳವಳಿಯಿಂದ ಕಲಿಯ ಪಾಠಗಳ' ಕುರಿತು ಮತ್ತು 21ನೇ ಶತಮಾನದ ಸವಾಲುಗಳನ್ನು ಎದುರಿಸಲು ಕಟ್ಟಬೇಕಾದ ರೂಪುರೇಷೆಗಳ ಕುರಿತು ಚರ್ಚೆ ಇಟ್ಟುಕೊ ಈಗಿಂದೀಗಲೇ ಎಲ್ಲರೂ ಸೇರಿ ಹೊಸದೊಂದು ಯನ್ನೋ, ಒಕ್ಕೂಟವನ್ನೋ ಕಟ್ಟಿಬಿಡುವ ಆತುರ ಆದರೆ, ಇಲ್ಲಿ ಬಂದುಹೋದ ಎಲ್ಲರ ನಡುವೆ ಸ ಮತ್ತು ಸಂವಹನ ಮುಂದುವರೆಸಲು ಬೇಕಾದ ಕುರಿತೂ ಒಂದು ಚರ್ಚೆ ಇಟ್ಟುಕೊಂಡಿದ್ದಾರೆ. ಚಳವಳಿಯ ಕುರಿತೂ ಚರ್ಚೆ ಇದೆ. ಯುವಜನರು ಭಾಗವಹಿಸಬೇಕಾದ ಸಾಮಾಜಿಕ ಜೊತೆಗಿನ ಸಂಬಂಧದ ಕುರಿತೂ ಚರ್ಚೆ ಇದ

ಇಂದು ದೇಶದಲ್ಲಿ ವಿದ್ಯಾರ್ಥಿ ಯುವಜನರ ಪ್ರವಾಹವೇನೂ ಇಲ್ಲ. ಬುಗ್ಗೆಗಳು ಅಲ್ಲಲ್ಲಿ ಚಿ ನೆಗೆಯುತ್ತಲೂ ಇಲ್ಲ. ಚಿಲುಮೆಗಳು ಒಸರಲಾ ಇದ್ದಕ್ಕಿದ್ದಂತೆ ಅಲ್ಲೊಂದು ಇಲ್ಲೊಂದು ಬುಗ್ಗೆ ಹುಮ್ಮಸ್ಸು ಮೂಡಿಸುತ್ತದೆ. ಒಂದೇ ನಿರ್ದಿಷ್ಟ ಎಲ್ಲೆಡೆ ಹರಡಿಕೊಂಡಿಲ್ಲ. ಆದರೆ, ಸಾಧ್ಯವಾದಷ್ಟೂ ಜೊತೆಗೂಡೋಣ ಎಂಬ ಒಳಗೊಳ್ಳುವಿಕೆ ಈ ಸಮಾವೇಶವು ಅಂತಹ ಎಲ್ಲರನ್ನೂ ಜೊತೆಗ ಕೆಲಸ ಮಾಡುತ್ತಿದೆ. ಎಲ್ಲರೂ ಬಂದರೆ, ನಾ ಎನ್ನುವವರಷ್ಟೇ ಹೊರಗೆ ಉಳಿಯಬಹುದು. ಮತ್ತು 6 ಬೆಂಗಳೂರಿನ ಶಿಕ್ಷಕರ ಸದನದ ರಂಗುಗಳ ವಿದ್ಯಾರ್ಥಿ-ಯುವಜನರು ಈ ಕಾ ಹೊಸ ಸಾಧ್ಯತೆಗಳ ಕುರಿತು ಚರ್ಚಿಸಲಿದ್ದಾರೆ. ಆಸ ಸ್ವಾಗತವಿದೆಯಂತೆ. ಆದರೆ, 35 ವರ್ಷ ದಾ ಇಲ್ಲಿ ಮಾತನಾಡುವುದಕ್ಕಿಂತ ಕಲಿಯಲು ಹೆ ಗುತ್ತದೆ. ಹೋಗೋಣ ಬನ್ನಿ.


ಶೋಭಾ ಕರಂದ್ಲಾಜೆಯ ಯಡವಟ್ಟುಗಳು




ಸಂಸದೆ ಶೋಭಾ ಕರಂದ್ಲಾಜೆಗೆ ಹುಚ್ಚು ಹಿಡಿದಿದೆ. ...ಗೆ ಎಂಥ ಹುಚ್ಚು ಎಂದರೆ ಅಮಾಯಕ ...ವತಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡರೆ ಶೋಭಾ ...ಯು ಮೇಲೆ ಮುಸಲ್ಮಾನರು ಅತ್ಯಾಚಾರ ಎಸಗಿದ್ದರು" ...ದು ಅರಚುತ್ತಾಳೆ. ದಲಿತರ ಮನೆ ಊಟ ಎಂಬ ...ಕ ನಿಲ್ಲಿಸಿ ಎಂದರೆ "ಕಾಂಗ್ರೆಸ್‌ನ ರಾಜ್ಯಾಧ್ಯಕ್ಷ ಮತ್ತು ...ರ್ಯಾಧ್ಯಕ್ಷ ಯಾರನ್ನು ಮದುವೆ ಆಗಿದ್ದಾರೆ ಎಂಬುದು ...ಗೆ ಗೊತ್ತು" ಎಂದು ಚೀರುತ್ತಾಳೆ. ಈಗ ಮೊನ್ನೆ ...ವಂತ ಇರುವವರನ್ನು ಶೋಭಾ 'ಕೊಲೆ' ಮಾಡಿಸಿದ್ದಾಳೆ.

ಈಗ ನಿಮ್ಮೆಲ್ಲರಿಗೆ ಗೊತ್ತಿರುವಂತೆ ಮೊನ್ನೆ ಶೋಭ ...ದ್ರದ ಗೃಹ ಮಂತ್ರಿ ರಾಜ್‌ನಾಥ್ ಸಿಂಗ್‌ಗೆ ಬರೆದ ...ಕ್ಕೆ "ಕಾಂಗ್ರೆಸ್ ಮುಖ್ಯಮಂತ್ರಿ ಸಿದ್ದರಾಮಯ್ಯನವರ ...ಳಿತದಡಿ ಕರ್ನಾಟಕದಲ್ಲಿ ರಕ್ತಪಾತ ನಡೆಯುತ್ತಿದ್ದು ...ಜಕೀಯ ಕೊಲೆಗಳು ಸಂಭವಿಸುತ್ತಿವೆ. ಕಳೆದ ನಾಲ್ಕು ...ರ್ಷಗಳಲ್ಲಿ ಆರೆಸ್ಸೆಸ್/ಬಿಜೆಪಿ/ಹಿಂದೂತ್ವ ಸಂಘಟನೆಗಳ ...ರ್ಯಕರ್ತರನ್ನು ಕೊಲೆ ಮಾಡಿರುವ ಪಟ್ಟಿ" ಎಂಬ ...ಬರಹ ಕೊಟ್ಟು 23 ಮಂದಿಗಳ ಹೆಸರುಗಳನ್ನು ...ಡಿದ್ದಾಳೆ. ಜೊತೆಗೆ ಈ ಕೊಲೆಗಳು ಪಿಎಫ್‌ಐ, ಕೆಎಫ್‌ಡಿ ...ಘಟನೆಗಳ ಜಿಹಾದಿ ಶಕ್ತಿಗಳಿಂದ ಆಗಿವೆ; ಆದ್ದರಿಂದ ...ಂಗಳೂರಿನಲ್ಲಿ ರಾಷ್ಟ್ರೀಯ ತನಿಖಾ ಏಜೆನ್ಸಿ ತನ್ನ ಒಂದು ...ಚೇರಿಯನ್ನು ಸ್ಥಾಪಿಸಿ ಈ ಕೊಲೆಗಳನ್ನು ತನಿಖೆ ...ಡಬೇಕೆಂದು ಆಗ್ರಹಿಸಿದ್ದಾಳೆ.

ಈ ಪಟ್ಟಿಯಲ್ಲಿರುವ ಮೊದಲನೆ ಹೆಸರೇ ಅಶೋಕ್ ...ಜಾರಿ ಎಂಬಾತನದ್ದು. ಈ ಹಿಂದೂ ಕಾರ್ಯಕರ್ತನನ್ನು ...ೂಡಬಿದಿರೆ ಹತ್ತಿರ ಸೆಪ್ಟೆಂಬರ್ 20, 2015ರಂದು ...ಲೆ ಮಾಡಲಾಗಿದೆ ಎಂದು ಶೋಭಾ ದೂರಿದ್ದಾಳೆ. ...ಚಿತ್ರವೆಂದರೆ ಈ ಅಶೋಕ್ ಪೂಜಾರಿ ಸತ್ತೇ ಇಲ್ಲ! ...ತನ ಮೇಲೆ ಸೆಪ್ಟೆಂಬರ್ 20, 2015ರಂದು ದಾಳಿ ...ದದ್ದು ನಿಜ. ಆ ದಾಳಿಯಲ್ಲಿ ಆತನಿಗೆ ತೀವ್ರ ...ಯಗಳಾಗಿದ್ದು ಒಂದು ತಿಂಗಳ ಕಾಲ ಚಿಕಿತ್ಸೆ ಪಡೆದಿದ್ದ. ...ಗ ಆತ ಚೇತರಿಸಿಕೊಂಡಿದ್ದಾನಲ್ಲದೆ ಆತನ ಮೇಲೆ ...ಳಿ ಮಾಡಿದವರನ್ನು ಪೊಲೀಸರು ಬಂಧಿಸಿದ್ದಾರೆ ಕೂಡ.









ಇನ್ನು ವಾಮನ ಪೂಜಾರಿ ಎಂಬುವವರನ್ನು ಸೆಪ್ಟೆಂಬರ್ ...5, 2015ರಂದು ಕೊಲೆ ಮಾಡಲಾಗಿತ್ತು ಎಂದು ಶೋಭಾ ...ೂರಿದ್ದಾಳೆ. ವಾಸ್ತವ ಏನೆಂದರೆ 65 ವರ್ಷ ಪ್ರಾಯದ ...ಮನ ಪೂಜಾರಿ ಸೆಪ್ಟೆಂಬರ್ 15 ರಂದು ಬದುಕಿದ್ದರು. ...ಮೇಲೆ ಅದೇ ವರ್ಷ ಅಕ್ಟೋಬರ್ 15 ರಂದು (ಅಂದರೆ ...ಂದು ತಿಂಗಳ ನಂತರ) ಮೂಡಬಿದಿರೆಯಲ್ಲಿರುವ ತಮ್ಮ ...ಗಳ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ವೆಂಕಟೇಶ್ ಎಂಬುವವರನ್ನು ಫೆಬ್ರವರಿ 19, ...015ರಂದು ಶಿವಮೊಗ್ಗದಲ್ಲಿ ಕೊಲೆ ಮಾಡಲಾಗಿತ್ತು ...ಂದಿದ್ದಾಳೆ ಶೋಭಾ. ಆದರೆ ಆ ದಿನ ವೆಂಕಟೇಶ್ ...ಂಬ ಯಾರನ್ನೂ ಶಿವಮೊಗ್ಗದಲ್ಲಿ ಕೊಲೆ ಮಾಡಿರಲಿಲ್ಲ. ...ದಲಾಗಿ ಫೆಬ್ರವರಿ 20ರಂದು, ಶಿವಮೊಗ್ಗದಲ್ಲಿ ಹಲವು ...ುಸ್ಲಿಮ್ ಸಂಘಟನೆಗಳು ಮೆರವಣಿಗೆ ಆಯೋಜಿಸಿದ್ದ ...ಸ ಚಡ್ಡಿಗಳೇ ಮುಸಲ್ಮಾನರ ಆಸ್ತಿಪಾಸ್ತಿಗಳ ಮೇಲೆ ದಾಳಿ ಮಾಡಿ, ಅಂಗಡಿ ಇತ್ಯಾದಿಗಳನ್ನು ಧ್ವಂಸ ಮಾಡಿದ್ದರು. ಆ ಗಲಭೆಯನ್ನೇ ಬಂಡವಾಳ ಮಾಡಿಕೊಂಡು ಮಂಜುನಾಥ್ ಎಂಬುವವರನ್ನು ಅವರ ಸಂಬಂಧಿಗಳೇ ಕೊಂದು ಅದು ಮುಸಲ್ಮಾನರು ಮಾಡಿದ ಕೊಲೆ ಎಂಬಂತೆ ಬಿಂಬಿಸಲು ಯತ್ನಿಸಿದ್ದರು. ಪೊಲೀಸರ ತನಿಖೆಯಿಂದ ನಾಲ್ವರು ಕೊಲೆಗಡುಕರು ಸಿಕ್ಕಿಹಾಕಿಕೊಂಡರಲ್ಲದೆ, ಅವರೆಲ್ಲರಿಗೂ ಹಿಂದೂತ್ವ ಸಂಘಟನೆಗಳೊಂದಿಗೆ ಇರುವ ಲಿಂಕ್‌ಗಳನ್ನು ಬಯಲು ಮಾಡಿದ್ದರು.

ಕಾರ್ತಿಕ್ ರಾಜ್ ಎಂಬ ಬಿಜೆಪಿ ಸದಸ್ಯನನ್ನು ಅಕ್ಟೋಬರ್ 22, 2016ರಂದು ಮಂಗಳೂರಿನಲ್ಲಿ ಕೊಲೆ ಮಾಡಲಾಗಿತ್ತು, ಆತನ ಕೊಲೆಗಡುಕರನ್ನು ಹಿಡಿಯಬೇಕೆಂದು ಯಡ್ಡಿ, ಪ್ರತಾಪ್ ಸಿಮ್ಹ, ನಳಿನ್ ಕುಮಾರ್ ಕಟೀಲು ಸೇರಿದಂತೆ ಶೋಭಾ ಕೂಡ ಪ್ರತಿಭಟಿಸಿದ್ದಳು. ಕಟೀಲು ಪುಣ್ಯಾತ್ಮ ಮಂಗಳೂರು ಪೊಲೀಸ್ ಕಚೇರಿ ಮುಂದೆ ದೊಡ್ಡ ಗದ್ದಲ ಎಬ್ಬಿಸಿದ್ದಲ್ಲದೆ, ಮಾಧ್ಯಮಗಳ ಮುಂದೆ "ಕೊಲೆಗಡುಕರನ್ನು ಹಿಡಿಯದಿದ್ದರೆ ಜಿಲ್ಲೆಗೆ ಬೆಂಕಿ ಹಾಕುತ್ತೇನೆ" ಎಂದು ಬೆದರಿಸಿದ್ದ. ಯಡ್ಡಿ ಸಾಹೇಬರೂ ಸ್ವತಃ ತನಿಖೆ ಮಾಡಿದವರಂತೆ "ಕೇರಳದಿಂದ ಮಂಗಳೂರಿಗೆ ಜಿಹಾದಿಗಳು ನುಸುಳಿದ್ದು ಅವರು ಕಾರ್ತಿಕ್ ರಾಜ್‌ನನ್ನು ಕೊಂದಿದ್ದಾರೆ" ಎಂದು ಆರೋಪಿಸಿದ್ದರು. ಆದರೆ ತನಿಖೆಯಲ್ಲಿ ಗೊತ್ತಾಗಿದ್ದೇನೆಂದರೆ ಕಾರ್ತಿಕ್ ರಾಜ್‌ನ ಸಹೋದರಿ, ಆಕೆಯ ಪ್ರಿಯಕರ ಮತ್ತು ಆತನ ತಮ್ಮ ಸಂಚುರೂಪಿಸಿ ಆತನನ್ನು ಕೊಂದಿದ್ದರು. ಪೊಲೀಸರು ಆ ಮೂವರನ್ನು ಈಗ ಬಂಧಿಸಿದ್ದಾರೆ. ಇದೆಲ್ಲಾ ಗೊತ್ತಿದ್ದೂ ಶೋಭಾ ಕಾರ್ತಿಕ್ ರಾಜ್ ಕೊಲೆಯನ್ನು ಮುಸಲ್ಮಾನರ ತಲೆಗೆ ಕಟ್ಟುವ ಪ್ರಯತ್ನ ಮಾಡಿದ್ದಾಳೆ.

ಬಿಜೆಪಿ ಯುವ ಮೋರ್ಚಾದ ಸದಸ್ಯನಾಗಿದ್ದ ರವಿ ಮಗಳಿ ಎಂಬಾತನನ್ನೂ ಮುಸಲ್ಮಾನರು ಕೊಂದಿದ್ದಾರೆ ಎಂದು ಶೋಭಾ ಆರೋಪಿಸಿದ್ದಾರೆ. ಆದರೆ ಈ ದೇಶಭಕ್ತ ಚಡ್ಡಿ ರವಿ ಮಗಳಿ ಕುಡಿದ ಮತ್ತಿನಲ್ಲಿ ವಾಹನ ಚಲಾಯಿಸುತ್ತಿದ್ದಾಗ ಅಪಘಾತ ಸಂಭವಿಸಿ ಪ್ರಾಣ ಕಳೆದುಕೊಂಡಿದ್ದ. ಮರಣೋತ್ತರ ಪರೀಕ್ಷೆ ಅದನ್ನು ದೃಢಪಡಿಸಿತ್ತು, ಆದರೂ ಶೋಭಾ ಅದನ್ನು ಕೊಲೆ ಎಂದು ಪಟ್ಟಿ ಮಾಡಿದ್ದಾಳೆ.

ಯೋಗೀಶ್ ಗೌಡ ಎಂಬ ಬಿಜೆಪಿ ಸದಸ್ಯ ಮತ್ತು ಹುಬ್ಬಳ್ಳಿ ಜಿಲ್ಲಾ ಪಂಚಾಯತಿಯ ಮಾಜಿ ಸದಸ್ಯನನ್ನೂ ಮುಸಲ್ಮಾನರು ಕೊಂದಿದ್ದಾರೆ ಎಂಬುದು ಶೋಭಾಳ ದುಃಖ. ಆದರೆ ಪೊಲೀಸ್ ತನಿಖೆಯಲ್ಲಿ ಯೋಗೀಶ್ ಗೌಡನನ್ನು ಆಸ್ತಿ ವಿಚಾರದಲ್ಲಿ ಕೊಲೆ ಮಾಡಲಾಗಿತ್ತು ಎಂಬುದು ದೃಢಪಟ್ಟಿತ್ತಲ್ಲದೆ, ಎಂಟು ಜನರನ್ನು ಬಂಧಿಸಿದ್ದಾರೆ. ಅಷ್ಟೇ ಅಲ್ಲ, ಆ ಎಂಟು ಜನರೂ ಹಿಂದೂಗಳೇ!

ಮಡಿಕೇರಿಯಲ್ಲಿ ನವೆಂಬರ್ 10, 2015ರಂದು ಟಿಪ್ಪು ಜಯಂತಿ ಕಾರ್ಯಕ್ರಮ ನಡೆಯುತ್ತಿದ್ದಾಗ ಗಲಭೆ ನಡೆಯಿತು. ಆಗ ರಾಜು ಎಂಬಾತ ಆಸ್ಪತ್ರೆಯ ಛಾವಣಿಯಿಂದ ಕಾಲು ಜಾರಿ ಬಿದ್ದು ಸಾವಿಗೀಡಾಗಿದ್ದರು. ಇದೊಂದು ಅಪಘಾತ ಎಂದು ಜಿಲ್ಲಾ ಪೊಲೀಸ್ ಅಧಿಕಾರಿಗಳು ಸ್ಪಷ್ಟಪಡಿಸಿದ್ದರು. ಆದರೇನಂತೆ, ಶೋಭಾ ಪ್ರಕಾರ ಮುಸಲ್ಮಾನರು ರಾಜು ಎಂಬಾತನನ್ನು ಕೊಂದಿದ್ದಾರೆ.

ಹಾಗೆಯೇ ಅದೇ ಮಡಿಕೇರಿಯಲ್ಲಿ ಟಿಪ್ಪು ಜಯಂತಿ ಸಂದರ್ಭದಲ್ಲಿ ಕಲ್ಲು ತೂರಾಟ ಸಂಭವಿಸಿ ಡಿ.ಕೆ.ಕುಟ್ಟಪ್ಪ ಎಂಬ ಹಿಂದೂತ್ವ ಸಂಘಟನೆಯ ಸದಸ್ಯ ಆಯತಪ್ಪಿ ಎತ್ತರದಿಂದ ಬಿದ್ದು ಸತ್ತಿದ್ದ. ಆದರೆ ಆತನನ್ನೂ ಮುಸಲ್ಮಾನರು ಕೊಂದು ಹಾಕಿದರು ಎಂದು ಶೋಭಾ ಸುಳ್ಳು ಹೇಳಿದ್ದಾಳೆ.

ಇಷ್ಟಲ್ಲದೆ ಅಶ್ವತ್ (ಅತ್ತಿಬೆಲೆ), ಸಿ.ಎನ್.ಶ್ರೀನಿವಾಸ್ (ಬೆಂಗಳೂರು), ಚಿಕ್ಕತಿಮ್ಮೇಗೌಡ (ಬೆಂಗಳೂರು), ಶ್ರೀನಿವಾಸ್ ಪ್ರಸಾದ್ (ಬೊಮ್ಮನಹಳ್ಳಿ), ಹರೀಶ್ (ಆನೇಕಲ್), ಮಹದೇವ್ (ಕಲ್ಬುರ್ಗಿ), ರೌಡಿ ಶೀಟರ್ ರಮೇಶ್ ಬಂಡಿ (ಬಳ್ಳಾರಿ), ರಾಜೇಶ್ ಖೋಟಿಯಾನ್ (ಉಳ್ಳಾಲ)... ಇವರೆಲ್ಲರನ್ನೂ ಕೊಲೆ ಮಾಡಲಾಗಿದೆ ಎಂದು ಶೋಭಾ ತನ್ನ 23 'ಹುತಾತ್ಮರ' ಪಟ್ಟಿಯಲ್ಲಿ ಹೇಳಿದ್ದಾಳೆ. ಆದರೆ ಪೊಲೀಸರ ಪ್ರಕಾರ ಇವರೆಲ್ಲರ ಕೊಲೆಗಳು ನಡೆದದ್ದು ವೈರತ್ವ, ಆಸ್ತಿ ವಿವಾದ ಇತ್ಯಾದಿಗಳಿಂದಾಗಿಯೇ ಹೊರತು ಅವುಗಳಿಗೆ ಕೋಮುಕಳೆ ಅಂಟಿಲ್ಲ.

ಈ ಎಲ್ಲಾ 'ಹಿಂದೂ' ಹುತಾತ್ಮರಿಗೆ (ಕೊಲೆ ಆಗದಿರುವವರಿಗೂ, ಜೀವಂತ ಇರುವವರಿಗೂ) ಮಮ್ಮಲ ಮರುಗಿರುವ ಶೋಭಾ ಅದ್ಯಾತಕ್ಕೋ ಕೊಲೆಯಾದ ಇತರೆ ಹಿಂದೂಗಳನ್ನು ಮರೆತಿದ್ದಾಳೆ. ಆಕೆಗೆ ಇವರುಗಳನ್ನು ನೆನಪಿಸಬೇಕಿದೆ.

ಮೊದಲನೆಯವರು ಎಂ.ಎಂ.ಕಲ್ಬುರ್ಗಿ. ಹಿರಿಯ ವಿದ್ವಾಂಸರು, ಬರಹಗಾರರೂ ಆಗಿದ್ದ ಕಲ್ಬುರ್ಗಿಯವರನ್ನು ಆಗಸ್ಟ್ 30, 2015ರಂದು ದುಷ್ಕರ್ಮಿಗಳು ಅವರ ಮನೆಯಲ್ಲೇ ಕೊಂದುಹಾಕಿದರು. ಮೂಢನಂಬಿಕೆಯನ್ನು ವಿರೋಧಿಸುತ್ತಿದ್ದ, ಹಿಂದೂತ್ವವಾದಿಗಳನ್ನು ಖಂಡಿಸುತ್ತಿದ್ದ ಕಲ್ಬುರ್ಗಿಯವರಿಗೆ ಕೇಸರಿ ಸಂಘಟನೆಗಳಿಂದ ಜೀವ ಬೆದರಿಕೆ ಇತ್ತು, ಅವರನ್ನು ಕೊಂದು ಇಲ್ಲಿಗೆ ಎರಡು ವರ್ಷಗಳಾಗುತ್ತಾ ಬಂದಿದ್ದರೂ ಇಲ್ಲಿಯತನಕ ಒಬ್ಬರನ್ನೂ ಬಂಧಿಸಲಿಕ್ಕೆ ಪೊಲೀಸರಿಗೆ ಸಾಧ್ಯವಾಗಿಲ್ಲ. ಆದರೆ ಶೋಭಾ ಕಲ್ಬುರ್ಗಿ ಹೆಸರನ್ನೇ ಪ್ರಸ್ತಾಪಿಸಿಲ್ಲ, ಯಾಕೆಂದರೆ ಅವರ ಕೊಲೆಯ ಹಿಂದೆ ಹಿಂದೂತ್ವ ಸಂಘಟನೆಗಳ ಕೈವಾಡ ಇದೆ.

ಹರೀಶ್ ಪೂಜಾರಿ ಎಂಬ ಯುವಕನನ್ನು ನವೆಂಬರ್ 12, 2015ರಂದು ಕೊಲೆ ಮಾಡಲಾಗಿತ್ತು. ಆತನನ್ನೂ ಶೋಭಾ ಸ್ಮರಿಸಿಕೊಂಡಿಲ್ಲ, ಯಾಕೆಂದರೆ ಟಿಪ್ಪು ಜಯಂತಿ ಸಂದರ್ಭದಲ್ಲಿ ಎದ್ದಿದ್ದ ಗಲಾಟೆಯನ್ನು ಬಳಸಿಕೊಂಡು ಹರೀಶನನ್ನು ಕೊಂದು ಅದನ್ನು ಮುಸಲ್ಮಾನರ ತಲೆಗೆ ಕಟ್ಟಲು ಪ್ರಯತ್ನಿಸಿದ್ದು ಭುವಿತ್ ಶೆಟ್ಟಿ ಎಂಬಾತ. ಈ ಭುವಿತ್ ಶೆಟ್ಟಿ ಆರೆಸ್ಸೆಸ್‌ಗೆ ಸೇರಿದ ಭಜರಂಗದಳದ ಸದಸ್ಯ. ಆದ್ದರಿಂದಲೇ ಅಮಾಯಕ ಹರೀಶ್ ಪೂಜಾರಿ ಹಿಂದೂ ಆಗಿದ್ದರೂ ಆತನ ನೆನಪು ಶೋಭಾಗೆ ಆಗಿಲ್ಲ.

ವಿನಾಯಕ ಬಾಳಿಗಾ ಎಂಬ ಆರ್‌ಟಿಐ ಕಾರ್ಯಕರ್ತ ದೇವಸ್ಥಾನದ ದುಡ್ಡನ್ನು ಸ್ವಘೋಷಿತ ದೇಶ ಮತ್ತು ದೇವಭಕ್ತರು ಲೂಟಿ ಮಾಡಿದ್ದನ್ನು ಪತ್ತೆ ಹಚ್ಚಿದ್ದರು. ಎಲ್ಲಿ ತಾನು ಲೂಟಿ ಮಾಡಿದ ಗುಟ್ಟು ರಟ್ಟಾಗುತ್ತದೋ ಎಂದು ಕೆಲವರಿಗೆ ಸುಪಾರಿ ಕೊಟ್ಟು ಮಾರ್ಚ್ 21, 2016ರಂದು ಆತನ ಮನೆಯ ಹತ್ತಿರವೇ ಕೊಲೆ ಮಾಡಿಸಲಾಗಿತ್ತು. ಆದರೆ ಆತನನ್ನು ಶೋಭಾ ಕೊಲೆ ಆದ ನಿಷ್ಠಾವಂತ ಹಿಂದೂ ಎಂದು ಪಟ್ಟಿ ಮಾಡಿಲ್ಲ, ಯಾಕೆಂದರೆ ಬಾಳಿಗಾನ ಕೊಲೆ ಆರೋಪಿಗಳಲ್ಲಿ ಮೊದಲನೆ ಸ್ಥಾನದಲ್ಲಿರುವವನು ನರೇಶ್ ಶೆಣೈ. ಈತ ನಮೋ ಬ್ರಿಗೇಡ್‌ನ ಸ್ಥಾಪಕ ಮತ್ತು ಅಲ್ಪಸಂಖ್ಯಾತರ ವಿರುದ್ಧ ಬೆಂಕಿ ಉಗುಳುವ ಚಡ್ಡಿ ನಾಯಕ ಚಕ್ರವರ್ತಿ ಸೂಲಿಬೆಲೆಯ ಆಪ್ತ ದೋಸ್ತ್!

ಪ್ರವೀಣ್ ಪೂಜಾರಿಯದ್ದು ಇನ್ನೂ ದೊಡ್ಡ ದುರಂತ. ಬಿಜೆಪಿಯ ಸದಸ್ಯನಾಗಿದ್ದ ಈತ ಹೋದ ಲೋಕಸಭಾ ಚುನಾವಣೆಯ ಸಮಯದಲ್ಲಿ ಶೋಭಾ ಕರಂದ್ಲಾಜೆ ಪರವಾಗಿ ಪ್ರಚಾರ ಕೂಡ ಮಾಡಿದ್ದ. ಈತ ದನ ಸಾಗಿಸುತ್ತಿದ್ದ ಎಂದು ಆರೋಪಿಸಿ ಆಗಸ್ಟ್ 17, 2016ರಂದು ಸ್ವಘೋಷಿತ ಗೋಭಕ್ತರು ಮತ್ತು ಆರೆಸ್ಸೆಸ್‌ಗೆ ಸೇರಿದ ಹಿಂದೂ ಜಾಗರಣ ವೇದಿಕೆಯ ಸದಸ್ಯರು ಕೊಂದು ಹಾಕಿದ್ದರು. ಆದರೆ ಈ ಹಿಂದೂ ಹುತಾತ್ಮನ ಹೆಸರನ್ನೂ ಶೋಭಾ ಪಟ್ಟಿ ಮಾಡಿಲ್ಲ.

ಮುಂದಿನ ವರ್ಷ ನಡೆಯುವ ಚುನಾವಣೆಯಲ್ಲಿ ಗೆದ್ದು ಮತ್ತೆ ಮಂತ್ರಿ ಆಗುವ ಕನಸು ಕಾಣುತ್ತಿರುವ ಶೋಭಾ ಇಂತಹ ಹುಚ್ಚಾಟಗಳಿಂದ ಕರಾವಳಿಗೆ ಬೆಂಕಿ ಹಚ್ಚಲು ಯತ್ನಿಸುತ್ತಿದ್ದಾಳೆ. ಆಕೆಯ ಈ ಹುಚ್ಚು ನಾಡಿಗೆ ಆಪತ್ತು ತರುವುದು ಗ್ಯಾರಂಟಿ. ■

ಕಂಡಹಾಗೆ




• ಗೌರಿ ಲಂಕೇಶ್
editorlankesh@gmail.com

'ಎಲ್ಲಕ್ಕಿಂತ ಮಿಗಿಲು ಬೆಳಕು ಮತ್ತು ಗಾಳಿ'

ಬುದ್ಧ
ಈಗ ನೀನು
ಇಲ್ಲಿರುತ್ತಿದ್ದರೆ
ಇದೇ ಮಾತು ಹೇಳುತ್ತಿದ್ದೆ
ದ್ವೇಷದ ಬೀಜವನ್ನು
ಬುಡಸಮೇತ ಕಿತ್ತು ಹಾಕಲು
ಮನುಷ್ಯ-ಮನುಷ್ಯರ
ನಡುವೆ ನೀನೇ
ಎದೆಯೊಡ್ಡಿ ನಿಲ್ಲುತ್ತಿದ್ದೆ
ಏಕೆಂದರೆ ನಿನ್ನಲ್ಲಿ ಆ
ನಿಷ್ಕಾರಣ ಪ್ರೀತಿಯಿತ್ತು
ಸಕಲಜೀವಿಗಳಿಗೂ ಲೇಸನ್ನು
ಬಯಸುವ ಗುಣಾತ್ಮಕ
ನಡೆಯಿತ್ತು

ನಾವೆಲ್ಲಾ ಒಂದೇ ಗಾಳಿಯನ್ನು
ಉಸಿರಾಡುತ್ತೇವೆ
ಎಲ್ಲರಿಗೂ ಸಮಾನವಾಗಿ
ಪ್ರಕೃತಿದತ್ತವಾದ ಬೆಳಕಿನ
ಕೊಡುಗೆಯಿದೆ
ಇದನ್ನರಿಯದ ಅಲ್ಪಮಾನವರು
ಅಶಾಶ್ವತ ಬದುಕಿನಲ್ಲಿ
ಅಟ್ಟಹಾಸಿಗಳಾಗಿ ತಮ್ಮಂತಿರುವ
ಇನ್ನೊಬ್ಬರನ್ನು ಕೊಲ್ಲುತ್ತಾ
ತಾವು ಹೆಚ್ಚು- ಅವರು ಕಡಿಮೆ
ಎಂಬ ಕರಾಳ ಹೃದಯದ





ರಕ್ತ ಪಿಪಾಸೆಗೆ
ಮುನ್ನುಡಿ ಬರೆಯುತ್ತಿದ್ದಾರೆ


ಬುದ್ಧ
ಹೇಗಾದರೂ ನೀನೊಮ್ಮೆ ನೀನಿವರ
ಬುದ್ಧಿಮತ್ತೆಯಲ್ಲಿ ಸೇರಿಕೋ
ಇವರ ಹೃದಯವೇ ಆಗಿಬಿಡು
ಆಗ ಇವರ ನಾಲಿಗೆಯೂ ನಿಜ
ನುಡಿಯಬಹುದು
ಇವರ ಹೃದಯ ಕೃತಜ್ಞತೆಯಿಂದ
'ಎಲ್ಲಕ್ಕಿಂತ ಮಿಗಿಲು ಬೆಳಕು ಮತ್ತು ಗಾಳಿ'
ಎಂದು ಮಿಡಿಯಬಹುದು
ದ್ವೇಷದ ಬೀಜಗಳು ನೆಲಸಮವಾಗಬಹುದು.


■ ಜ್ಯೋತಿ ಗುರುಪ್ರಸಾದ್

ನಾಡು ಸುಡಲು ರೆಡಿ!










ಒಟ್ಟಿ ಚಾಂಡಾಲ ಕಲ್ಲಡ್ಕ ಪ್ರಭಾಕರ ಭಟ್ಟ ಬರಲಿರುವ ಅಸೆಂಬ್ಲಿ ಚುನಾವಣೆ ಗೆಲ್ಲುವ ಹಿಕಮತ್ತಿನಿಂದ ಕಲ್ಲಡ್ಕಕ್ಕೆ ಹಚ್ಚಿದ ಕೋಮು ಕಿಚ್ಚೀಗ ಬಿಜೆಪಿ ಭಂಡರ ಬಾಲಕ್ಕೆ ವ್ಯಾಪಿಸಿಬಿಟ್ಟಿದೆ. ಖುದ್ದು ಕುತಂತ್ರಿ ಭಟ್ಟನೇ ಈ ಮತಾಂಧ ಬೆಂಕಿಯ ಝಳ ತಾಳಲಾಗದೆ ತತ್ತರಿಸುತ್ತಿದ್ದಾನೆ! ಆತನ "ಹೊಡಿ ಮಗ ಹೊಡಿ... ಕಡಿ ಮಗ ಕಡಿ..." ಶಿಷ್ಯ ಸಂಕುಲದ ಯಡ್ಡಿ, ಶೋಭಾ, ಕುಟೀಲು... ವಗೈರೆ ಸಂಘ ಪರಿವಾರದ ಕೊಳ್ಳಿ ದೆವ್ವಗಳು ಗುರುವಿನ ಗಂಡಾಂತರ ನೋಡಲಾಗದೆ ಬಾಯ್ಬಾಯಿ ಬಡಿದುಕೊಳ್ಳುತ್ತಿದ್ದಾರೆ. ನಿಷೇಧಾಜ್ಞೆ ಉಲ್ಲಂಘಿಸಿ ಬಂಟ್ವಾಳದಲ್ಲಿ ಹಿಂದೂತ್ವದ ರ್‍ಯಾಲಿ ನಡೆಸಿ ಜನರನ್ನು ಪ್ರಚೋದಿಸಿದ ಪಾತಕದ ಆರೋಪ ಹೊತ್ತಿರುವ ಕಲ್ಲಡ್ಕ ಭಟ್ಟನನ್ನು ಬಂಧನದಿಂದ ಬಚಾಯಿಸಲು ಬಿಜೆಪಿ ಭೂಪರು ಬೊಬ್ಬಿರಿಯುತ್ತಿರುವುದು ಭಯಾನಕವಾಗಿದೆ.

ಯಡ್ಡಿ-ಶೋಭಾ ಜೋಡಿಯ ಪ್ರೇತ-ಭೂತ ಸ್ವರದ ಮಾತುಗಾರಿಕೆ ಕೋಮು ಭಾವನೆ ಕೆರಳಿಸುವುದು ಅದರ ಮೂಲ ಗುಣ-ಧರ್ಮ. ಈ ಜೋಡಿಯ ಮೂಲ ಉದ್ದೇಶವೂ ಅದೇ. ಆದರೆ ಅದಕ್ಕಿಂತ ಅಪಾಯಕಾರಿ ಎಂದರೆ, ಯಡ್ಡಿ, ಸೋಭಾ, ಕುಟೀಲು ಗ್ಯಾಂಗಿನ ಭಾಷಣ, ಹೇಳಿಕೆಗಳು ಈ ನೆಲದ ಕಾನೂನು-ಕಟ್ಟಳೆಗೇ ಸೆಡ್ಡು



ಅಮಾಯಕ ಶೂದ್ರ ಹುಡುಗರ ಛೂಬಿಟ್ಟು ಸಾಬರ ತಲೆ ತೆಗೆಯುವ ಕಲ್ಲಡ್ಕ ಭಟ್ಟ ಹಿಂದೂಗಳಿಗೂ ಕಂಟಕನಾಗಿದ್ದಾನೆ. ಇಂಥ ಭಟ್ಟನನ್ನು ಕಾನೂನು ವಿಚಾರಣೆ ಮುಂದಾದಾಗ ಯಡ್ಡಿ-ಸೋಭಾ ತಂಡ ತಡೆಯೊಡ್ಡುವುದು ಅಪರಾಧವೇ ಸರಿ. ಅಷ್ಟೇ ಅಲ್ಲ, ಸರ್ಕಾರಕ್ಕೆ ಸಂವಿಧಾನಕ್ಕೆ ಕಾನೂನಿಗೆ ಸೆಡ್ಡು ಹೊಡೆದು ನಿಂತಿರುವುದು ಈ ಕೇಸರಿ ಕೇಡರಿಗೆ ಮನುಷ್ಯತ್ವದಲ್ಲಿ, ಧರ್ಮದಲ್ಲಿ ಕಿಂಚಿತ್ತೂ ನಂಬಿಕೆ ಇಲ್ಲ ಎಂಬುದನ್ನು ಎತ್ತಿ ತೋರಿಸುತ್ತಿದೆ. ದುರಂತ ಎಂದರೆ, ಕಾನೂನಿನ ಆಡಳಿತ ಧ್ವಂಸ ಮಾಡುವ, ಸಮಾಜ ಒಡೆಯುವ, ಸಂವಿಧಾನದ ಪರಮಾಧಿಕಾರಕ್ಕೇ ಸವಾಲು ಒಡ್ಡುವ ಬಿಜೆಪಿ-ಆರ್‌ಎಸ್‌ಎಸ್-ಭಜರಂಗದಳವೇ ಮುಂತಾದ ತರಹೇವಾರಿ ಕೇಸರಿ ಗ್ಯಾಂಗುಗಳಿಗೆ ಸಿದ್ದು ಸರ್ಕಾರ ಸುಮ್ಮನೇ ಬಿಟ್ಟಿದೆ!


ಬಂಟ್ವಾಳದಲ್ಲಿ ನಿಷೇಧಾಜ್ಞೆ ಉಲ್ಲಂಘಿಸಿ ನಡೆದ ಬಿಜೆಪಿ ಸಭೆ

ಹೊಡೆಯುವಂತಿದೆ; ಸಾಂವಿಧಾನಿಕ ವ್ಯವಸ ಧಿಕ್ಕರಿಸುವಂತಿದೆ. ಅಲ್ಲಿಗೆ ಬಿಜೆಪಿಯ ಬೆಂಕಿ ನವಾಬಿಯರಿಗೆ ದಕ್ಷಿಣ ಕನ್ನಡ-ಉಡುಪಿ ಜಿ ಎಂದೆಂದೂ ಶಾಂತಿ-ನೆಮ್ಮದಿ ಮೂಡುವುದು ಬ ಎಂಬುದು ಸಂಶಯಾತೀತವಾಗಿ ಸಾಬೀತಾದ ಅಸೆಂಬ್ಲಿ ಎಲೆಕ್ಷನ್‌ತನಕ ಕರಾವಳಿಯ ಅವಳಿ ಜಿ ಕೋಮುಸಂಘರ್ಷ ನಡೆಯುತ್ತಿದ್ದರೆ ಎಮ್ಮೆಲ್ಲೆ ಬಂಪರ್ ಪಡೆಯಬಹುದೆಂಬ 'ದೂ(ದು)ರಾಲೋಚ ಕಲ್ಲಡ್ಕ ಭಟ್ಟ, ಯಡ್ಡಿ, ಸೋಭಾ ಸಂಗಡಿಗರದು.

ಹೋದಲ್ಲಿ-ಬಂದಲ್ಲಿ ಆರ್‌ಎಸ್‌ಎಸ್ ರಿಂಗ್ ಕಲ್ಲಡ್ಕ ಭಟ್ಟ ಮತ್ತವನ ಬಿಜೆಪಿ ಚೇಲಾಗಳದು ಉರುಹಚ್ಚಿದ ಹೇಳಿಕೆ-ಭಾಷಣ "ದಕ್ಷಿಣ ಕ ಹಿಂದೂಗಳ ಮಾರಣಹೋಮ ಆಗುತ್ತಿದೆ.... ಕೇರಳದಿಂದ ಬ್ಯಾರಿ ಕೊಲೆಗಡುಕರು ಬಂದು ಹಿ ಕೊಲ್ಲುತ್ತಿದ್ದಾರೆ...." ಎನ್ನುತ್ತ ಓಟ್‌ಬ್ಯಾಂಕ್ ಧಮ ಮಾಡುತ್ತಿದ್ದಾರೆ. ರಾಜ್ಯ ಬಿಜೆಪಿಯಲ್ಲಿ ಒಂಥರಾ ತಿರಸ್ಕಾರಕ್ಕೆ ಈಡಾಗಿರುವ ಯಡ್ಡಿ-ಶೋಭಾ ಕರಾ ಕಮ್ಯುನಲ್ ಕಾಳಗಗಳನ್ನು ಇವೋಜು ಬಳಸಿಕೊಳ್ಳುತ್ತಿದ್ದಾರೆ. ಬಂಟ್ವಾಳ-ಕಲ್ಲಡ್ಕದಲ್ಲಿ ಹೆಪ್ಪು ರಕ್ತದ ಮಡುವಲ್ಲಿ ಮೀನು ಹಿಡಿಯಲು ಹವಣಿಸು ಮಂಗಳೂರಲ್ಲಿ ಒಂದು ಭರ್ಜರಿ ಬಹಿರಂಗ ಶೋ ಹಿಂದೂತ್ವದ ಮೈಲೇಜ್ ಪಡೆಯುವ ಲೆಕ್ಕಾಚಾರ ಶೋಭಾ ಹಾಕಿಕೊಂಡಿದ್ದರು. ಇಂಥದೊಂದು ಕ್ರಿಮಿನಲ್ ಕೇಸಲ್ಲಿ ಬಿದ್ದಿರುವ ಕಲ್ಲಡ್ಕ ಭಟ್ಟನಿಗೂ ಪಾ ಅನಿವಾರ್ಯವಾಗಿತ್ತು. ನಿಷೇಧಾಜ್ಞೆ ಇದ್ದ ಮಂಗಳೂರಲ್ಲಿ ಬಹಿರಂಗ 'ಸೂತಕ ಸಮಾರಂಭ' ಬಿಜೆಪಿ ಪರಿವಾರಕ್ಕೆ ಅವಕಾಶವಾಗಲಿಲ್ಲ.

ಹಠಕ್ಕೆ ಬಿದ್ದ ಶೋಭಾ ತನ್ನ ಮುದಿ ದೊರೆ ಯ ಮಿಂಚಿಸುವ ಸಭೆಯೊಂದು ಮಂಗಳೂರಲ್ಲಿ ಮ ತೀರುವ ಕಾರ್ಯಾಚರಣೆ ನಡೆಸಿದರು. ಬಿಜೆಪಿಯ

ಸೋಗಲಾಡಿ ಸೋಭಕ್ಕ!!

ಸಂಸ್ಕೃತಿ-ಸಂಸ್ಕಾರ-ಶೀಲದ ಗುತ್ತಿಗೆ ಹಿಡಿದು ಹಾರಾಡುತ್ತಿರುವ ಸಂಘ ಪರಿವಾರದ ಪಾಲಿಟಿಕಲ್ ಪಡೆಯ ಮುಂಚೂಣಿ ಮಹಿಳಾಮಣಿ ಶೋಭಾ ಕರಂದ್ಲಾಜೆ ಬಾಯಿ ತೆರೆದರೆ ಸಾಕು, ಅಪದ್ಧ ಅಸಹ್ಯ ಅಶ್ಲೀಲ, ಅನಾಚಾರದ ಆಣಿಮುತ್ತುಗಳೇ ಉದುರುತ್ತವೆ. ಅಖಂಡ ಬ್ರಹ್ಮಚಾರಿಯಾದ ಸೋಭಕ್ಕ ಈಚೆಗೆ ಪಂಡಿತ್ವದ ಸಂಶೋಧನೆಗೆ ಇಳಿದಿದ್ದು ಬಿಜೆಪಿಯ ಸಂಸಾರಸ್ಥರ ಮುಜುಗರಕ್ಕೀಡು ಮಾಡಿತ್ತು. ಜನಪರ ಬದ್ಧತೆ, ಮನುಷ್ಯತ್ವದ ಯೋಚನೆ, ಕನಿಷ್ಠ ನಾಗರಿಕತೆಯೂ ಇಲ್ಲದ ಶೋಭಾ ನಾಲಿಗೆಗೆ ಮತೀಯ ವಾದದ ಸಾಣೆ ಹಿಡಿದು ಝಳಪಿಸುತ್ತಿರುವುದು ಮೇಲುನೋಟಕ್ಕೆ ಮೋಜೆನಿಸಿದರೂ ಆಳದಲ್ಲಿ ಅಪಾಯಕಾರಿಯಾಗಿದೆ. ಈ ಸ್ವಯಂ ಘೋಷಿತ ಚೆಡ್ಡಿ ಸರದಾರಿಣಿ ಎದುರಾಳಿ ಪಕ್ಷದವರ ಖಾಸಗಿ ಬದುಕನ್ನು ಕೆದಕಲು ಹೋಗಿ ತನ್ನ ಗಲೀಜು ವ್ಯಕ್ತಿತ್ವ ಪ್ರದರ್ಶಿಸುತ್ತಿದ್ದಾರೆ.

ಬಿಜೆಪಿ ಎಂದರೆ ದಲಿತರ ಬಗ್ಗೆ ಮೂಗು ಮುರಿವ ಪಾರ್ಟಿ ಎಂಬುದು ಸರ್ವವಿಧಿತ. ಈ ಜೀವ ವಿರೋಧಿ ಇಮೇಜ್‌ನಿಂದ ಹೊರಬರಲು ಮೋದಿ-ಶಾ ನಡೆಸಿರುವ ಸರ್ಕಸ್‌ನ ಗೊಂಬೆಗಳಂತಾಗಿದ್ದಾರೆ ಯಡ್ಡಿ-ಶೋಭಾ. ಈ ಜೋಡಿ ಕಂಡ-ಕಂಡ ದಲಿತರ ಮನೆಗೆ ನುಗ್ಗಿ ತಾವು ಮಡಿವಂತರಲ್ಲ ಎಂಬುದನ್ನು ತೋರಿಸಿಕೊಳ್ಳಲು ತಿಪ್ಪರಲಾಗ ಹಾಕಿ ಹಲ್ಲು ಕಿರಿಯುತ್ತಿದ್ದಾರೆ. ಗುಡಿಸಲುಗಳಲ್ಲಿ ವಾಸಿಸುವ ದಲಿತರು ಈ ಜೋಡಿಗೆ ಕಾಣಿಸುತ್ತಿಲ್ಲ. ಸೋಫಾ, ಕುರ್ಚಿ, ಡೈನಿಂಗ್ ಟೇಬಲ್ ಇರುವ ದಲಿತರ ಮನೆ ಆಯ್ಕೆ ಮಾಡಿಕೊಂಡು ಹಿಂದೂತ್ವದ ದಾಳಿ ಮಾಡುತ್ತಿರುವ ಯಡ್ಡಿ-ಶೋಭಾ ಅಲ್ಲಿ ತಿನ್ನುವುದು-ಉಣ್ಣುವುದು ಹೋಟೆಲ್ ಆಹಾರ ಎಂಬುದೂ ಜಗಜ್ಜಾಹೀರಾಗಿ ಹೋಗಿದೆ. ಸೋಬಕ್ಕನಂತೂ ದಲಿತರ ಮನೆಯಲ್ಲಿ ತಿಂಡಿ-ತೀರ್ಥ ಕೊಟ್ಟರೆ "..... ಬೇಡ.... ಬೇಡ.... ನಂಗೆ ಇವತ್ತು ಉಪವಾಸ ವ್ರತ...." ಎಂದು ನಿರಾಕರಿಸುತ್ತಾರೆ.

ಅಲ್ಲಿಗೆ ಸೋಭಕ್ಕನಿಗೆ ದಲಿತರ ಬಗ್ಗೆಗಿರುವ ಭಾವನೆ ತಂತಾನೆ ಸಾಬೀತಾಗಿ ಹೋಗಿದೆ! ಇಂಥ ಬೂಟಾಟಿಕೆ ಸಂಸ್ಕೃತಿಯ ಈಕೆ ಮತೀಯ ಸಂಘರ್ಷದ ಬಡಿವಾರ ಬಿರುಸಾಗಿ ಶುರು ಹಚ್ಚಿಕೊಂಡಿರುವುದು ಭೀಭತ್ಸವಾಗಿದೆ. ಕೋಮು ಕಲಹದಿಂದ ಕೆರಳಿರುವ ಬಂಟ್ವಾಳ-ಮಂಗಳೂರಿಗೆ ಆಗಾಗ ವಕ್ಕರಿಸುತ್ತ ಕ್ರಿಮಿನಲ್ ಭಾಷಣ ಕುಟ್ಟುತ್ತಿರುವುದರ ಹಿಂದಿನ ಗುಟ್ಟು ಈಗ ರಹಸ್ಯವಾಗೇನೂ ಉಳಿದಿಲ್ಲ. ಹಿಂದೂಗಳ ರಕ್ಷಿಸಲೆಂದಾಗಲಿ ಅಥವಾ ದಕ್ಷಿಣ ಕನ್ನಡದಲ್ಲಿ ನೆಮ್ಮದಿ ಮೂಡಿಸಲೆಂದಾಗಲಿ ಆಕೆ ಬರುತ್ತಿಲ್ಲ. ಕರಾವಳಿ ಬಿಜೆಪಿ-ಆರೆಸ್ಸೆಸ್‌ನ ಸರ್ವಶಕ್ತ ಡಾನ್ ಕಲ್ಲಡ್ಕ ಪ್ರಭಾಕರ ಭಟ್ಟನ ಸಂಪ್ರೀತಗೊಳಿಸುವ ಉದ್ದೇಶ ಆಕೆಯದು. ಈ ಭಟ್ಟನಿಗೋ ಸುಳ್ಳದ ಕಡೆಯ ಶೋಭಾ ಎಂದರೆ ಅಷ್ಟಕಷ್ಟೇ! ಯಡ್ಡಿ ಅತ್ಯಾಪ್ತೆಯಾಗಿ ಈ ಶೂದ್ರ ಹೆಂಗಸು ಬಿಜೆಪಿಯಲ್ಲಿ ಮೆರೆಯುವುದು ಭಟ್ಟನಿಗೆ ಸಹಿಸಲಾಗದು. ಇದನ್ನು ಅರ್ಥ ಮಾಡಿಕೊಂಡಿರುವ ಶೋಭಕ್ಕ ಈಗ ಕಷ್ಟಕ್ಕೆ ಬಿದ್ದು ಒದ್ದಾಡುತ್ತಿರುವ ಮತಾಂಧ ಭಟ್ಟನ ಪರವಹಿಸಿ ಅಬ್ಬರಿಸಿ ಬೊಬ್ಬಿರಿದರೆ ಲಾಭ ಹೆಚ್ಚೆಂದು ಲೆಕ್ಕ ಹಾಕಿದ್ದಾರೆ. ಒಂಥರಾ ತಿರುಬೋಕಿಯಂತಾಗಿರುವ ಆಕೆ ಸದ್ಯ ಭಟ್ಟ ತನಗೊಂದು ಪರ್ಮನೆಂಟ್ ಅಸೆಂಬ್ಲಿ ಕ್ಷೇತ್ರ ದಕ್ಷಿಣ ಕನ್ನಡದಲ್ಲೇ ಕೊಡಬಹುದೆಂಬ ಆಸೆ ಶೋಭಕ್ಕನಿಗೆ, ಪಾಪ.

ಸ್ವಾರ್ಥಸಾಧನೆಗಾಗಿ ಆಕೆ ದಕ್ಷಿಣ ಕನ್ನಡದ ಶಾಂತಿ-ನೆಮ್ಮದಿ-ಸೌಹಾರ್ದತೆಗೆ ಕೊಳ್ಳಿ ಇಡುತ್ತಿದ್ದಾರೆ. ಅಮಾಯಕ ಶೂದ್ರ ಹುಡುಗರ ಮಂಡೆ ತೊಳೆಯುವ ಭಾಷಣ ಪಾಷಾಣ ಎರಚುತ್ತಿದ್ದಾರೆ. ಹೊಡಿ-ಬಡಿ-ಕಡಿ-ರಕ್ತಪಾತ-ಮಾರಣ ಹೋಮದಂಥ ಚಾಂಡಾಲ ಭಾಷೆ ಬಳಸುತ್ತಿದ್ದಾರೆ. ಸಂವಿಧಾನದ ಪರಮಾಧಿಕಾರಕ್ಕೆ, ಕಾನೂನುಕಟ್ಟಳೆಗೆ ಸವಾಲು ಎಸೆದು ಕೋಮು ದಂಗೆಗೆ ಪ್ರಚೋದಿಸುತ್ತಿದ್ದಾರೆ. ಈ ನೆಲದ ಕಾನೂನುರೀತಿ-ನೀತಿ-ಮಾನವೀಯತೆಗಿಂತ ಕ್ರಿಮಿನಲ್ ಭಟ್ಟನೇ ಶ್ರೇಷ್ಠ ಎಂಬಂಥ ಪಾತಕ-ಮಾತುಗಾರಿಕೆ ನಡೆಸಿದ್ದಾರೆ. ಜಿಲ್ಲಾಡಳಿತ ಈಕೆಗೆ ಕಡಿವಾಣ ಹಾಕದಿದ್ದರೆ ಅನಾಹುತ ಖಂಡಿತ. ಶೋಭಾ ದಕ್ಷಿಣ ಕನ್ನಡಕ್ಕೆ ಕಾಲಿಡದಂತೆ ನಿಷೇಧ ಹೇರಬೇಕಾದ ಅನಿವಾರ್ಯತೆ ಎದುರಾಗಿದೆ. ಇದು ಗುಪ್ತಚರ ದಳಕ್ಕೂ ಪಕ್ಕಾ ಆಗಿರುವ ಸಂಗತಿ.

ಬಿಜೆಪಿಯಲ್ಲಿ ಕಿಮ್ಮತ್ತು ಕಳಕೊಂಡಿರುವ ಶೋಭಾ ಅಸ್ತಿತ್ವಕ್ಕಾಗಿ ಯಾರ್‍ಯಾರದೋ ವೈವಾಹಿಕ ಬದುಕು, ಕೌಟುಂಬಿಕ ಜೀವನ ಗೇಲಿ ಮಾಡಿ ತಾನೆಂಥ ಗಲೀಜು ಯೋಚನೆಯ ಸಂಸ್ಕೃತಿಯವಳೆಂದು ತೋರಿಸಿಕೊಳ್ಳುತ್ತಿದ್ದಾರೆ. ಯಡ್ಡಿ ಒಬ್ಬರನ್ನು ಬಿಟ್ಟರೆ ಈಕೆಗೆ ದಲಿತರು, ಹಿಂದೂಗಳು, ಕಲ್ಲಡ್ಕ ಭಟ್ಟ, ಸಂಘ ಪಡೆ.... ಹೀಗೆ ಯಾರ ಮೇಲು ಪ್ರೀತಿ-ಗೌರವವಿಲ್ಲ. ದಿನೇಶ್ ಗುಂಡೂರಾವ್ ಮತ್ತು ಪರಮೇಶ್ವರ್‌ರ ವೈವಾಹಿಕ ಬದುಕಿನಲ್ಲಿ ಧಮ ಹುಡುಕಾಡಿದ ಈ ಬ್ರಹ್ಮಚಾರಿಣಿ ನಗೆಪಾಟಲಿಗೀಡಾ ಮಾತಾಡುವಾಗ ಕನಿಷ್ಠ ನಾಚಿಕೆ, ಮನುಷ್ಯತ್ವ, ಶಿಷ್ಟಾಚಾರ ಇಲ್ಲದ ಸೋಭಕ್ಕ ಭಾರತೀಯ ಸಂಸ್ ವ್ಯಾಖ್ಯಾನ ಮಾಡೋದೇ ಬಂಡಲ್‌ಬಾಜಿ.

"ನಾನು ಮುಸ್ಲಿಂ ಹುಡುಗಿ ಮದುವೆ ಆಗಿ ಬಹಿರಂಗ ಸತ್ಯ.... ಅದ್ರಲ್ಲಿ ಮುಚ್ಚು-ಮರೆಯಿಲ್ಲ... ಪ್ರಾಯದ ದಿನಗಳಲ್ಲಿ ದಲಿತರ ಹೆಣ್ಣು ಮದುವೆ ಅವಕಾಶ-ಸಂದರ್ಭ ಬಂದಿದ್ರೆ ಅದೇ ಆಗ್ತಿದ್ದೆ.... ಮದ್ವೆಯಾಗಿ ದಶಕಗಳು ಉರುಳಿವೆ.... ದ ಅನ್ಯೋನ್ಯವಾಗಿದೆ... ಶೋಭಾಗಿನ್ನೂ ಮದುವೆಯ ದಲಿತರ ವರಿಸುವ ಅವಕಾಶ ಆಕೆಗಿನ್ನೂ ಇದೆ....." ದಿನೇಶ್ ಗುಂಡೂರಾವ್ ಸರಿಯಾಗಿ ಶೋ ಝಾಡಿಸಿದ್ದಾರೆ. ಕನಿಷ್ಠ ಲಜ್ಜೆ ಇದ್ದವರಾಗಿದ್ದರೆ ಈ ತಿರು ತಲೆತಗ್ಗಿಸಿ ತಪ್ಪು ತಿದ್ದಿಕೊಳ್ಳುತ್ತಿದ್ದರು.

ಆದರೆ ಎಲ್ಲ ಬಿಟ್ಟಿರುವ ಶೋಭಾ ಭಂಡಾಟ ಮಾಡಿಕೊಂಡಿದ್ದಾರೆ. ಆಚಾರವಿಲ್ಲದ ನೀಚ ಮನಸೋಇಚ್ಛೇ ಹೊರಳಾಡಿಸುತ್ತಿದ್ದಾರೆ. ಇದೇನಾ ಹಿಂದೂತ್ವ ಸಂಸ್ಕೃತಿ?! ಶೋಭಾರ ಅಶ್ಲೀಲ ಮಾತುಗಳಿಂದ 'ಕೇಶವ ಕೃಪಾ'ದ ಕ ಕನಲಿಹೋಗಿದ್ದಾರೆಂಬ ಗುಸುಗುಸು ನಡೆದಿದೆ; ಆಕೆ ಮೂಗುದಾರ ಕೇಶವ ಕೃಪದಲ್ಲಿ ಹೊಸೆಯಲಾಗುತ್ತಿದೆ ಯಡ್ಡಿ ವಿರೋಧಿ ಚೆಡ್ಡಿಗಳಿಗೀಗ ಶೋಭಕ್ಕನ ವಿಚಾರವೇ ಅಸ್ತ್ರದಂತಾಗಿದೆ.

ದೇವದುರ್ಗದ ಶಾಸಕ ಶಿವನಗೌಡ ನಾಯಕನಿಂದ ಹಗಲು ನಾಟಕ

ದೇವದುರ್ಗ ಕ್ಷೇತ್ರ ಒಂದು ವಿಷಯದಲ್ಲಿ ದಾಖಲೆ ಬರೆದಿದೆ. ರಾಜ್ಯದಲ್ಲಿಯೇ ಅತಿಹೆಚ್ಚು ಉಪ ಚುನಾವಣೆಗಳನ್ನು ಎದುರಿಸಿದ ಕ್ಷೇತ್ರ ಇದೆಂಬುದೇ ದಾಖಲೆ. ರಾಯಚೂರು ಜಿಲ್ಲೆಯ ಅತೀ ಹಿಂದುಳಿದ ತಾಲ್ಲೂಕು ದೇವದುರ್ಗ; ಅಪೌಷ್ಟಿಕತೆಯಲ್ಲಿ ರಾಜ್ಯಕ್ಕೆ ಮೊದಲ ಸ್ಥಾನ ಪಡೆದೆಲ್ಲಾ ಕುಖ್ಯಾತಿಗೆ ಒಳಗಾಗಿರುವ ಈ ತಾಲ್ಲೂಕಿನ ಮತದಾರರು ಪದೇ ಪದೇ ಬಂದು ಓಟು ಹಾಕಿದ್ದೇ ಬಂದದ್ದು. ಬದಲಿಗೆ ಅವರಿಗೆ ಏನಾದರೂ ಸಿಕ್ಕಿತಾ ಎಂದು ನೋಡಿದರೆ ಕಾಣುವುದು ಸೊನ್ನೆ.

ಇದರ ಹಾಲಿ ಶಾಸಕ ಬಿಜೆಪಿಯಿಂದ ಆಯ್ಕೆಯಾಗಿರುವ ಶಿವನಗೌಡ ನಾಯಕ. ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಸಮಾಜ ಕಲ್ಯಾಣ ಇಲಾಖೆ, ಲೋಕೋಪಯೋಗಿ ಇಲಾಖೆ ಇತ್ಯಾದಿಗಳಿಂದ ಬರುವ ಮಂಜೂರ ಅನುದಾನವನ್ನು ತಿಂದು ತೇಗಲು ಹೊಂಚು ಹಾಕಿರುವ ಈತ ಹೊಸ ವರಸೆ ಶುರುಹಚ್ಚಿಕೊಂಡಿದ್ದಾನೆ. ಜನರ ಕೆಲಸ ಮಾಡದೇ ದುಡ್ಡು ನುಂಗುವುದರಲ್ಲೇ ಕಾಲ ಕಳೆದ ಈತ ಕಳೆದ ಒಂದು ತಿಂಗಳಿಂದ ನಿರಂತರವಾಗಿ ಧರಣಿ ಕೂತಿದ್ದಾನೆ. ಯಾಕೆ ಎಂದು ಹೇಳಿದರೆ ನೀವು ಬೆಕ್ಕಸ ಬೆರಗಾಗಿ ಬೀಳುತ್ತೀರಿ. ತನ್ನ ಕ್ಷೇತ್ರಕ್ಕೆ ಬಂದಿರುವ ಅಭಿವೃದ್ಧಿ ಹಣವನ್ನು ಜಿಲ್ಲಾಧಿಕಾರಿ ಬಿಡುಗಡೆ ಮಾಡುತ್ತಿಲ್ಲ ಎಂದು ಪ್ರತಿಭಟನೆಗೆ ಇಳಿದಿದ್ದಾನೆ. ಇದೆಲ್ಲಾ ಮುಂದಿನ ಎಲೆಕ್ಷನ್‌ನಲ್ಲಿ ಜನರಿಗೆ ಮಣ್ಣೆರಚಿ ಓಟು ಗಿಟ್ಟಿಸಿಕೊಳ್ಳಲು ಮಾಡುತ್ತಿರುವ ಹಗಲು ನಾಟಕ ಎಂದೆಲ್ಲಾ ಜನ ಮಾತಾಡಿಕೊಳ್ಳುತ್ತಿದ್ದಾರೆ.

ದೇವದುರ್ಗ ಹೀಗಿದೆ


ಈಗಲೂ ಅತಿಹೆಚ್ಚಿನ ದೊಡ್ಡಿಗಳು (ಬೆಟ್ಟದ ಮೇಲೆ ವಸತಿಸಲುಗಳು) ಇರುವ ಇಲ್ಲಿ ಕುಡಿಯುವ ನೀರು, ವಿದ್ಯುತ್ ಮಾತ್ರವಲ್ಲದೇ ದಾರಿಗಳು ಸಹ ಇಲ್ಲದ ಬಹಳಷ್ಟು ಕುರಿಗಾಹಿಗಳು ವಾಸ ಮಾಡುತ್ತಿದ್ದಾರೆ. ಎಸ್ಟಿ ಮೀಸಲು ಕ್ಷೇತ್ರದಲ್ಲಿ ಗೆದ್ದ ಶಿವನಗೌಡ ನಾಯಕ ಜನತೆಯ ಕಷ್ಟ ಕೇಳುವುದನ್ನು ಬಿಟ್ಟು ಹಣ ಮಾಡುವ ದಂಧೆಗೆ ಮೀಸಲಾಗಿದ್ದಾನೆ. ಈ ಭಾಗದ ಶಿಕ್ಷಣದ ಪರಿಸ್ಥಿತಿ ತೀರಾ ಕಳವಳಕಾರಿಯಾಗಿದೆ. ಒಮ್ಮೊಮ್ಮೆ ಆವರಿಸುವ ಬರಕ್ಕೆ ಈ ಭಾಗದ ಜನ ತತ್ತರಿಸಿಹೋಗುತ್ತಾರೆ. ಗುಳೆ ಹೋಗುವುದು ಇಲ್ಲಿ ಸರ್ವೆಸಾಮಾನ್ಯವಾಗಿಬಿಟ್ಟಿದೆ. ಮೌಢ್ಯಾಚರಣೆಗಳು, ಮೂಢನಂಬಿಕೆಗಳು ತುಂಬಿ ತುಳುಕುತ್ತಿವೆ. ಇವನ್ನೆಲ್ಲಾ ನಿವಾರಿಸಲೆಂದು ಬಂದ ಹೆಚ್ಚುವರಿ ಹಣವನ್ನೆಲ್ಲಾ ಇಲ್ಲಿನ ರಾಜಕಾರಣಿಗಳು, ಗುತ್ತಿಗೆದಾರರು, ಕೆಲ ಎನ್‌ಜಿಓಗಳು ತಿಂದು ಹಾಕಿವೆ. ಇದನ್ನು ಸರಿಪಡಿಸಬೇಕಾದರೆ ಸಮಗ್ರ ಕಾಯಕಲ್ಪವೇ ಬೇಕಿದೆ.

ಉಸುಕಿಕಾಗಿ ಮುಸುಕಿನ ಗುದ್ದಾಟ

ಕೃಷ್ಣ ನದಿಯಿಂದ ಮರಳು ಬಾಚಿ ದುಡ್ಡು ಮಾಡುವುದರಲ್ಲಿ ಈತ ಎತ್ತಿದ ಕೈ. ಆದರೆ ತನ್ನ ಸಂಬಂಧಿಯೇ ಆದ ಕಾಂಗ್ರೆಸ್‌ನಿಂದ ಸಂಸದನಾಗಿರುವ ಬಿ.ವಿ.ನಾಯಕ್‌ಗೂ ಈತನಿಗೂ ಯಾವಾಗಲು ಅಕ್ರಮ ದುಡ್ಡು ಯಾರಿಗೆ ತಲುಪಬೇಕು ಎನ್ನುವುದರಲ್ಲಿ ಸದಾ ಜಗಳ. ಈ ಜಗಳ ಈಗ ತಾರಕಕ್ಕೇರಿದೆ. ಒಂದು ವೇಳೆ ಈ ಬಾರಿ ತಾನು ಚುನಾವಣೆಯಲ್ಲಿ ಸೋತು ಬಿಟ್ಟರೆ ಎಲ್ಲಿ ಉಸುಕಿನ ವ್ಯವಹಾರ ಕೈತಪ್ಪಿಬಿಡುವುದೋ ಎಂಬ ಭಯ ಸದಾ ಈತನನ್ನು ಕಾಡುತ್ತಿದೆ. ಹಲವು ಸೋಲು-ಗೆಲುವುಗಳನ್ನು ಕಂಡಿರುವ ಈತನಿಗೆ ಸೋಲನ್ನು ಅರಗಿಸಿಕೊಳ್ಳಲೇ ಆಗುತ್ತಿಲ್ಲ. ಹಾಗಂತ ಕ್ಷೇತ್ರದಲ್ಲಿ ತಿರುಗಾಡಿ ಜನಪರ ಕೆಲಸಗಳನ್ನು ಮಾಡಲು ಸಹ ಆಗುತ್ತಿಲ್ಲ. ಹಾಗಾಗಿ ಹಾವು ಸಾಯಬಾರದು, ಕೋಲು ಮುರಿಯಬಾರದು ಎಂಬಂತೆ ನಾಟಕ ಶುರು ಮಾಡಿದ್ದಾನೆ. ತಾನು ಜನರ ಪರವಾಗಿ ಕೆಲಸ ಮಾಡಲು ಸಿದ್ಧನಿದ್ದೇನೆ, ಆದರೆ ಜಿಲ್ಲಾಧಿಕಾರಿ ಮತ್ತು ಸಿ.ಇ.ಓಗಳು ಕಾಂಗ್ರೆಸ್‌ನ ಏಜೆಂಟ್‌ಗಳಾಗಿದ್ದಾರೆ ಎಂದೆಲ್ಲಾ ಬೊಬ್ಬೆ ಹೊಡೆಯುತ್ತಿದ್ದಾನೆ. ಇಷ್ಟು ದಿನ ಇಲ್ಲದ ಅಭಿವೃದ್ಧಿ ಕೆಲಸ ಈಗ ಇದ್ದಕ್ಕಿದ್ದಂತೆ ಶಿವನಗೌಡನಿಗೆ ನೆನಪಾಗಿಬಿಟ್ಟಿದೆ. ಅದಕ್ಕಾಗಿ 'ಬೃಹತ್ ಹೋರಾಟಕ್ಕೆ' ಕೈ ಹಾಕಿದ್ದಾನೆ.

ಅಂಗನವಾಡಿ ಮಕ್ಕಳ ಆಹಾರವನ್ನು ಬಿಡದ ಕಳ್ಳರು

ಈತ ಎಂತಹ ಪರಮ ಭ್ರಷ್ಟನೆಂದರೆ ಅಂಗನವಾಡಿ ಮಕ್ಕಳಿಗೆ ಬರುವ ಆಹಾರದ ಹಣವನ್ನು ಸಹ ಬಿಟ್ಟಿಲ್ಲ. ರಾಜ್ಯದಲ್ಲಿ ಅಪೌಷ್ಟಿಕತೆಗೆ ಒಳಗಾದ ತಾಲ್ಲೂಕುಗಳಿಗೆ ಹೆಚ್ಚಿನ ಆಹಾರ ಸಾಮಗ್ರಿಗಳನ್ನು ಒದಗಿಸಲಾಗುತ್ತಿದೆ. ಈ ಆಹಾರ ಸರಬರಾಜು ಮಾಡುವ ಗುತ್ತಿಗೆ ಪಡೆಯಲು ಪ್ರತಿವರ್ಷ ಈತನಿಗೂ ಸಂಸದ ಬಿ.ವಿ.ನಾಯಕ್‌ನಿಗೂ ಜಿದ್ದಾಜಿದ್ದಿ ನಡೆಯುತ್ತದೆ. ಪಾಪ ಅಪೌಷ್ಟಿಕ ಮಕ್ಕಳು ತಿನ್ನುವ ಆಹಾರದಲ್ಲಿಯೂ ಕದಿಯುತ್ತಾರೆ ಎಂದರೆ ಇವರು ಎಂತಹ ಕಚಡಾರಿರಬೇಕು ನೀವೇ ಯೋಚಿಸಿ. ನಿಜ ಎಂದರೆ ದೇವದುರ್ಗ ತಾಲ್ಲೂಕು ಇಷ್ಟು ಹಿಂದುಳಿಯಬೇಕಾದರೆ ಅದಕ್ಕೆ ಕಾರಣ ರಾಜಕೀಯ ನಾಯಕರು. ಶಾಸಕರಾಗುವುದು ಜನರ ಹಣವನ್ನು ಲೂಟಿ ಮಾಡುವುದಕ್ಕೆ ಲೈಸೆನ್ಸ್ ಇದ್ದಂತೆ ಎಂಬ ಸನ್ನಿವೇಶ ಎಲ್ಲ ಕಡೆಗಳಿಗಿಂತ ಇಲ್ಲಿ ಹೆಚ್ಚು



ಅನ್ವಯಿಸುತ್ತದೆ. ಅದಕ್ಕಾಗಿಯೇ ಈ ಖದೀಮ ಹೇಗಾದರೂ ಮಾಡಿ ಗೆಲ್ಲಲೇಬೇಕೆಂದು ಹಠತೊಟ್ಟು ಕೂತಿದ್ದಾನೆ.

ಶಿವನಗೌಡನ ಹಿಸ್ಟರಿ

ಅಧಿಕಾರಕ್ಕಾಗಿ ಏನೆಲ್ಲಾ ಮಾಡುವವರನ್ನು ನಾವು ನೋಡಿದ್ದೇವೆ. ಎಂತಹವರ ಕಾಲಿಗೆ ಬೀಳುವವರನ್ನೂ ನೋಡಿದ್ದೇವೆ. ಆದರೆ ಈತನ ಕಥೆಯೇ ಬೇರೆ. ಒಂದು ಕಡೆ ಈತ ರಾಯಚೂರು ಎಂಪಿ ಎಲೆಕ್ಷನ್‌ಗೆ ಸ್ಪರ್ಧಿಸಿದ್ದಾಗ ತೆಲುಗು ಚಿತ್ರನಟ ಪವನ್ ಕಲ್ಯಾಣ್ ಕರೆತಂದು ಪ್ರಚಾರ ಮಾಡಿಸಿದ್ದ. ಇನ್ನೊಂದು ಕಡೆ ಜಿಲ್ಲೆಯ ಬಲಾಢ್ಯ ಸಮುದಾಯವಾದ ಕುರುಬರ ಪೀಠಾಧಿಪತಿಯ ಪಾದಕ್ಕೆ ಬಿದ್ದು ಬೆಂಬಲ ಕೇಳಿದ್ದ. ಮತ್ತೊಂದೆಡೆ, ಲಿಂಗಾಯತ ಮಠಕ್ಕೂ ಉರುಳುಸೇವೆ ಮಾಡಿ ಮತಗಳನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳಲು ಹವಣಿಸಿದ್ದ. ಇಷ್ಟೇ ಆಗಿದ್ದರೆ ಸಮಸ್ಯೆ ಆಗುತ್ತಿರಲಿಲ್ಲ. ಆದರೆ ಏನಾದರೂ ಮಾಡಿ ಗೆಲ್ಲಲೇಬೇಕೆಂಬ ಹಠಕ್ಕೆ ಬಿದ್ದ ಈತ ಯಾರೋ ಪಾಪಿಗಳು ಹೇಳಿದ


> ದೇವದುರ್ಗದಲ್ಲಿ ಕುಡಿಯುವ ನೀರು, ವಿದ್ಯುತ್ ಮಾತ್ರವಲ್ಲದೇ ದಾರಿಗಳು ಸಹ ಇಲ್ಲದ ಬಹಳಷ್ಟು ಕುರಿಗಾಹಿಗಳು ವಾಸ ಮಾಡುತ್ತಿದ್ದಾರೆ. ಎಸ್ಟಿ ಮೀಸಲು ಕ್ಷೇತ್ರದಲ್ಲಿ ಗೆದ್ದ ಶಿವನಗೌಡ ನಾಯಕ ಜನತೆಯ ಕಷ್ಟ ಕೇಳುವುದನ್ನು ಬಿಟ್ಟು ಹಣ ಮಾಡುವ ದಂಧೆಗೆ ಮೀಸಲಾಗಿದ್ದಾನೆ. ಈ ಭಾಗದ ಶಿಕ್ಷಣದ ಪರಿಸ್ಥಿತಿ ತೀರಾ ಕಳವಳಕಾರಿಯಾಗಿದೆ. ಒಮ್ಮೊಮ್ಮೆ ಆವರಿಸುವ ಬರಕ್ಕೆ ಈ ಭಾಗದ ಜನ ತತ್ತರಿಸಿಹೋಗುತ್ತಾರೆ. ಗುಳೆ ಹೋಗುವುದು ಇಲ್ಲಿ ಸರ್ವೆಸಾಮಾನ್ಯವಾಗಿಬಿಟ್ಟಿದೆ. ಮೌಢ್ಯಾಚರಣೆಗಳು, ಮೂಢನಂಬಿಕೆಗಳು ತುಂಬಿ ತುಳುಕುತ್ತಿವೆ. ಇವನ್ನೆಲ್ಲಾ ನಿವಾರಿಸಲೆಂದು ಬಂದ ಹೆಚ್ಚುವರಿ ಹಣವನ್ನೆಲ್ಲಾ ಇಲ್ಲಿನ ರಾಜಕಾರಣಿಗಳು, ಗುತ್ತಿಗೆದಾರರು, ಕೆಲ ಎನ್‌ಜಿಓಗಳು ತಿಂದು ಹಾಕಿವೆ.ಜನರ ಬಡತನ, ಅಜ್ಞಾನಗಳನ್ನೆಲ್ಲಾ ಈ ರೀತಿಯ ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡು ಹೇಗೆಲ್ಲ ಅನಾಹುತಗಳನ್ನು ಸೃಷ್ಟಿಸುತ್ತಾರೆ ಎಂಬುದಕ್ಕೆ ದೇವದುರ್ಗ ಒಂದು ಉದಾಹರಣೆಯಾಗಿ ನಿಂತಿದೆ. ಕಾಲ ಮುಂದಕ್ಕೆ ಹೋಗುತ್ತಿದ್ದರೂ, ಎಲ್ಲೆಡೆ ಅಭಿವೃದ್ಧಿ ಎಂಬ ಪದಗುಚ್ಛಗಳು ಹರಿದಾಡುತ್ತಿದ್ದರೂ ದೇವದುರ್ಗಕ್ಕೆ ಬಿಜೆಪಿ ಪಕ್ಷದ 'ಅಚ್ಚೆ ದಿನ'ಗಳ ಕನಸು ಸಹ ಕಾಣಲಾಗದಿರುವುದು ದುರದೃಷ್ಟಕರ.


ಈತ ತಾನೇನು ಮಾಡುತ್ತೇನೆ ಎಂಬುದೇ ಗೊತ್ತಿಲ್ಲದೇ ಮಾಡುವಷ್ಟು ಅಧಿಕಾರದ ಅಮಲೇರಿಸಿಕೊಂಡಿದ್ದಾನೆ.


ಸುಳ್ಳು ಲೆಕ್ಕ-ಹಣ ಗುಳುಂ

ದೇವದುರ್ಗ ತಾಲ್ಲೂಕು ಒಂದರಲ್ಲೇ 50 ಸಾವಿರ ಆಶ್ರಯ ಮನೆಗಳನ್ನು ನಿರ್ಮಿಸಿದ್ದೇವೆಂದು ಸರ್ಕಾರಿ ಅಂಕಿಅಂಶಗಳು ಹೇಳುತ್ತವೆ. ಆದರೆ ನಿಜವಾಗಿಯೂ 10 ಸಾವಿರದಷ್ಟೂ ಸಹ ಮನೆಗಳು ಸಿಕ್ಕಿಲ್ಲ ಎಂದು ಸ್ಥಳೀಯ ಪತ್ರಿಕೆಗಳಲ್ಲಿ ವರದಿಯಾಗುತ್ತಿದೆ. ಸುಳ್ಳು ಲೆಕ್ಕ ತೋರಿಸಿ ಉಳಿದ ಹಣ ನುಂಗುವುದರಲ್ಲಿ ಶಿವನಗೌಡ ನಾಯಕ್ ಬ್ಯುಸಿಯಾಗಿದ್ದಾನೆ. ನಿರ್ಮಿಸಿಕೊಟ್ಟ ಮನೆಗಳು ಸಹ ಕೇವಲ ಸ್ವಜಾತೀಯ (ವಾಲ್ಮೀಕಿ ನಾಯಕರು) ಮತ್ತು ಅವನ ಬೆಂಬಲಿಗರ ಪಾಲಾಗಿವೆ ಎಂಬುದು ಜನತೆಯ ಆರೋಪ

ವರ್ಷ ನಡೆಯುವ ಚುನಾವಣೆಯಲ್ಲಿ ತನ್ನದೇ ಬಿಜೆಪಿಯಿಂದ ಮತ್ತು ಪ್ರಬಲ ಎದುರಾಳಿ ಜೆಡಿಎಸ್‌ನಿಂದ ಶಾಸಕ ಸ್ಥಾನಕ್ಕೆ ಪೈಪೋಟಿ ಎದುರಾಗಿದೆ. ಬಿಜೆಪಿಯಿಂದ ಜಿಪಂ ಸದಸ್ಯನಾಗಿರುವ ವೆಂಕಟೇಶ್ ಪೂಜಾರ್ ಜೆಡಿಎಸ್‌ಗೆ ಹಾರಿ ಇದೇ ಕ್ಷೇತ್ರದಿಂದ ಟಿಕೇಟ್ ಗಿಟ್ಟಿಸುವ ಉಮೇದಿಯಲ್ಲಿದ್ದಾನೆ. ಕಳೆದು ತಿಂಗಳು ತಮ್ಮನ ಮದುವೆ ನೆಪದಲ್ಲಿ ಎಚ್.ಡಿ.ಕುಮಾರಸ್ವಾಮಿಯನ್ನು ಕರೆಸಿ ಇನ್ನಿಲ್ಲದಂತೆ ಉಪಚರಿಸಿದ್ದ. ಕ್ಷೇತ್ರದಲ್ಲಿ ಸಾಕಷ್ಟು ಓಡಾಡುತ್ತ ಒಂದಷ್ಟು ಯುವಕರನ್ನು ಕಲೆಹಾಕಿ ದುಡ್ಡು ಚೆಲ್ಲಿ ಈಗಾಗಲೇ ಪ್ರಚಾರ ಶುರುಮಾಡಿದ್ದಾನೆ. ಇನ್ನೊಂದೆಡೆ ಕಳೆದ ಬಾರಿಯ ಉಪಚುನಾವಣೆಯಲ್ಲಿ ಸಾಕಷ್ಟು ಪೈಪೋಟಿ ನೀಡಿ ಸೋತಿರುವ ಕಾರೆಮ್ಮ ಗೋಪಾಲಕೃಷ್ಣ ಶಿವನಗೌಡನ







ಮೂಢನಂಬಿಕೆಗೆ ಬಿದ್ದು ತನ್ನ ಕಾಲನ್ನೇ ಕಳೆದುಕೊಳ್ಳುವ ಸ್ಥಿತಿಗೆ ಬಂದಿದ್ದಾನೆ. ಅದೇನೆಂದರೆ ದೇವಗಣಾಪುರ ದೇವಸ್ಥಾನದಲ್ಲಿ ಅರ್ಚಕರು ಮಂತ್ರಿಸಿದ ತಾಯತವನ್ನು ತನ್ನ ತೊಡೆಯೊಳಗೆ ಕಟ್ಟಿಕೊಂಡರೆ ತಾನು ಗೆಲ್ಲುತ್ತೇನೆ ಎನ್ನುವ ಅಪಾಯಕಾರಿ ಮೌಢ್ಯವನ್ನು ಅನುಸರಿಸಿದ್ದು. ಎಲ್ಲರೂ ತಾಯತವನ್ನು ಅಂಗಾಂಗಗಳ ಮೇಲೆ ಕಟ್ಟಿಕೊಂಡರೆ ಈತ ಆಪರೇಷನ್ ಮಾಡಿಸಿ ತನ್ನ ತೊಡೆಯೊಳಗೆ ತಾಯತ ಕಟ್ಟಿಕೊಂಡಿದ್ದಾನೆ. ಆ ತಾಯತ ಇವನಿಗೆ ಕೊಟ್ಟಿರುವ ತೊಂದರೆಗಳು ಅಷ್ಟಿಷ್ಟಲ್ಲ. ಸುಮಾರು 9 ವರ್ಷಗಳಿಂದ ಈತನ ತೊಡೆಯಲ್ಲಿರುವ ತಾಯತದಿಂದ ಈತ ಹೆಚ್ಚು ನಡೆಯಲು ಆಗುವುದಿಲ್ಲ, ಬಹಳ ಹೊತ್ತು ನಿಲ್ಲಲು ಆಗುವುದಿಲ್ಲ. ಈ ವರ್ಷ ದೇವದುರ್ಗ ಉಪಚುನಾವಣೆಯಲ್ಲಿ ಗೆಲ್ಲುವುದಕ್ಕೆ ಮುಂಚೆ ಒಂದು ವರ್ಷಗಳ ಕಾಲ ಆಸ್ಪತ್ರೆ ಮತ್ತು ಮನೆಯಲ್ಲಿ ವಿಶ್ರಾಂತಿ ಪಡೆದಿದ್ದೇ ಆಯಿತು.

ಈ ರೀತಿಯ ಮಹಾ ಮೌಢ್ಯವಂತನಾದ ಈತ ಬೀದಿಗಿಳಿದು ಕೆಲಸ ಮಾಡುವ ಬದಲು ಗಿಮಿಕ್‌ಗಳನ್ನು ಮಾಡುವುದರಲ್ಲೇ ಕಾಲ ಕಳೆಯುತ್ತಿದ್ದಾನೆ. ಈತನಿಗೆ ತಲೆಕೆಟ್ಟಿದೆ ಎಂದು ಹಲವು ಜನ ಮಾತಾಡಿಕೊಳ್ಳುತ್ತಾರೆ. ಆ ರೀತಿಯ ಮಾತುಗಳನ್ನೆ ಈತ ಆಡುತ್ತಾನೆ. ಕಳೆದ ವಿಧಾನಸಭಾ ಚುನಾವಣೆಗೂ ಮುಂಚೆ ಈತ ಜಗದೀಶ್ ಶೆಟ್ಟರ್ ಮುಖ್ಯಮಂತ್ರಿಯಾಗಿದ್ದಾಗ ಅವರಿಗೆ ಆಪ್ತ ಸಹಾಯಕನಾಗಿದ್ದ, ಅದೇ ಸಂದರ್ಭದಲ್ಲಿ ಯಡಿಯೂರಪ್ಪ ಬಿಜೆಪಿ ಬಿಟ್ಟು ಕೆಜೆಪಿ ಕಟ್ಟಿದ್ದಾಗ ಸಿಂಧನೂರಿನಲ್ಲಿ ನಡೆದ ಸಮಾವೇಶವೊಂದರಲ್ಲಿ ಈತ ಯಡಿಯೂರಪ್ಪನಿಗೆ ಏಡ್ಸ್ ಬರಿದು ಸಾಯಲಿ ಎಂದೆಲ್ಲಾ ಅರಚಾಡಿದ್ದ, ಇಷ್ಟರಮಟ್ಟಿಗೆ

ವಾಗಿದೆ. ಆದರೆ ತಾನು ಮಾತ್ರ ಕೋಟ್ಯಾಂತರ ರೂಪಾಯಿ ಆಸ್ತಿ ಮಾಡುವಲ್ಲಿ ಶಿವನಗೌಡ ಯಶಸ್ವಿಯಾಗಿದ್ದಾನೆ.

ಅಧಿಕಾರಿಗಳಿಗೆ ಏಕವಚನದಲ್ಲಿ ಬೈಗುಳ

ಇನ್ನು ಅಧಿಕಾರಿಗಳಿಗೆ ಈತ ಯಾವುದೇ ಬೆಲೆ ಕೊಡುವುದಿಲ್ಲ, ಸಾರ್ವಜನಿಕವಾಗಿಯೇ ಸೊಂಟದ ಕೆಳಗಿನ ಪದಗಳನ್ನು ಬಳಸಲು ಈತ ಹಿಂದೇಟು ಹಾಕುವುದಿಲ್ಲ. ಒಮ್ಮೆ ದೇವದುರ್ಗದ ಸಬ್‌ಇನ್ಸ್‌ಪೆಕ್ಟರ್‌ಗೆ "ಪೊಲೀಸ್ ಆಗಲು ನೀನು ಲಾಯಕ್ಕಿಲ್ಲ, ಸೀರೆ ಬಳೆ ಹಾಕೊಂಡು ಬಾ" ಎಂದು ಲೇವಡಿ ಮಾಡಿದ್ದ. ಅಲ್ಲದೇ ತಹಸೀಲ್ದಾರ್‌ಗೆ "ನಾಲಾಯಕ್ ನೀನು. ಉಸುಕಿನ ಹೆಸರಿನಲ್ಲಿ ಒಬ್ಬನೇ ದುಡ್ಡು ತಿಂದವನು" ಎಂದು ಬೈದಿದ್ದ. ಇದೆಲ್ಲದರಿಂದ ಇಲ್ಲಿನ ಅಧಿಕಾರಿಗಳು ಬೇಸತ್ತಿದ್ದಾರೆ. ಇದೇ ರೀತಿ ಚುನಾವಣೆ ನೀತಿಸಂಹಿತೆ ಇದ್ದಾಗ ಅದನ್ನು ಉಲ್ಲಂಘಿಸಿ ರಾಯಚೂರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬೆಂಬಲಿಗರ ಸಭೆ ನಡೆಸಿದ್ದ. ಆಗ ಡಿಸಿಯಾಗಿದ್ದ ಉಜ್ವಲ್‌ಕುಮಾರ್ ಘೋಷ್ ತಿರುಗೇಟು ನೀಡಿ "ಇಲ್ಲಿಂದ ನೀವು ಜಾಗ ಖಾಲಿ ಮಾಡಿದರೆ ಸರಿ ಇಲ್ಲದಿದ್ದರೆ ಪರಿಣಾಮ ನೆಟ್ಟಗಿರುವುದಿಲ್ಲ" ಎಂದು ದಬಾಯಿಸಿದ್ದರು.

ಈ ಸಲ ಪ್ರಬಲ ಪೈಪೋಟಿ

ಈ ಹಿಂದೆ ಹೇಳಿದಂತೆ ಹಲವು ಉಪಚುನಾವಣೆಗಳನ್ನು ಕಂಡಿರುವ ದೇವದುರ್ಗ ಕ್ಷೇತ್ರದಲ್ಲಿ ನೂರಾರು ಜನ ಗೆದ್ದು ಸೋತು ಚೆಲ್ಲಾಪಿಲ್ಲಿಯಾಗಿದ್ದಾರೆ. ಇತ್ತೀಚಿಗಂತೂ ಒಬ್ಬನೇ ವ್ಯಕ್ತಿ ಎರಡು ಮೂರು ಸಲ ನಿರಂತರವಾಗಿ ಗೆದ್ದಿರುವ ಉದಾಹರಣೆಗಳಿಲ್ಲ. ಪರಿಸ್ಥಿತಿ ಹೀಗಿರುವಾಗ ಮುಂದಿನ

ನಿರ್ಲಕ್ಷ್ಯತನವನ್ನೇ ಬಂಡವಾಳ ಮಾಡಿಕೊಂಡು ಶತಾಯಗತಾಯ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ.

ಇನ್ನು ಸ್ಥಳೀಯ ಕಾರ್ಯಕರ್ತರಿಂದ ಹಿಡಿದು ಮುಖ್ಯಮಂತ್ರಿವರೆಗೆ, ಕರ್ನಾಟಕ ಆಂಧ್ರ ಸೇರಿದಂತೆ ವೆಂಕಯ್ಯ ನಾಯ್ಡುವರೆಗೂ ಲಿಂಕ್ ಇಟ್ಟಿರುವ ವಿಧಾನ ಪರಿಷತ್ ಸದಸ್ಯ ಕಾಂಗ್ರೆಸ್‌ನ ಬೋಸರಾಜು ಈ ಶಿವನಗೌಡನಿಗೆ ಮಗ್ಗುಲಮುಳ್ಳು ಆಗಿದ್ದಾರೆ. ಈ ಬೋಸರಾಜು ಜಿಲ್ಲಾಧಿಕಾರಿ ಗೌತಮ್ ಬಗಾದಿಯನ್ನು, ಮುಖ್ಯಕಾರ್ಯ ನಿರ್ವಹಣಾಧಿಕಾರಿ ಎಂ.ಕುರುಮರಾವ್‌ರನ್ನು ಸಹ ತನ್ನ ತಾಳಕ್ಕೆ ತಕ್ಕಹಾಗೆ ಕುಣಿಸುವ ಸಾಮರ್ಥ್ಯ ಹೊಂದಿದ್ದಾರೆ. ಇಡೀ ಹೈದರಾಬಾದ್ ಕರ್ನಾಟಕದಲ್ಲಿ ತನ್ನ ಛಾಪು ಮೂಡಿಸುವ ಕನಸು ಕಾಣುತ್ತಿರುವ ಬೋಸರಾಜು ಸಹ ದೇವದುರ್ಗದಲ್ಲಿ ಕಾಂಗ್ರೆಸ್ ಗೆಲ್ಲಿಸಲು ರಣತಂತ್ರ ಹೆಣೆಯುತ್ತಿದ್ದಾರೆ. ಇದು ಸಹಜವಾಗಿ ಶಿವನಗೌಡನ ನಿದ್ರೆಗೆಡಿಸಿದೆ. ಹಾಗಾಗಿ ತಾನು ಜನಪರ ಎಂದು ತೋರಿಸಿಕೊಳ್ಳಲು ಒಂದು ತಿಂಗಳಿಂದ ತನ್ನ ಚೇಲಾಗಳನ್ನು ಮುಂದಿಟ್ಟುಕೊಂಡು ಹೋರಾಟ ಹಾರಾಟ ಶುರು ಮಾಡಿದ್ದಾನೆ. ದಿನನಿತ್ಯ ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳಲು ಹವಣಿಸುತ್ತಿದ್ದಾನೆ.

ಒಟ್ಟಿನಲ್ಲಿ ಜನರ ಬಡತನ, ಅಜ್ಞಾನಗಳನ್ನೆಲ್ಲಾ ಈ ರೀತಿಯ ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡು ಹೇಗೆಲ್ಲ ಅನಾಹುತಗಳನ್ನು ಸೃಷ್ಟಿಸುತ್ತಾರೆ ಎಂಬುದಕ್ಕೆ ದೇವದುರ್ಗ ಒಂದು ಉದಾಹರಣೆಯಾಗಿ ನಿಂತಿದೆ. ಕಾಲ ಮುಂದಕ್ಕೆ ಹೋಗುತ್ತಿದ್ದರೂ, ಎಲ್ಲೆಡೆ ಅಭಿವೃದ್ಧಿ ಎಂಬ ಪದಗುಚ್ಛಗಳು ಹರಿದಾಡುತ್ತಿದ್ದರೂ ದೇವದುರ್ಗಕ್ಕೆ ಬಿಜೆಪಿ ಪಕ್ಷದ 'ಅಚ್ಚೆ ದಿನ'ಗಳ ಕನಸು ಸಹ ಕಾಣಲಾಗದಿರುವುದು ದುರದೃಷ್ಟಕರ.

■ ಮುತ್ತುರಾಜು

ಬಂಟ್ವಾಳದಲ್ಲಿ ನಿಷೇಧಾಜ್ಞೆ ಉಲ್ಲಂಘಿಸಿ ನಡೆದ ಬಿಜೆಪಿ ಸಭೆ





ನಾಡು ಸುಡಲು ರೆಡಿ!!

04 ⏮

ಮಹಿಳಾ ಸಂಘಟನೆಯವರನ್ನು ಎತ್ತಿ ಕಟ್ಟಿದರು. ಅಮಾಯಕ ಹಿಂದೂಗಳ ಮೇಲೆ ದೌರ್ಜನ್ಯ ನಡೆಯುತ್ತಿದೆ ಎಂಬ ಬೊಬ್ಬೆ ಮಹಿಳಾ ಮೋರ್ಚಾದವರಿಂದ ಹಾಕಿಸಿದರು. ಮಂಗಳೂರಿನ ಪುರಭವನದಲ್ಲಿ ಪ್ರತಿಭಟನಾ ಸಭೆ ಚೆಡ್ಡಿ ಮಹಿಳಾ ಮಣಿಗಳು ಏರ್ಪಡಿಸುವಂತೆ ನೋಡಿಕೊಂಡು ಸೋಭಕ್ಕ ಆ ಸಭೆಯಲ್ಲಿ ಯಡ್ಡಿಯನ್ನು ಮೆರೆಸುವುದರ ಜತೆಗೆ ಡಾನ್ ಕಲ್ಲಡ್ಕ ಭಟ್ಟನ ಸಂಪ್ರೀತಗೊಳಿಸುವ ಒಳದ್ದೇಶ ಶೋಭಾರದಾಗಿತ್ತು. ಒಂದಲ್ಲ ಒಂದು ಕಾರಣಕ್ಕೆ ಸೋಭಾ, ಕುಟೀಲು, ಸದಾಗೌಡರಂಥ ಕರಾವಳಿಯ ಬಿಜೆಪಿ ಲೀಡರ್‌ಗಳ ದೂರ ಇಟ್ಟದ್ದ ಕಲ್ಲಡ್ಕ ಭಟ್ಟನಿಗೂ ಕೂಡಿಕೆ ಅನಿವಾರ್ಯವಾಗಿತ್ತು. ಅತ್ತ ಜಿಲ್ಲಾಡಳಿತ ಕರೆದಿದ್ದ ಶಾಂತಿ ಸಭೆ ಬಹಿಷ್ಕರಿಸಿದ ಬಿಜೆಪಿ ಹೆಣ್ಣಾಳು-ಗಂಡಾಳುಗಳು ಅಶಾಂತಿ ಶೋ ನಡೆಸಿದ್ದಾರೆ.

ಕರಾವಳಿಯ ಕೋಮು ಸೌಹಾರ್ದ ಕೆಡಿಸುವ ಪಾಖಂಡಿಗಳಿಗೆ ಅಂಕುಶ ಇಡಬೇಕು; ಊರು-ಕೇರಿಯಲ್ಲಿ ನೆಮ್ಮದಿ ಮೂಡಿಸಬೇಕೆಂಬ ಮನಸ್ಸು ಸಂಘ ಸರದಾರರಿಗೆ ಇಲ್ಲವೇ ಇಲ್ಲ. ಈ ಚೆಡ್ಡಿ ಪಟಾಲಮ್ಮಿಗೆ ಬೇಕಾಗಿರುವುದು ಎಲೆಕ್ಷನ್ ತನಕ ಕಮ್ಯುನಲ್ ಟೆನ್‌ಶನ್ ಮತ್ತು ಕಲ್ಲಡ್ಕ ಭಟ್ಟ, ಕುಟೀಲು, ಸೋಭಾ ಎಂಬ ಕಿತಾಪತಿಗಾರರ ಬಂಧನ ತಪ್ಪಿಸುವುದಷ್ಟೇ. ಈ ಮಸಲತ್ತು ತಮ್ಮದೆಂದು ಬಿಜೆಪಿ ಲೀಡರ್‌ಗಳು ಮಂಗಳೂರಲ್ಲಿ ನಡೆಸಿದ ಆಟದ ಪ್ರತಿ ನಡೆ-ನುಡಿಯಲ್ಲಿ ಸ್ವಯಂ ಸಾಬೀತುಪಡಿಸಿಕೊಂಡಿದ್ದಾರೆ. ಪುರಭವನದಲ್ಲಿ ಜಮೆಯಾಗಿದ್ದ ಬಿಜೆಪಿ ಹೆಂಗಸರ ಎದುರು ಮೈಮೇಲೆ ಕೋಮು ಭೂತ ಬಂದಂತೆ ಹಾರಾಡಿದ್ದಾರೆ ಯಡ್ಡಿ ಮಹಾತ್ಮ "ಎಲವ್ಹೋ ಸಿದ್ದರಾಮಯ್ಯ... ತಾಕತ್ತಿದ್ದರೆ ನಮ್ಮ ಸಂಘ ಸರದಾರ ಕಲ್ಲಡ್ಕ ಭಟ್ಟನ ಬಂಧಿಸು ನೋಡ್ತೇನೆ..." ಎಂದು ಬೊಬ್ಬಿರಿದ್ದಾರೆ. ಅಷ್ಟಕ್ಕೇ ನಿಲ್ಲದ ಆತ "ಶೋಭಾ, ಕಟೀಲು ಮತ್ತು ಆರ್‌ಎಸ್‌ಎಸ್ ತಂಟೆಗೆ ಬಂದರೆ ಹುಷಾರ್..." ಎನ್ನುತ್ತ ಜಾರುತ್ತಿದ್ದ ಪ್ಯಾಂಟು ಮೇಲೇರಿಸಿಕೊಂಡಿದ್ದಾರೆ. ಮುದಿ ಯಡ್ಡಿಯ ಹುಸಿ ವೀರಾವೇಶಕ್ಕೆ ಮಹಿಳಾ ಮೋರ್ಚಾದ ಹೆಂಗಸರು ಬಿದ್ದು ನಕ್ಕಿದ್ದೇ ನಕ್ಕಿದ್ದು.

ಕೂಗು ಮಾರಿ ಬ್ರ್ಯಾಂಡಿನ ಶೋಭಾ ಕರಂದ್ಲಾಜೆ ವಿಕಾರ ಸ್ವರದಲ್ಲಿ ಕೂಗಾಡಿದ್ದಾರೆ. ದಕ್ಷಿಣ ಕನ್ನಡದ ಕೋಮು ದಂಗೆ, ವಿದ್ವೇಷ ಕೊನೆಗೊಳಿಸುವ ಕಾಳಜಿ-ಕಳಕಳಿಯ ಒಂದು ಮಾತೂ ಆಕೆಯ ಬಾಯಿಂದ ಬರಲಿಲ್ಲ. ಹಿಂದೂಗಳ ಕೆರಳಿಸಿ ತಾನು, ಕಲ್ಲಡ್ಕ ಮತ್ತು ನಳಿನ್ ಬಂಧನದಿಂದ ಬಚಾವಾಗುವ ಹುನ್ನಾರ ಈ ಎಡವಟ್ಟು ಪುಢಾರಿಣಿಯದಾಗಿತ್ತು. "ತಾಕತ್ತಿದ್ದರೆ ನನ್ನನ್ನು ಮತ್ತು ಪ್ರಭಾಕರ ಭಟ್ಟರನ್ನು ಬಂಧಿಸಿ ನೋಡೋಣ..." ಎಂದು ಸರ್ಕಾರಕ್ಕೆ ಸೋಭಕ್ಕೆ ಪೊಕ್ಕು ಬೆದರಿಕೆ ಹಾಕಿದ್ದೇ ಹಾಕಿದ್ದು. ಇದೇ ಸ್ಟೈಲಲ್ಲಿ ನಳಿನ್ ಕುಟೀಲು ಒದರಿದ್ದಾನೆ "ನಮ್ಮ ಒಡೆಯ ಕಲ್ಲಡ್ಕ ಭಟ್ಟರ ಒಮ್ಮೆ ಬಂಧಿಸಿ ನೋಡಿ... ಎಚ್ಚರ!...." ಎಂದು ನಳಿನ್ ಹೇಳುವಾಗ ಸೋಭಾ ತನ್ನ "ಕರ್ಮ" ಕ್ಷೇತ್ರಕ್ಕೆ ಅತಿಕ್ರಮಣ ಮಾಡದಂತೆ ನಿರ್ಬಂಧಿಸುವ ತಂತ್ರಗಾರಿಕೆ ಅಡಗಿತ್ತು, ಪಾಪ! ಈ ಚೆಡ್ಡಿ ಲೀಡರ್‌ಗಳ ವೈಯಕ್ತಿಕ ಅಡಚಣೆ, ಸಂದಿಗ್ಧತೆಯ ಮೇಲಾಟವೇ ದಕ್ಷಿಣ ಕನ್ನಡಕ್ಕೆ ಗಂಡಾಂತರಕಾರಿ ಆಗಿದೆ.

ತನ್ನ ಸಂಸದ ಕ್ಷೇತ್ರವಾದ ಉಡುಪಿ-ಚಿಕ್ಕಮಗಳೂರಲ್ಲಿ ಮಾಡಲು ಬೇಕಾದಷ್ಟು ಕೆಲಸ, ಪರಿಹಾರ ಕಾಣದ ಸಮಸ್ಯೆ ಇರುವಾಗ ಈ ಸೋಭಕ್ಕ ಪಕ್ಕದ ದಕ್ಷಿಣ ಕನ್ನಡ ಕಮ್ಯುನಲ್ ಕಲಹದ ಲಾಭ ಎತ್ತಲು ಹವಣಿಸುತ್ತಿರುವುದ ನಾಚಿಕೆಗೇಡು. ಕೋಮು ಕಿತಾಪತಿ ಉದ್ದೀಪಿಸುವ ಭರದಲ್ಲಿ "ಷಂಡತ್ವ"ದ ಭಂಡ ಮಾತಾಡಿ ಅದೆಂಥ ಕೊಳಕು ಮನಸ್ಥಿತಿಯ ಚೆಡ್ಡಿಣಿ ಎಂಬುದನ್ನು ತೋರಿಸಿಕೊಂಡ ಸೋಭಾ ಮೇಡಮ್ಮು 'ದೊರೆ' ಯಡ್ಡಿ ಇಡೀ ರಾಜ್ಯಕ್ಕೆ ಬೆಂಕಿ ಇಕ್ಕುವ ಕ್ರೌರ್ಯದ ವರಸೆ ಪ್ರದರ್ಶಿಸಿದ್ದಾರೆ. ಮಂಗಳೂರಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಈ ವಯೋವೃದ್ಧ ನಾಯಕನ ಬಾಯಿಂದ ಬಂದ ಅಣಿಮುತ್ತುಗಳು ಆತನನ್ನು ತಕ್ಷಣ ಜೈಲಿಗಟ್ಟಲು ಸಾಕಾಗುವಂತಿದೆ! "ಕಲ್ಲಡ್ಕ ಭಟ್ಟರನ್ನೇನಾದರೂ ರಾಜ್ಯ ಸರ್ಕಾರ ಬಂಧಿಸುವ ಉಸಾಬರಿಗೆ ಹೋದರೆ ರಾಜ್ಯಕ್ಕೆ ಬೆಂಕಿ ಬೀಳುತ್ತದೆ" ಎಂದಿದ್ದಾರೆ ಯಡ್ಡಿಜೀ. ರಾಜ್ಯದ ಅಮಾಯಕ ಮಂದಿಯನ್ನು ಕೋಮು ಬೆಂಕಿಯಲ್ಲಿ ಸುಟ್ಟು ಬೂದಿ ಮಾಡಿಯಾದರೂ ಕ್ರಿಮಿನಲ್ ಕಲ್ಲಡ್ಕ ಭಟ್ಟನ ಕಾಪಾಡುವ ಅಮಾನುಷ ಯೋಚನೆ ಯಡ್ಡಿ ಮಾಡಿದ್ದಾರೆಂದಾಯ್ತು. ಇಂಥ ಪಾಪಿ ರಾಜ್ಯದ ಸಿಎಂ ಆಗುತ್ತೇನೆಂದು ಹೊರಟಿರುವುದು ಕನ್ನಡಿಗರ ದುರ್ಭಾಗ್ಯವೇ ಸರಿ!! ಇದು ಬಿಜೆಪಿಗರ ಅಸಲಿ ಹಿಂದೂತ್ವ; ನಕಲಿ ಜನಪರ ನೀತಿ!! ಬೆಂಕಿ ಮತ್ತು ಶಾಂತಿ-ಅಭಿವೃದ್ಧಿ ಜತೆಯಾಗಿ ಹೋಗಲು ಸಾಧ್ಯವಾ? ಯಡ್ಡಿ ಸಿಎಂ ಆದರೆ ಬೆಂಕಿ-ಕೆಂಡ-ರಕ್ತಪಾತ ಬಿಟ್ಟರೆ ಮತ್ತೇನು ಸಿಗಲು ಸಾಧ್ಯ?!

ರಾಜ್ಯದ ಜನರ ಜೀವ-ಜೀವನ ಗಂಡಾಂತರಕ್ಕೆ ಒಡ್ಡಿ ನರಹಂತಕ ಕಲ್ಲಡ್ಕ ಭಟ್ಟನ ರಕ್ಷಿಸಲು ಹೊರಟಿರುವ ಯಡ್ಡಿಗೆ ಬೇರೆಯವರ ಮನೆಗೆ ಇಟ್ಟ ಬೆಂಕಿ ತನ್ನ ಮನೆಯನ್ನು ಸುಡದೇ ಬಿಡದೆಂಬ ನೈಸರ್ಗಿಕ ನ್ಯಾಯತತ್ವದ ಖಬರಿದ್ದಂತಿಲ್ಲ. ಶಾಂತಿ ಕಾಪಾಡುವುದೆಂದರೆ ಯಡ್ಡಿ-ಸೋಭಾ ಪ್ರಕಾರ ಅವರು ತೋರಿಸುವ ಸಾಬರನ್ನು ಬಂಧಿಸಿ ಸದೆ ಬಡಿಯುವುದು ಮತ್ತು ತಮ್ಮ ಕೇಸರಿ ಪರಿವಾರದ ರಕ್ತ ಪಿಪಾಸುಗಳನ್ನು ಬಂಧಿಸದಿರುವುದು ಅಷ್ಟೆ! ಕಾನೂನು ಮತ್ತು ನ್ಯಾಯ ವ್ಯವಸ್ಥೆ ಬುದ್ಧಿಪೂರ್ವಕವಾಗೇ ಧಿಕ್ಕರಿಸಿ ಕರಾವಳಿಯ ಶಾಂತಿ-ನೆಮ್ಮದಿಗೆ ಭಂಗ ತರುವ ಕುಕೃತ್ಯದಲ್ಲಿ ಸಂಘಪರಿವಾರ ವ್ಯವಸ್ಥಿತವಾಗಿ ನಿರತವಾಗಿದೆ ಎಂಬುದಕ್ಕೆ ಯಡ್ಡಿ-ಶೋಭಾ ಅಂಡ್ ಕ್ರೌರ್ಯದ ಕಂಪನಿ ಬಿತ್ತರಿಸುತ್ತಿರುವ ಹೇಳಿಕೆ-ಭಾಷಣ ಪಾಷಾಣವೇ ಜೀವಂತ ಸಾಕ್ಷಿಯಂತಿದೆ! ಮಾಜಿ ಮುಖ್ಯಮಂತ್ರಿ ಯಡ್ಡಿಯನ್ನೇ ಕಾರಾಗೃಹಕ್ಕೆ ತಳ್ಳಿದ್ದ ನ್ಯಾಯ ವ್ಯವಸ್ಥೆಗೆ ಆಹಾರವಿಲ್ಲದ-ಅರ್ಥವಿಲ್ಲದ ಹಸಿ ಹಸೀ ಸುಳ್ಳುಗಳಿಗೆ ಉಪ್ಪು-ಹುಳಿ-ಖಾರ ಬೆರೆಸಿ ಹೇಳುತ್ತ ಜನರ ದಾರಿ ತಪ್ಪಿಸುವ ಪಾಪಿ ಭಟ್ಟ ಬಂಧಿಸಲು ಎಷ್ಟು ಹೊತ್ತು. ಆದರೆ ಆಳುವವರು ಅಳುಕು ಬಿಟ್ಟು ಕಾನೂನುಬದ್ಧ ಆಡಳಿತದ ಇಚ್ಛಾಶಕ್ತಿ ತೋರಿಸಬೇಕಷ್ಟೇ!

ಅಮಾಯಕ ಶೂದ್ರ ಹುಡುಗರ ಛೂಬಿಟ್ಟು ಸಾಬರ ತಲೆತೆಗೆಯುವ ಕಲ್ಲಡ್ಕ ಭಟ್ಟ ಹಿಂದೂಗಳಿಗೂ ಕಂಟಕನಾಗಿದ್ದಾನೆ. ಇಂಥ ಭಟ್ಟನನ್ನು ಕಾನೂನು ವಿಚಾರಣೆ ಮುಂದಾದಾಗ ಯಡ್ಡಿ-ಸೋಭಾ ತಂಡ ತಡೆಯೊಡ್ಡುವುದು ಅಪರಾಧವೇ ಸರಿ. ಅಷ್ಟೇ ಅಲ್ಲ, ಸರ್ಕಾರಕ್ಕೆ ಸಂವಿಧಾನಕ್ಕೆ ಕಾನೂನಿಗೆ ಸೆಡ್ಡು ಹೊಡೆದು ನಿಂತಿರುವುದು ಈ ಕೇಸರಿ ಕೇಡರಿಗೆ ಮನುಷ್ಯತ್ವದಲ್ಲಿ, ಧರ್ಮದಲ್ಲಿ ಕಿಂಚಿತ್ತೂ ನಂಬಿಕೆ ಇಲ್ಲ ಎಂಬುದನ್ನು ಎತ್ತಿ ತೋರಿಸುತ್ತಿದೆ. ದುರಂತ ಎಂದರೆ, ಕಾನೂನಿನ ಆಡಳಿತ ಧ್ವಂಸ ಮಾಡುವ, ಸಮಾಜ ಒಡೆ... ಸಂವಿಧಾನದ ಪರಮಾಧಿಕಾರಕ್ಕೇ ಸವಾಲು ಒಡ್ಡುವ ... ಆರ್‌ಎಸ್‌ಎಸ್-ಭಜರಂಗದಳವೇ ಮುಂತಾದ ತರಹ... ಕೇಸರಿ ಗ್ಯಾಂಗುಗಳಿಗೆ ಸಿದ್ದು ಸರ್ಕಾರ ಸುಮ್ಮನೇ ಬಿ... ಸಂಘಿಗಳು ಅಡಿಗಡಿಗೆ ಸರ್ಕಾರವನ್ನು ಕಿಚಾಯಿ... ಮೂದಲಿಸುತ್ತ, ಕೆಣಕುತ್ತಲೇ ಇದ್ದಾರೆ. ಸೋಭ... ಮಾನ-ಮರ್ಯಾದೆ ಬಿಟ್ಟು ನಾಲಿಗೆ ಹರಿಬಿಡುತ... ತನ್ಮೂಲಕ ಹಿಂದೂತ್ವದ ಸಂಸ್ಕಾರ, ಕಾಲು ಕೆರೆದು ... ನಿಲ್ಲುವ ದುರ್ಬುದ್ಧಿ ಬಹಿರಂಗವಾಗೇ ಪ್ರದರ್ಶಿಸುತ... ಇಷ್ಟೆಲ್ಲ ಅವಮಾನ, ಅವಹೇಳನ, ಅಡೆತಡೆಯಾ... ಆಳುವ ಪ್ರಭೃತಿಗಳೇಕೆ ಸೆಟೆದು ನಿಲ್ಲುತ್ತಿಲ್ಲ?

ಆಡಳಿತ ನಡೆಸುತ್ತಿರುವ ಕಾಂಗ್ರೆಸಿಗರ ಈ ದೌರ್ಬ... ಶೋಭಾ, ಯಡ್ಡಿಯಂಥ ಬಾಯಿಬಡುಕರಿಗೆ, ಭಟ್ಟನಂಥ ಕ್ರಿಮಿನಲ್‌ಗಳಿಗೆ ವರವಾಗಿದೆ. ಇವತ್ತು ... ಕನ್ನಡ ಕೋಮು ದ್ವೇಷದ ಅಖಾಡದಂತಾಗಲು ... ಭಟ್ಟನ ಪಾತಕವೊಂದೇ ಕಾರಣವಲ್ಲ; ಆತನಿಗೆ ಮೂಗ... ಹಾಕಲಾಗದ ಜಿಲ್ಲಾಡಳಿತದ ನಿಷ್ಕ್ರಿಯತೆಯೂ ಹ... ನಿಷೇಧಾಜ್ಞೆ ಉಲ್ಲಂಘಿಸಿ ಇಬ್ಬರು ಸಂಸದರು, ... ಶಾಸಕರು, ಎಮ್ಮೆಲ್ಸಿಗಳಂಥ ಘನ ಜನಪ್ರತಿನಿಧಿ... ಹಿಂದೂತ್ವದ ಝೇಂಡಾ ಬೀಸುತ್ತ ಧರ್ಮೋನ್ಮಾ... ಓಲಾಡುತ್ತಾರೆಂದರೆ ಜಿಲ್ಲಾಡಳಿತ ಇದ್ದೇನು ಪ್ರಯೋ... ಇವತ್ತಿಗೂ ಕಲ್ಲಡ್ಕ ಭಟ್ಟ, ಯಡ್ಡಿ, ಸೋಭಾ, ಕುಟೀ... ಭಜರಂಗಿ ಸುನಿಲ್, ಶರಣ್ ಪಂಪ್‌ವೆಲ್, ... ಕುಮ್ಮೇಲುನಂಥ ನಾಲ್ಕನೇ ದರ್ಜೆಯ ಹಿಂದೂ ಪು... ಸಂವಿಧಾನಕ್ಕೆ-ಕಾನೂನಿಗೇ ಬೆದರಿಕೆ ಒಡ್ಡುತ್ತಲೇ ... ಈ ಕ್ರಿಮಿನಲ್‌ಗಳ ಒದ್ದು ಒಳಗೆ ಹಾಕಿ ಜನರಿಗೆ ನೆ... ಕೊಡಬೇಕಿದ ಸರ್ಕಾರ.


ಕರಾವಳಿಯ ಕಮ್ಯುನಲ್ ದುರಂತದೊಳಗಣ ದ... ಹೇಳತೀರದು! ಎಷ್ಟು ಬೇಗ ಕಲ್ಲಡ್ಕ ಭಟ್ಟ ಕಾ... ಬದ್ಧವಾಗೇ ಬಂಧಿಸಲ್ಪಡುತ್ತಾನೋ ಅಷ್ಟು ಬೇಗ ... ಜಿಲ್ಲೆಗೆ ನೆಮ್ಮದಿ ಸಿಗುತ್ತದೆ. ಗುಪ್ತಚರ ದಳಕ್ಕೂ ... ಗೊತ್ತಿರುವ ಸತ್ಯವೇ. ಹಾಗೆಯೇ ಶೋಭಾಗೂ ದ... ಪ್ರವೇಶ ನಿರ್ಬಂಧಿಸಬೇಕು. ಈಗಲಾದರೂ ಸಿದ್ದು ಸ... ಎಚ್ಚೆತ್ತುಕೊಳ್ಳಬೇಕಿದೆ.

■ ವರದಿಗ...

ಕೆಪಿಸಿಸಿ ಆಯಕಟ್ಟಿಗೆ ಹೋರಾಟದ ಹುಡುಗ ಮೋಹನ್

ಕಾಂಗ್ರೆಸ್ ಎಂಬ ಪುರಾತನ ಪಕ್ಷದಲ್ಲಿ ಅಪರೂಪ ಕೊಮ್ಮೆ ಧನಾತ್ಮಕ ಪವಾಡ ಆಗಿಬಿಡುತ್ತದೆ! ಪಾಳೆಗಾರಿಕೆ, ಹಣ, ಜಾತಿ ಬಲದ ಜೋಭದ್ರರ ಕೂಟದಂತಿರುವ ಕಾಂಗ್ರೆಸ್‌ನ ಎಐಸಿಸಿ ಅಥವಾ ಕೆಪಿಸಿಸಿ ಆಯಕಟ್ಟಿನ ಜಾಗಕ್ಕೆ ಸೈದ್ಧಾಂತಿಕ ಬದ್ಧತೆ, ಜನಪರ ತುಡಿತದ ಪಕ್ಷ ನಿಷ್ಠರು ಆಯ್ಕೆ ಆಗುವುದೂ ಉಂಟು. ಸ್ವಯಂಘೋಷಿತ ದೇಶೋದ್ಧಾರಕರ ಬಿಜೆಪಿ, ಅಪ್ಪ-ಮಕ್ಕಳ-ಮೊಮ್ಮಕ್ಕಳ ಜೆಡಿಎಸ್‌ನಲ್ಲೂ ಇಂಥದೇ ವಾತಾವರಣವಿದೆ. ಇಂಥ ಕಲುಷಿತ ರಾಜಕೀಯ ಸಂದರ್ಭದಲ್ಲಿ ಕಾಂಗ್ರೆಸ್ ಪ್ರಕಟಿಸಿರುವ ಕೆಪಿಸಿಸಿ ಪದಾಧಿಕಾರಿಗಳ ಪಟ್ಟಿಯಲ್ಲಿ ಮಂಗಳೂರಿನ ಸಮಾಜಮುಖಿ ಚಿಂತನೆ, ಸೆಕ್ಯುಲರ್ ತುಡಿತದ ಪಿ.ವಿ. ಮೋಹನ್ ಸೇರಿಕೊಂಡು ಅಚ್ಚರಿ ಮೂಡಿಸಿದ್ದಾರೆ.

ಮೋಹನ್ ತೀರಾ ಹಿಂದುಳಿದ ವರ್ಗದ ಹುಡುಗ. ವಿದ್ಯಾರ್ಥಿ ದೆಸೆಯಿಂದಲೂ ಹೋರಾಟದ ಹಠಕ್ಕೆ ಬಿದ್ದು ಬಾಹು ಬಲವಿಲ್ಲದೆ ಮೇಲೆ ಬಂದಾತ. ದಾರ್ಶನಿಕ ಪಿ. ಲಂಕೇಶ್‌ರ ಗರಡಿಯಲ್ಲಿ ಪಳಗಿದ ಈ ತರುಣ ಕರಾವಳಿಯ ಆಲ್ ಕಾಲೇಜ್ ಯೂನಿಯನ್ ಅಧ್ಯಕ್ಷನಾಗಿ ಗೆದ್ದಿದ್ದೇ ಅಂದು ಒಂದು ದಾಖಲೆಯಾಗಿತ್ತು. ದಕ್ಷಿಣ ಕನ್ನಡ, ಉಡುಪಿ ಮತ್ತು ಕೊಡಗು ಜಿಲ್ಲೆಗಳ ಸರ್ವಕಾಲೇಜು ಸಂಘದ ವಿದ್ಯಾರ್ಥಿ ನಾಯಕನಾಗಿ ಗೆಲ್ಲುವುದೆಂದರೆ ಸಣ್ಣ ಕೆಲಸವೇನಲ್ಲ. ಅದೂ ಬಿಲ್ಲವ, ಬಂಟ ಮತ್ತು ಜೈನರ ಜಾತಿ-ಹಣ ಬಲದ ಅಖಾಡದಲ್ಲಿ ಸಣ್ಣ ಜಾತಿಯ ವಿದ್ಯಾರ್ಥಿಯೊಬ್ಬ



ನಾಯಕನಾಗಿ ರೂಪುಗೊಳ್ಳುತ್ತಾನೆಂದರೆ, ಅದು ಆತನ ಜನಪರ, ಸೌಹಾರ್ದತೆ, ಸ್ನೇಹಶೀಲತೆಯ ಕ್ಯಾಲಿಬರ್!

ಮೊನ್ನೆ ಹೊರಬಿದ್ದಿರುವ ಕೆಪಿಸಿಸಿ ಬಳಗದ ಪಟ್ಟಿಯಲ್ಲಿ ಮೋಹನ್ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ಹಾಗೆ ನೋಡಿದರೆ ಕಳೆದ 37 ವರ್ಷದಿಂದ ಸಕ್ರಿಯ ರಾಜಕಾರಣದಲ್ಲಿರುವ ಮೋಹನ್ ಹತ್ತು ವರ್ಷದ ಹಿಂದೆಯೇ ಈ ಸ್ಥಾನಕ್ಕೆ ಬರಬೇಕಿತ್ತು. ಆದರೆ ಜಾತಿ-ಹಣ ಬಲದವರ ನಡುವೆ ಮೋಹನ್ ನೇಪಥ್ಯದಲ್ಲೇ ಉಳಿವಂತಾಗಿತ್ತು. ಆಸ್ಕರ್ ಫರ್ನಾಂಡಿಸ್, ಹರಿಪ್ರಸಾದ್‌ರಂಥವರ ಕೃಪಾಕಟಾಕ್ಷವಿದ್ದರೂ ಮೋಹನ್ ಕಾಯುವ ತಪಸ್ಸು ಮಾಡಬೇಕಾಗಿ ಬಂದಿತ್ತು. ಹಾಗಂತ ಆತ ಸಮಾಜಸೇವೆ ಬಿಟ್ಟಿರಲಿಲ್ಲ. ಪತ್ರಕರ್ತರೂ ಆಗಿದ್ದ ಮೋಹನ್ ಲಂಕೇಶರ ಪ್ರಗತಿರಂಗದಿಂದ ಚುನಾವಣಾ ಸ್ಪರ್ಧೆಗೂ ಇಳಿದಿದ್ದರು: ಎನ್‌ಎಸ್‌ಯುಐ ಮೂಲಕ ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ಉಳ್ಳಾಲ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯ, ದ.ಕನ್ನಡ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ರಾಜಕೀಯ ಅನುಭವ ಮೋಹನ್ ಗಳಿಸಿಕೊಂಡಿದ್ದಾರೆ. ಲಕ್ಷದ್ವೀಪ ಕಾಂಗ್ರೆಸ್ ಚುನಾವಣಾಧಿಕಾರಿಯೂ ಆಗಿ ಕೆಲಸ ಮಾಡಿದ್ದೂ ಇದೆ.


ಮೋಹನ್ ಹೋರಾಟದ ಹುಡುಗ. ಸಾಮಾಜಿಕ ಸಮಸ್ಯೆಗಳು ಎದುರಾದಾಗ ಬೆನ್ನು ತೋರಿಸಿ ಹೋಗುವ ಪೈಕಿಯಲ್ಲ. ಆತ ಮಂಗಳೂರು ಮತ್ತು ದಕ್ಷಿಣ ಕನ್ನಡದ ಅನೇಕ ಸಾಮಾಜಿಕ ಚಳವಳಿಯಲ್ಲಿ ತೊಡಗಿಸಿಕೊಂಡವರು. ಮಂಗಳೂರು-ಬೆಂಗಳೂರು ರೈಲು ಸೌಲಭ್ಯಕ್ಕಾಗಿ ಬರೋಬ್ಬರಿ ಇಪ್ಪತ್ತ ನಾಲ್ಕು ದಿನ ಉಪವಾಸ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು. ಕೇಸರಿ ಕೊಳ್ಳಿ ದೆವ್ವಗಳ ಆಡುಂಬೊಲ ದಂತಾಗಿರುವ ಅವಿಭಜಿತ ದಕ್ಷಿಣ ಕನ್ನಡದ ಶಾಂತಿ-ಸೌಹಾರ್ದತೆಗಾಗಿ ಯುವ ಜನತೆಯೊಡಗೂಡಿ 18 ದಿನ ಪಾದಯಾತ್ರೆ ಮಾಡಿದ್ದರು. ಹಲವು ಜನಪರ ಸಂಘಟನೆಗಳಲ್ಲಿ ಗುರುತಿಸಿಕೊಂಡಿರುವ ಮೋಹನ್ ಎಂಡೋಸಲ್ಫಾನ್ ಸಂತ್ರಸ್ತರ ಪರವಾಗಿ ಉಪವಾಸ ಸತ್ಯಾಗ್ರಹ ಮಾಡಿದ್ದೂ ಇದೆ.

ತನಗೆ ಸಿಕ್ಕಿದ ಅವಕಾಶ, ಸ್ಥಾನಮಾನ ಸಮರ್ಥ... ನ್ಯಾಯೋಚಿತವಾಗಿ ಬಳಸಿಕೊಂಡಿರುವ ಮೋ... ಮಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಹ... ಸಿಂಡಿಕೇಟ್ ಸದಸ್ಯರಾಗಿ ಅಕೆಡೆಮಿಕ್ ನ್ಯೂನತೆ ವಿ... ಗಟ್ಟಿ ಧ್ವನಿ ಎತ್ತಿದವರು. ಕೇಂದ್ರ ಕನಿಷ್ಠ ವೇತನ ಸ... ಮಂಡಳಿ ಸದಸ್ಯ ಮತ್ತು ದಕ್ಷಿಣ ವಲಯ ರೈಲ್ವೆ ಸ... ಸಮಿತಿ ಸದಸ್ಯರಾಗಿದ್ದಾಗಲೂ ಮೋಹನ್ ನಿಷ್ಠೆ ನಿಯತ್ತಿ... ಕೆಲಸ ಮಾಡಿದ್ದಾರೆ. ಎಐಸಿಸಿ ಸದಸ್ಯರೂ ಆಗಿ... ಮೋಹನ್ ಈಗ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯ... ತೂಕದ ಸ್ಥಾನ ಪಡೆದಿದ್ದಾರೆ. ಸದಾ ಹೊಸತನಕ್ಕೆ ಹಾತೊ... ಮೋಹನ್ ಕರಾವಳಿ ಜಿಲ್ಲೆಯಲ್ಲಿ ಕೇಸರಿ ಪಡೆ ನಡೆಸಿ... ವಾರಣ ಹೋಮಕ್ಕೆ ಹವಿಸ್ಸು ಬೀಳುವ... ತಡೆಯಬೇಕಾಗಿದೆ. ತನ್ಮೂಲಕ ಜಿಡ್ಡುಗಟ್ಟಿರುವ ಕಾಂಗ್... ನಿಜ ಅರ್ಥದ ಸೆಕ್ಯುಲರಿಸಮ್‌ನ ಸ್ಪರ್ಶ ನೀಡಬೇಕಿ...

ಮೋಹನ್‌ರ ಎರಡೂ ಮುಕ್ಕಾಲು ದ... ಸಾಮಾಜಿಕ-ರಾಜಕೀಯ-ಹೋರಾಟದ ಅನುಭವ ಕಾಂ... ಹಿರಿಯರು ಬಳಸಿಕೊಳ್ಳುವಂತಾಗಲಿ. ಕಾಂಗ್ರೆಸ್‌ನ ಗುಂ... ಗೋವಿಂದ ಆಗದಿರಲಿ ಈ ಸೋಷಿಯಾ... ಇಂಜಿನಿಯರಿಂಗ್ ತರುಣ. ಮೋಹನ್‌ಗೆ ಒಳ್ಳೆಯದ... ಎಂಬುದು 'ಪತ್ರಿಕೆ' ಹಾರೈಕೆ!

■ ವರದಿಗ...

ದಾವಣಗೆರೆ: ರವೀಂದ್ರನ ರಾಜಕೀಯಕ್ಕೆ ಚರಮಗೀತೆ ಸಿದ್ಧ!



ರವೀಂದ್ರನಾಥ್


ದಾವಣಗೆರೆಯ ಜಿಲ್ಲಾ ಬಿಜೆಪಿಯ ಆಂತರಿಕ ...ದವುರಗಿ ಈಗ ಮತ್ತೊಂದು ಮಗ್ಗುಲಿನತ್ತ ...ರಳಿಕೊಂಡಿದೆ. ಜಿಲ್ಲೆಯಲ್ಲಿ ಸಂಸದ ಸಿದ್ದೇಶ್ ಬಣ ...ತ್ತು ಮಾಜಿ ತರಕಾರಿ ಮಂತ್ರಿ ರವೀಂದ್ರನಾಥನ ಬಣ, ...ಗೆ ಎರಡು ಗುಂಪುಗಳಿವೆ. ಸಿದ್ದೇಶ್ವರನಿಗೆ ಯಡ್ಡಿಯ ...ಪೂರ್ಣ ಕೃಪಾಕಟಾಕ್ಷವಿದ್ದರೆ ರವೀಂದ್ರನಾಥನಿಗೆ ಅತ್ತ ...ಶ್ವರಪ್ಪನ ಬಲವೂ ಇಲ್ಲ, ಇತ್ತ ಸಂಘ ಪರಿವಾರದ ...ಲವೂ ಇಲ್ಲ ಎನ್ನುವಂತ ಸ್ಥಿತಿ. ಸದ್ಯದ ಮಟ್ಟಿಗೆ ಸಿದ್ದೇಶ್ವರ ...ವೇ ಸ್ಟ್ರಾಂಗಾಗಿದೆ. ಅದೇ ಕಾರಣಕ್ಕೆ ರವೀಂದ್ರ ಈಶ್ವರಪ್ಪನ ...ತೆಗೂಡಿ ಬ್ರಿಗೇಡ್ ಭಾನಗಡಿಯಲ್ಲಿ ಮುಖ ತೂರಿಸಲು ...ಗಾಡಿದ್ದು. ಆದರೆ ಅದೂ ಬರ್ಕತ್ತಾಗಲಿಲ್ಲ.

ಈಗ ಚುನಾವಣೆ ಸಮೀಪಿಸಿರೋದ್ರಿಂದ ಸ್ವಯಂಕೃತ ವ್ಯಣಗಳಿಗೆ ಮುಲಾಮು ಸವರುವ ಕೆಲಸ ಬಿಜೆಪಿಯಲ್ಲಿ ಬಿರುಸಾಗಿ ನಡೆಯುತ್ತಿದೆ. ಯಡ್ಡಿ–ಈಶು ದುಶ್ಮನಿಗೆ ಮಂಗಳ ಹಾಡಿದ್ದು ಕೂಡಾ ಅಂತದ್ದೇ ಒಂದು ಪ್ರಯತ್ನ. ದಾವಣಗೆರೆ ಬಿಜೆಪಿಯ ಕಚ್ಚಾಟವನ್ನೂ ಶಮನ ಮಾಡುವ ಕೆಲಸಗಳು ನಡೆಯುತ್ತಿವೆ. ಮೊನ್ನೆ ಸಾಮೂಹಿಕ ವಿವಾಹದ ನೆಪದಲ್ಲಿ ಸಿದ್ದೇಶ್ವರ, ಈಶ್ವರಪ್ಪ ಮತ್ತು ರವೀಂದ್ರನಾಥರನ್ನು ಒಂದೇ ವೇದಿಕೆಗೆ ಕರೆತರಲಾಗಿತ್ತು. ಆಗ ಸ್ವತಃ ಈಶ್ವರಪ್ಪನೇ ಇಬ್ಬರ ವೈಮನಸ್ಸು ಸರಿ ಪಡಿಸಿಕೊಳ್ಳುವಂತೆ ಮಂತ್ರೋಪದೇಶ ಮಾಡಿ ಹೋಗಿದ್ದ. ಅದಕ್ಕೆ ಬೆಲೆ ಕೊಟ್ಟು ಸಿದ್ದೇಶ್ವರ–ರವೀಂದ್ರ ಇಬ್ಬರೂ ಮಾತುಕತೆಗೆ ಮುಂದಾಗಿದ್ದರು. ಆದರೆ ಅದು ಅರ್ಧಕ್ಕೇ ಮುರಿದು ಬಿದ್ದಿರುವ ವರ್ತಮಾನ ಬಿಜೆಪಿ ವಲಯದಿಂದ ಕೇಳಿಬರುತ್ತಿದೆ.

ಯಡ್ಡಿ ರಾಜ್ಯಾಧ್ಯಕ್ಷನಾದ ತರುವಾಯ ತನ್ನ ಬೆಂಬಲಿಗರನ್ನು ಜಿಲ್ಲಾಧ್ಯಕ್ಷ ಮತ್ತು ಪದಾಧಿಕಾರಿಗಳನ್ನಾಗಿಸುವ ಆಪರೇಷನ್‌ಗೆ ಕೈ ಹಾಕಿದ್ದ. ದಾವಣಗೆರೆಯಲ್ಲೂ ಸಹ ತನ್ನ ಬೆಂಬಲಿಗ ಸಿದ್ದೇಶ್ವರ್‌ಗೆ ಅನುಕೂಲವಾಗುವಂತೆ ಆತನ ಚೇಲಾ ಯಶವಂತನಿಗೆ ಜಿಲ್ಲಾಧ್ಯಕ್ಷನ ಪಟ್ಟ ಕಟ್ಟಿದ್ದ. ಇದು ರವೀಂದ್ರನ ತಳ ಉರಿದು ಬುರ್ನಾಸು 'ನಾಥ' ಬರುವಂತೆ ಮಾಡಿತ್ತು. ಯಾಕೆಂದರೆ ಈ ಯಶವಂತ ರವೀಂದ್ರನ ರಾಜಕಾರಣದ ಮುಂದೆ ಬಚ್ಚಾ! ನಾಲ್ಕು ಬಾರಿ ಗೆದ್ದು ಶಾಸಕನಾಗಿ, ಸಚಿವನಾದ ರವೀಂದ್ರ ಎಲ್ಲಿ, ಮೂರು ಎಲೆಕ್ಷನ್‌ನಲ್ಲಿ ಸತತ ಮಕಾಡೆ ಮಲಗಿದ ಯಶವಂತನೆಲ್ಲಿ? ಅಂತವನ ಕೈಕೆಳಗೆ ಕೆಲಸ ಮಾಡಬೇಕೆನ್ನುವುದೇ ರವೀಂದ್ರನ ಪಿತ್ತ ನೆತ್ತಿಗೇರುವಂತೆ ಮಾಡಿತ್ತು. ಆಗಿನಿಂದಲೂ ಆತ ಬಂಡಾಯದ ಬಾವುಟ ಹಾರಾಡಿಸುತ್ತಲೇ ಇದ್ದ. ಮೊನ್ನೆ ಸಿದ್ದೇಶ್ವರ್ ಸಂಧಾನಕ್ಕೆ ಬಂದಾಗಲೂ ರವಿಂದ್ರನಾಥ್ ಜಿಲ್ಲಾಧ್ಯಕ್ಷ ಸ್ಥಾನದಿಂದ ಯಶವಂತನನ್ನು ಕೆಳಗಿಳಿಸಬೇಕು ಮತ್ತು ಈಗ ನೇಮಕವಾಗಿರೋ ನಾಲ್ವರು ಕಾರ್ಯದರ್ಶಿಗಳಲ್ಲಿ ಇಬ್ಬರನ್ನು ತೆಗೆದು ತನ್ನ ಬೆಂಬಲಿಗರನ್ನು ಆ ಸ್ಥಾನದಲ್ಲಿ ಕೂರಿಸಬೇಕು ಎಂಬ ಷರತ್ತು ಮುಂದಿಟ್ಟಿದ್ದ. ಆದರೆ ಸಿದ್ದೇಶ್ವರ್ ಅದಕ್ಕೆ ಸುತಾರಾಂ ಒಪ್ಪಲಿಲ್ಲ, ಹಾಗಾಗಿ ಸಂಧಾನ ಅರ್ಧಕ್ಕೇ ತುಂಡಾಗಿ ಬಿದ್ದಿದೆ.

ರವೀಂದ್ರನಾಥನಿಗೆ ಈಗ ತನ್ನ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ಮೊದಲಿನಷ್ಟು ಹಿಡಿತವಿಲ್ಲ, ಕಾಂಗ್ರೆಸ್‌ನ ಎಸ್.ಎಸ್. ಮಲ್ಲಿಕಾರ್ಜುನ್ ಕೆಲಸಗಳು ಅಲ್ಲಿ ಗಟ್ಟಿಯಾಗಿ ನಿಂತಿವೆ. ಅದಕ್ಕಿಂತಲೂ ಹೆಚ್ಚಾಗಿ ಯಡ್ಡಿ, ಸಿದ್ದೇಶ್ವರ್ ಮತ್ತು ಜಿಲ್ಲಾಧ್ಯಕ್ಷ ಯಶವಂತ್ ಥರದ ಬಗಲ್ ಕಾ ದುಶ್ಮನ್‌ಗಳ ಕಿತಾಪತಿಗಳೇ ರವೀಂದ್ರನಾಥನನ್ನು ಹೈರಾಣಾಗಿಸಿವೆ. ಜಿಲ್ಲೆಯಲ್ಲಿ ಆತನ ಬೆಂಬಲಿಗರನ್ನು ಉದ್ದೇಶಪೂರ್ವಕವಾಗಿ ಮಟ್ಟ ಹಾಕಲಾಗುತ್ತಿದೆ. ಮುಂದಿನ ಎಲೆಕ್ಷನ್‌ಗೆ ಮಾಯಕೊಂಡ ಕ್ಷೇತ್ರದಿಂದ ಟಿಕೆಟ್ ಪಡೆಯಲು ಯತ್ನಿಸುತ್ತಿರುವ ರವೀಂದ್ರನಾಥನ ಬಂಟ ಮಾಜಿ ಶಾಸಕ ಬಸವರಾಜ ನಾಯ್ಕನಿಗೆ ಟಿಕೆಟ್ ತಪ್ಪಿಸಿ ಸಿದ್ದೇಶ್ವರ್ ಬಣದ ಲಿಂಗಪ್ಪನಿಗೆ ಬಿ ಫಾರಂ ಕೊಡಿಸುವ ಹುನ್ನಾರಗಳೂ ನಡೆಯುತ್ತಿವೆ. ಇಂಥಾ ಒಳಸಂಚುಗಳಿಂದಲೇ ರವೀಂದ್ರನಾಥ ಮೆತ್ತಗಾಗಿದ್ದಾನೆ. ಅಲ್ಲದೇ ತನ್ನ ಸಚಿವಗಿರಿ ಅವಧಿಯಲ್ಲಿ ಆತ ಕಾರ್ಯಕರ್ತರನ್ನು ಬೆಳೆಸದಿದ್ದುದೂ ಆತನಿಗೆ ದುಬಾರಿಯಾಗಲಿದೆ.

ಈ ನಡುವೆ ಜಿಲ್ಲೆಯಲ್ಲಿ ಕಾಂಗ್ರೆಸ್ ತನ್ನ ಗತವೈಭವ ಮರಳಿ ಪಡೆಯುತ್ತಿದೆ. ಮಲ್ಲಿಕಾರ್ಜುನ್ ಮಂತ್ರಿಯಾದ ನಂತರ ದಾವಣಗೆರೆಯ ದಿಕ್ಕು ದೆಸೆಯನ್ನೇ ಬದಲಾಯಿಸಿದ್ದಾರೆ. ಸ್ಮಾರ್ಟ್ ಸಿಟಿಯ ಘೋಷಣೆಯ ಬೆನ್ನಲ್ಲೇ ಕಾಟನ್ ಸಿಟಿಯನ್ನು ಅಭಿವೃದ್ಧಿಯೆಡೆಗೆ ಮುಖ ಮಾಡಿ ನಿಲ್ಲಿಸಿದ್ದಾರೆ. ಜಿ.ಪಂ, ತಾ.ಪಂ, ಗ್ರಾ.ಪಂ. ಚುನಾವಣೆಗಳಲ್ಲಿ ಕೈ ಸಾಧನೆ ಏರುಗತಿ ಕಂಡಿದೆ, ದಾವಣಗೆರೆ ನಗರಪಾಲಿಕೆಯಲ್ಲಿ ಅಧಿಕಾರ ಪಾರಮ್ಯ ಮೆರೆದಿರುವ ಮಂತ್ರಿ



ಮಲ್ಲಿಕಾರ್ಜುನ್

ಮಲ್ಲಿಕಾರ್ಜುನ 2018ರ ಚುನಾವಣೆಗೆ ಈಗಾಗಲೇ ಸಿದ್ಧವಾಗಿದ್ದಾರೆ.

ಈ ಎಲ್ಲಾ ಬೆಳವಣಿಗೆಗಳು ರವೀಂದ್ರನಾಥನ ಗೆಲುವಿನ ಸಂಭವವನ್ನೇ ಕಮ್ಮಿ ಮಾಡುತ್ತಿವೆ. ಇಂಥಾ ಬೆಳವಣಿಗೆಯಿಂದ ಒಳಗೊಳಗೇ ಖುಷಿ ಪಡುತ್ತಿರೋದು ಮಾಜಿ ಸಚೇತಕ, ಪರಮಚಿಡ್ಡಿ ಶಿವಯೋಗಿಸ್ವಾಮಿ. ಒಂದೊಮ್ಮೆ ರವೀಂದ್ರನಾಥ ಸ್ಪರ್ಧಿಸದೇ ಹೋದರೆ ಟಿಕೆಟ್ ತನಗೆ ಸಿಗಲಿದೆ ಎಂಬ ಲೆಕ್ಕಾಚಾರ ಆತನದ್ದು. ಈಗಾಗಲೇ ಶಿವಯೋಗಿಸ್ವಾಮಿ ಲಾಬಿ ಶುರುಹಚ್ಚಿದ ವರ್ತಮಾನಗಳಿವೆ. ಒಟ್ಟಿನಲ್ಲಿ 2018ರ ಚುನಾವಣೆ ರವೀಂದ್ರನಾಥನ ರಾಜಕೀಯ ಬದುಕಿಗೆ ಚರಮಗೀತೆ ಹಾಡುವ ಎಲ್ಲಾ ಲಕ್ಷಣಗಳು ದಟ್ಟವಾಗಿಯೇ ಕಾಣುತ್ತಿವೆ.

■ ಟಿ.ಎನ್. ಷಣ್ಮುಖ

ಈ ಬಿಜೆಪಿಗಳ್ಯಾಕ್ಲ ಅಂಗೆ ಮಾತಾಡ್ತವೆ?



ಕಳೆದ ಮೂರು ವರ್ಷದಿಂದ ಮಳೆಯಾಗದ ಕಾರಣ ...ನಮರದ ಸುಳಿ ಒಣಗಿಹೋದ ಲೆಕ್ಕ ಹಾಕುತ್ತ ...ತಿದ್ದರು. ಆಗ ಜುಮ್ಮಿ,

"ನಿನ್ನವೆಷ್ಟು ಮರ ಕ್ವಡಿಯಾರೋದುವ್ವ ಉಗ್ರಿ" ಎಂದಳು.

"ನನ್ನವ್ವಲ್ಲ ಒಟ್ಟು ಯಪ್ಪತ್ತು ಮರ ಹೋದೊ ಕಣೆ."

"ಸೀರ ಮಾವ, ನಿನ್ನವೇಟು ವಣಗಿದ್ದವೊ?"

"ಬಾರೆ ಮ್ಯಾಲೆ ಮುವ್ವತ್ತು ಹೋದೊ. ಹಳ್ಳದ ಸಾಲಲ್ಲಿ ...ಪ್ಪತ್ತು ಹೋಗ್ಯವೆ."

"ಹಳ್ಳದ ಸಾಲಲ್ಲಿ ಹೋಗಬಾರದಲ್ಲಾ?"

"ಬೋರಿಂಗ್ ಬಾವಿ ತಗಿಯೋರು ನ್ಯಲನ್ಯಲ್ಲ ತಥಾನ್ ...ಸು ಮಾಡ್ಯವುರೆ."

"ಈ ಬೋರಿಂಗ್ ಬಾವಿ ಬಂದ ಮ್ಯಾಲೆ ಕಂಡ್ಯ ...ದ ಜಲಕಣ್ಣು ಮುಚಗಂಡೋಗಿದ್ದು" ಎಂದ ಕಾಳಮಾವ.

"ಇನ್ನೊಂದು ವಿಸಿಯ ಗೊತ್ತೆ ಮಾವ" ಎಂದ ಉಗ್ರಿ.

"ಏನು?"

"ತೆಂಗಿನ ಮರವ ನೀನು ಬ್ಯಳಿಸಿದ್ದಿ ನೋಡು, ಅಂಗೆ ...ದಲ್ಲಿ ಬ್ಯಳಿಸಿದವು ವಣಿಗೋಗಿಲ್ಲ. ಆದ್ರೆ ಈ ...ರ್‌ವೆಲ್ ನೀರಿಂದ ಬ್ಯಳದ ಮರ ನೀನು ನೀರು ...ಪ್ರಿ ಫಲ ಇಲ್ಲ ಅಂದ್ರೆ ಇಲ್ಲ ಅನ್ನಂಗವೆ."

"ಅದೇನಾರ ಆಗ್ಲಿ, ನೂರಾರು ವರಸದ ತ್ವಾಟ ವಣಗಿ ...ದವಲ್ಲ ಹೇಳು" ಎಂದು ಕಾಳಮಾವ ದುಗುಡದಿಂದ ...ತ್ತಿರುವಾಗ ಕಾಣಿಸಿಕೊಂಡ ವಾಟಿಸ್ಸೆ.

"ಒಂದು ಗುಡ್‌ನ್ಯೂಸು ದೊಡಪ್ಪ" ಎಂದ.

"ಏನ್ಲ ಅದು?"

"ನಮ್ಮ ಪಿನ್ನಯ್ಯ ಉಪರಾಷ್ಟ್ರಪತಿ ಆಯ್ತಾ ಅವುನೆ."

"ಅವುನ್ಯಾರ್ಲ ಪಿನ್ನಯ್ಯ ಅಂದ್ರೆ" ಎಂದಳು ಜುಮ್ಮಿ.

"ಯಂಕಯ್ಯ ನಾಯ್ಡು ಕಣಕ್ಕ"

"ಅವುನು ಉಪರಾಷ್ಟ್ರಪತಿಯಾದನೆ" ಎಂದ ಉಗ್ರಿ.

"ಯಾಕೆ ನಿನಿಗೆ ಗೊತ್ತಿಲವೇನೊ ಉಗ್ರಿ. ಪಾಪ ಆ ...ಡಿ ರಾಷ್ಟ್ರ ಆಳೋ ಅಂತ ಜನಗಳೇಯಿಲ್ಲ, ಅದ್ಕೆ ...ದ ಪಿನ್ನಯ್ಯನ ಪೆದ್ದಯ್ಯನ ಮಾಡಕ್ಕೆ ವಂಟವುರೆ."

"ಈ, ಹಿಂದೆ ರಾಷ್ಟ್ರಪತಿಯಾಗೋರು ...ರಾಷ್ಟ್ರಪತಿಯಾಗೋರ್‍ಲ್ಲ ಯಂಗಿದ್ರು. ಆದ್ರಿವತ್ತು ...ಕಯ್ಯನಂಥೋನು ಉಪರಾಷ್ಟ್ರಪತಿಯಾಯ್ತನೆ ಅಂದ್ರೆ ...ಕ ಇನ್ನ ಯಂತ್ಯಂಥೋರು ಬತ್ತರೊ ಏನೊ" ಎಂದ ...

"ಯಾಕವುನು ಸರಿಲ್ವೇನ್ಲ?" ಎಂದ ಸೀರ.

"ಸರಿಯಾಗಿದುವನೆ ಬಿಜೆಪಿ ಕಣೊ."

"ಬಿಜೆಪಿಯಾದ್ರೇನಂತೆ ತಗೊ ಅವುನು ಇರ್ಲಿ."

"ಚಿಗಪ್ಪ ನೀನು ಆ ತರ ಮಾತಾಡಬ್ಯಾಡ. ಒಬ್ಬ ಮನ್ಸ ಬಿಜೆಪಿ ಅಂದೇಟಿಗೆ ಅವುನು ಆರ್‌ಎಸ್‌ಸ್ನಾಗಿರತನೆ. ಭಜರಂಗಿ ಆಗಿರತನೆ. ವಿಶ್ವಹಿಂದೂ, ರಾಮಸೇನೆ, ಮಂಗಸೇನೆ, ಕೊಂಗಸೇನೆ... ಹಿಂಗೆ ಏನೇನೊ ಆಗಿರತನೆ. ಅಂಥೋರು ಇಂಥಾ ದೇಸದ ಪ್ರಧಾನಿ, ರಾಷ್ಟ್ರಪತಿ ಆಗದು ಒಂಥರಾ ದುರಂತ. ಯಾಕಂದ್ರೇ, ಇದೇ ಯಂಕಯ್ಯ ರೈತರ ಬ್ಯಾಂಕ್ ಸಾಲಮನ್ನಾ ಮಾಡಬಾರ್ದು ಅಂದಿದ್ದ. ಅವುನಿಗೆ ರೈತರ ಕಂಡ್ರಾಗದಿಲ್ಲ, ಸಾಬರ ಕಂಡ್ರಾಗದಿಲ್ಲ, ದಲಿತ್ರ ಕಂಡ್ರೂ ಆಗದಿಲ್ಲ. ಅಂಥೋನು ಉಪರಾಷ್ಟ್ರಪತಿ ಆಯ್ತನೆ ಅಂದ್ರೇ ಮುಂದೆ ಏನೇನಾಯ್ತದೊ?"

"ಏನು ಆಗದಿಲ್ಲ ಕಣೊ ವಾಟಿಸ್ಸೆ. ಉಪರಾಷ್ಟ್ರಪತಿ ಏನು ಮಾಡಕ್ಕಾದತ್ತೂ, ಅವುನಷ್ಟಕವುನಿರತನೆ ಅಷ್ಟೆಯ."

"ಮಿಸ್ಟರ್ ಉಗ್ರಿ, ಕ್ಯಟ್ಟ ಜನಗಳು ಯಾವತ್ತೂ ಸುಮ್ಮನಿರದಿಲ್ಲ ತಿಳಕ. ನೋಡಾಗ್ನೆ ಎಡೂರಪ್ಪ ಡೆಲ್ಲಿಗೋಗಿ ಕರ್ನಾಟಕನೆ ಸರಿಲ್ಲ, ಸರ್ಕಾರ ತಗದಾಕಿ ಅಂತ ಚಳವಳಿ ಮಾಡ್ತ ಅವುನಂತೆ."

"ಅವುನೇನೊ ಕರ್ನಾಟಕಕ್ಕೆ ಬೆಂಕಿ ಹಾಕ್ತಿವಿ ಅಂದನಂತೆ, ನಿಜವೇನ್ಲ?" ಎಂದಳು ಜುಮ್ಮಿ.

"ಹಾಕ್ತಿವಿ ಅಂದಿಲ್ಲ ಕಣಕ್ಕ, ಬೀಳ್ತದೆ ಅಂದವುನೆ."

"ಎಲ್ಲಿಂದ ಬಿದ್ದತಂತೇ?"

"ಕಲ್ಲುಡಕ ಪ್ರಭಾಕರನ್ನ ಅರೆಸ್ಟ್ ಮಾಡಿದ್ರೆ ಬೆಂಕಿ ಬೀಳ್ತದೆ ಅಂದವುನೆ. ಬೀಳ್ತದೆ ಅಂದ್ರೆ, ಅವುನ ಕೈಲಿ ದೊಂದಿ ಅದೆ ಅಂತ. ಅಲವೆ ದೊಡಪ್ಪ"

"ಎಡೂರಪ್ಪ ಕರ್ನಾಟಕ ಆಳಿದೋನು. ಅವುನ ಬಾಯಿಲಿ ಅಂತ ಮಾತು ಬರಬಾರ್ದು ಕಂಢ" ಎಂದ ಕಾಳಮಾವ.

"ಬಿಜೆಪಿ ಪಾರ್ಟಿಲಿದ್ರೆ ಅಂತ ಮಾತು ಬತ್ತವೆ ದೊಡಪ್ಪ ಅದೆ ಅವುನು ಕೆಜೆಪಿಲಿದ್ದಾಗ ಅಂಗೆ ಮಾತಾಡತಿದ್ನೆ. ಪಾರ್ಟಿಲಿ ದೋಷ ಇರದ್ರಿಂದ ಅಂಗೆ ಮಾತಾಡ್ತೈಬೇಕು."

"ವಾಟಿಸ್ಸೆ ಹೇಳದು ನಿಜಕಣ ಮಾವ. ನಾನೇ ನೋಡಿದ್ದಿನಿ, ಜಂತಾ ದಳದಲ್ಲಿದ್ದೊರು, ಕಾಂಗ್ರೆಸ್ಸಲಿದ್ದೊರು ಏಷ್ಟು ಚನ್ನಾಗಿ ಮಾತಾಡತಿದ್ರು ಅಂದ್ರೆ ಕೇಳಂಗಾಗದು. ಅಮ್ಯಾಲೆ ಬಿಜೆಪಿಗೋದ ಮ್ಯಾಲೆ ಅವು ಮಾತಾಡದ ಒಂದು ಗಳಿಗೆ ಕೇಳಕ್ಯಾಗದಿಲ್ಲ, ಅದ್ಯಾಕ್ಲ ಅಂಗೆ?"

"ಅದ್ಯಾಕಂಗೆ ಅಂದ್ರೆ ಏನೇಳನಕ್ಕ, ಕಚ್ಚೆ ಯಾಕೆ ವಾಸನೆ ವಡಿತದೆ ಅಂದ್ರೆ, ಅದು ರಕ್ಷಣಾ ಕಾರ್ಯ ನಿರ್ವಯಿಸಿದ ಪ್ರದೇಶನೆ ಅಂತದು. ಅದ್ಕೆ ಆ ಪಾರ್ಟಿಲಿರೊ ಮನುಸರ್‍ಯಲ್ಲ ವಡಿತಿವಿ, ಚಚ್ಚತಿವಿ, ಬೆಂಕಿ ಹಚ್ಚತಿವಿ ಅಂತವೆ. ಆ ಶೋಭಕ್ಕನಂತೂ ನಾವು ಶೆಂಡರಲ್ಲ ಅಂದುಬುಟ್ಟು."

"ಸರಿ, ಈಟುದಿನ್ಯಾಕೆ ಮದಿವಾಗಿಲವಂತೆ?"

"ಅದವುಳ ಪರಸೋನಲ್ ವಿಷಯ. ಅಂಗೆ ನೋಡಿದ್ರೆ ನಿಂದು ಲೇಟ್ ಮ್ಯಾರೇಜಲವೇನಕ್ಕ."

"ಸಸ್ನೆ ಕುಂತಗಳ್ಳ, ರುಸ್ಯಂತಾದ ಯರಡೆ ವರುಷಕ್ಕೆ ಮದಿವಾಗಿದ್ದೆ ನಾನು."

"ಕೆಲವೆಣ್ಣಮಕ್ಕಳ ಬಾಳದಿನ ಮನೇಲಿ ಮಡಿಕಳಕ್ಕೆ ಹೆದ್ರಿಕಂಡು ಜಲ್ದಿ ಮದುವೆ ಮಾಡ್ತರೆ ಅಲವೇನೆ?" ಎಂದ ಉಗ್ರಿ.

"ಏನ್ಲ ಅಂಗಂತಿ ನೀನು? ತವುರ ಮನೆಲಿದ್ದಾಗ ಕೂಲಿಗೊಯ್ತಿದ್ದೆ, ಗಂಡನ ಮನಿಗೆ ಬಂದು ಸಂಸಾರ ಮಾಡ್ತಯಿದ್ದಿನಿ. ರಾಜಕೀಯ ಮಾಡ್ತಯಿದ್ದಿನಿ. ಯಾರೂ ಪಲ್ಲಿಡದು ನೋಡಂಗಿಲ್ಲ ಗೊತ್ತೆ?"

"ಸಿಟ್ಟಾಗಬ್ಯಾಡ ಕಣಕ್ಕ. ನಿನ್ನಿಂದ ಶೋಭಕ್ಕ ಕಲಿಯದು ಭಾಳ ಅದೆ. ಅವಳಿಗೆ ಒಂದಿಷ್ಟು ಸರಿಯಾಗಿ ಮಾತಾಡದ ಕಲುಸು. ಅಮ್ಯಾಲೆ ಗಂಟ್ಳ ಸ್ವಲುಪ ಕಡಮೆ ಮಾಡಿಕಳಕ್ಕೇಳು. ಯಾವನು ಯಾವಳನಾರ ಮದಿವಾಯ್ತನೆ. ನೀನು ಬೇಕಾದ್ರೆ ಆಗು. ಇಲ್ಲ ಅಂದ್ರೆ ಸನ್ನೆಸಿಯಂಗೆ ಇರು ಅಂತ ಹೇಳಕ್ಕ."

"ನೀನೇ ಹೇಳ್ಳ."

"ಅವುಳು ಗಂಡುಸರ ಮಾತ ಕೇಳಲ್ಲ."

"ಅಂಗರೆ ಹೆಂಗಸರ ಕೈಲಿ ಹೇಳಸು."

"ಹೆಂಗಸರ ಕಂಡ್ರಾಗದಿಲ್ಲ."

"ಅವುಳು ಮಾತಾಡ್ದಿ ಸುಮ್ಮನಿರೊ ವಾಟಿಸ್ಸೆ. ಅವುಳು ಜಾಸ್ತಿ ಮಾತಾಡಿದಂಗೂ ವಳ್ಳೆದು. ಈಗಾಗ್ಲೆ ಬಿಜೆಪಿಗಳು ಮರೆಲಿ ಮಾತಾಡದ ಕೇಳಿಸಿಗಂಡ್ರೆ ಒಂದಿನ ಅವುರೆ ಬಾಯಿ ಮುಚ್ಚುಸ್ತರೆ" ಎಂದ ಉಗ್ರಿ.

"ಎದುರು ಪಾರ್ಟಿಯೋರ ಪಟೇಲ್ರು ಬೈತಿದ್ರು. ಎಷ್ಟು ಚನ್ನಾಗಿ ಬೈತಿದ್ರು ಅಂದ್ರೆ ಯಲ್ಲ ಒಪ್ಪಿಗಳರಪ್ಪ" ಎಂದ ಸೀರ.

"ಪಟೇಲ್ರು ಗ್ರೇಟು ಚಿಗಪ್ಪ, ಅವುರು ಸೋನಿಯಾ ಗಾಂಧಿಯ ಏನೂ ಬೈತಿರಲಿಲ್ಲ, ಆದ್ರೆ ಕಾಂಗ್ರೆಸ್ಸಿನೋರಿಗೆ ಕುಣಿಸರಯ್ಯ ಅವುಳ ಕುಣಿಸಿದಂಗೂ ನಿಮಿಗೆ ಕಾಸು ಅಂತ ಕಿಚಾಯಿಸೋರು" ಎಂದ ವಾಟಿಸ್ಸೆ.

"ಊ ಕಣೊ ವಾಟಿಸ್ಸೆ, ವಿಶ್ವಸುಂದ್ರಿ ಮೇಳವ ಪ್ರಮೀಳ ನೇಸರ್ಗಿ ಟೀಕೆ ಮಾಡಿದ್ಕೆ, ನಿನಿಗೂ ಅದಕ್ಕೂ ಸಮಂಧ ಇಲ್ಲ, ಸುಮ್ಮನಿರಮ್ಮ ಅಂದಿದ್ರು" ಎಂದ ಉಗ್ರಿ.

"ಅದಕ್ಕಿಂತ ಅವುನು ಸೀತಾರಾಮ ಕೇಸರಿಗೆ ಅಂದಿದ್ದ ಮಾತು ಇವತ್ತಿಗೂ ಗೆಪ್ತಿಗೆ ಬತ್ತದೆ ಕಂಢ" ಎಂದ ಕಾಳಮಾವ.

"ಅದ್ಯಾವ ಮಾತು ದೊಡಪ್ಪ?"

"ತ್ವಾಟ ಹಾಳಾಗವಾಗ ಮಂಗನ ಮುಸುಡಿ ಕಾಯಿ ಬುಡ್ತದೆ ಅಂಗೆ ಈ ಕೇಸರಿ ಅಂದಿದ್ದ."

"ಊ ದೊಡಪ್ಪ, ಪಟೇಲ್ರು ಏನೇಳಿದ್ರೂ ಸರಿಯಾಗೇಳರು. ಈ ಕಾಂಗ್ರೆಸಿನೋರತ್ರ ಸೀಮೆಯಣ್ಣೆ ಡಬ್ಬದೆ. ಬಿಜೆಪಿಗಳತ್ರ ಬೆಂಕಿ ಕಡ್ಡದೆ. ಯಾವಾಗ ಅಂದ್ರಾವಾಗ ಬೆಂಕಿ ಹಚ್ಚತರೆ ಅಂದಿದ್ರು. ಆ ಮಾತು ಈಗ ನಿಜಾಯ್ತಾ ಅದೆ ನೋಡು. ಈ ಸಿದರಾಮಯ್ಯನ ಸರಕಾರ ಬಂದೇಟಿಗೆ ದಕ್ಷಿಣ ಕನ್ನಡದ ಕಲ್ಲಡಕ, ಕಟೀಲು, ಭಜರಂಗದವರ ಬಲಿ ಹಾಕಿದ್ರೆ ಬಾಲ ಮುದಿರಿಕಳರು. ಅಂಗೆ ಮಾಡಲಿಲ್ಲ, ಇವತ್ತವುರು ಹೆಚ್ಚಗಂಡವುರೆ."

"ಉರುದೋಟೊಂದಿನ ತಿರಿತಲೆ ಬುಡ್ಡ" ಎಂದ ಕಾಳಮಾವ. ■





ನಮ್ಮ ನಾಡು ನಮ್ಮ ಧ್ವಜ



ಸಿದ್ದರಾಮಯ್ಯ ಸರ್ಕಾರ ಕರ್ನಾಟಕಕ್ಕೆ ಪ್ರತ್ಯೇಕ ನಾಡಧ್ವಜ ವಿನ್ಯಾಸಗೊಳಿಸಲು ಒಂದು ಸಮಿತಿಯನ್ನು ರಚಿಸಿದ್ದೇ ತಡ, ಬಿಜೆಪಿಯ ಬೆಂಕಿನವಾಬರಿಗೆ, ಭಂಡ ಪುಂಗಿದಾಸರಿಗೆ ಹೇಗೆ ಪ್ರತಿಕ್ರಿಯಿಸಬೇಕೆಂದೇ ಗೊತ್ತಾಗಲಿಲ್ಲ. ಇತ್ತ ಧ್ವಜ ಬೇಕು ಎಂದರೆ ಸಿದ್ದು ಸರ್ಕಾರದ ನಡೆಯನ್ನು ಒಪ್ಪಿಕೊಂಡಂತೆ, ಅತ್ತ ಬೇಡ ಎಂದರೆ ಕನ್ನಡಿಗರ ಕೋಪಕ್ಕೆ ಮತ್ತು ನಾಗಪುರದಲ್ಲಿರುವ ಚೆಡ್ಡಿ ಬಾಸ್‌ಗಳ ವಿಕೋಪಕ್ಕೂ ಗುರಿಯಾದಂತೆ. ಆದ್ದರಿಂದ ಸಂವಿಧಾನ (ಆ ಸಂವಿಧಾನವನ್ನು ಸ್ವತಃ ಬಿಜೆಪಿಯ ಗಂಡಾಳುಗಳು ಮತ್ತು ಹೆಣ್ಣಾಳುಗಳೂ ಸೇರಿದಂತೆ ಆರೆಸ್ಸೆಸ್‌ನ ಚೆಡ್ಡಿಗಳು ಒಪ್ಪಿಕೊಳ್ಳುವುದಿಲ್ಲ ಎಂಬುದನ್ನು ಪಕ್ಕಕ್ಕಿಟ್ಟು), ರಾಷ್ಟ್ರ ಧ್ವಜ, ದೇಶಭಕ್ತಿ ಎಂದೆಲ್ಲ ಅಬ್ಬರಿಸಿದರು.

ಆದರೆ ಸಾಮಾಜಿಕ ಜಾಲತಾಣಗಳಲ್ಲಿ ನಾಡಧ್ವಜಕ್ಕೆ ಭರಪೂರ ಬೆಂಬಲ ವ್ಯಕ್ತವಾಯಿತು. ಆದರಲ್ಲೂ ದೆಹಲಿ ಕೇಂದ್ರಿತ ಟಿವಿ ಚಾನೆಲ್‌ಗಳು ಕನ್ನಡಿಗರು ನಾಡಧ್ವಜ ಬೇಕೆಂದಿದ್ದನ್ನೇ ದೇಶದ್ರೋಹಕ್ಕೆ ಸಮೀಕರಿಸಿ, "ಅಮೆರಿಕದಲ್ಲಿರುವಂತೆ ಇಲ್ಲೂ ಪ್ರತಿ ರಾಜ್ಯಕ್ಕೆ ಪ್ರತ್ಯೇಕ ಧ್ವಜ ಬೇಕೆನ್ನುವವರು ಅಮೆರಿಕಕ್ಕೆ ಹೋಗಲಿ" ಎಂದು ಫರ್ಮಾನು ಹೊರಡಿಸಿದಾಗ, ಎಲ್ಲರೂ ಆಕೆಗೆ ಕ್ಯಾಕರಿಸಿ ಉಗಿಯಲಾರಂಭಿಸಿದರು. ಈ ಎಲ್ಲದರ ಹಿನ್ನೆಲೆಯಲ್ಲಿ ವ್ಯಕ್ತವಾದ ಹಲವು ಅಭಿಪ್ರಾಯಗಳನ್ನು ಇಲ್ಲಿ ನಮ್ಮ ಓದುಗರಿಗೆ ನೀಡುತ್ತಿದ್ದೇವೆ.

ಮೊದಲು ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ಫೇಸ್‌ಬುಕ್‌ನಲ್ಲಿ ಪ್ರಕಟಿಸುವುದನ್ನು ನೋಡುವ:

ಸಿಎಂ ಆಫ್ ಕರ್ನಾಟಕ: ನಾಡಧ್ವಜದ ಕುರಿತು ಅನಗತ್ಯ ವಿವಾದವನ್ನು ಎಬ್ಬಿಸಲು ಕೆಲಶಕ್ತಿಗಳು ಮುಂದಾಗುತ್ತಿರುವುದು ಖಂಡನೀಯ. ಈ ಕುರಿತು ಸರ್ಕಾರ ಸ್ಪಷ್ಟ ಹಾಗೂ ಖಚಿತ ನಿಲುವನ್ನು ಹೊಂದಿದೆ:

* ಕನ್ನಡ ನಾಡಿಗೆ ಪ್ರತ್ಯೇಕ ಧ್ವಜವನ್ನು ವಿನ್ಯಾಸಗೊಳಿಸಿ ಅದಕ್ಕೆ ಕಾನೂನಿನ ಸ್ವರೂಪ ನೀಡುವಂತೆ ಡಾ. ಪಾಟೀಲ ಪುಟ್ಟಪ್ಪ ಅವರೂ ಸೇರಿದಂತೆ ಹಲವಾರು ಕನ್ನಡಪರ ಹೋರಾಟಗಾರರು ಸಲ್ಲಿಸಿರುವ ಮನವಿಗಳ ಪರಿಶೀಲನೆಗೆ ಸರ್ಕಾರ ಈಗಾಗಲೇ ಸಮಿತಿಯೊಂದನ್ನು ರಚನೆ ಮಾಡಿದೆ. ಆ ಸಮಿತಿ ನೀಡುವ ಶಿಫಾರಸು ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

* ನಮ್ಮ ರಾಜ್ಯದಲ್ಲಿ ಈಗಾಗಲೇ ನಾಡಗೀತೆ ಅಧಿಕೃತವಾಗಿ ಇದೆ. ಅದೇರೀತಿ ನಾಡ ಧ್ವಜ ಇದ್ದರೆ ತಪ್ಪೇನೂ ಇಲ್ಲ. ಆದರೆ ಸರ್ಕಾರ ಈ ವಿಚಾರದಲ್ಲಿ ಪ್ರಸ್ತುತ ಯಾವುದೇ ತೀರ್ಮಾನ ಕೈಗೊಂಡಿಲ್ಲ. ಸಮಿತಿ ನೀಡುವ ವರದಿ ಆಧರಿಸಿ ಮುಂದಿನ ನಿರ್ಣಯವನ್ನು ಕೈಗೊಳ್ಳಲಾಗುವುದು.

* ಆದರೆ ಈ ವಿಚಾರಕ್ಕೆ ವಿವಾದದ ಸ್ವರೂಪ ನೀಡುವ ಪ್ರಯತ್ನ ನಡೆದಿದೆ. ಬಿಜೆಪಿ ನಾಯಕರು ಇಂಥ ವಿಷಯದಲ್ಲಿ ಅಪಪ್ರಚಾರ ಮಾಡುವುದು ಸರಿಯಲ್ಲ. ಕರ್ನಾಟಕಕ್ಕೆ ಪ್ರತ್ಯೇಕ ಧ್ವಜ ಬೇಡ ಎಂದು ಬಿಜೆಪಿಯವರು ಹೇಳಿಕೆ ಕೊಡಲಿ.

* ವಿಧಾನಸಭೆಗೆ ಚುನಾವಣೆ ಸಮೀಪಿಸುತ್ತಿದೆ ಎಂಬ ಹಿನ್ನೆಲೆಯಲ್ಲಿ ಸಮಿತಿ ರಚನೆ ಮಾಡಿಲ್ಲ. ಚುನಾವಣೆ ಇರುವುದು ಮುಂದಿನ ಮೇ ತಿಂಗಳಿನಲ್ಲಿ ನಾಳೆ ಅಥವಾ ನಾಳಿದ್ದು ಅಲ್ಲ. ಪ್ರತ್ಯೇಕ ಧ್ವಜ ಕುರಿತು ಸಂವಿಧಾನದಲ್ಲಿ ಏನಿದೆ ಎಂಬುದನ್ನು ತಿಳಿದುಕೊಂಡು ಬಿಜೆಪಿ ನಾಯಕರು ಮಾತನಾಡಲಿ.

* ರಾಜ್ಯ ಪ್ರತ್ಯೇಕ ಧ್ವಜ ಹೊಂದುವುದು ರಾಷ್ಟ್ರೀಯತೆ ಅಥವಾ ದೇಶದ ಏಕತೆಗೆ ವಿರುದ್ಧ ಅಲ್ಲ. ಇದರಿಂದ ರಾಷ್ಟ್ರಧ್ವಜದ ಮೇಲಿನ ಗೌರವ ಕಡಿಮೆ ಆಗುವುದಿಲ್ಲ. ಗೌರವ ಕೊಟ್ಟೇ ಕೊಡುತ್ತೇವೆ.

* ರಾಷ್ಟ್ರಧ್ವಜ ಯಾವಾಗಲೂ ಎತ್ತರದಲ್ಲಿ ಹಾರಾಡಬೇಕು. ಅದನ್ನು ಮೀರಿಸಿ ಮತ್ತೊಂದು ಧ್ವಜವನ್ನು ಹಾರಿಸುವ ಪ್ರಶ್ನೆಯೇ ಇಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಪ್ರತ್ಯೇಕ ಧ್ವಜ ಹೊಂದುವುದಕ್ಕೆ ಸಂವಿಧಾನದಲ್ಲಿ ಯಾವುದೇ ನಿರ್ಬಂಧ ಇಲ್ಲ.

ಈ ಹಿಂದೆ ಭಜರಂಗದ ನಾಯಕರಾಗಿದ್ದು ಆನಂತರ ಅವರ ವರಸೆಗಳನ್ನೆಲ್ಲ ಈಗ ಹೊರಬಂದಿರುವ ಮಹೇಂದ್ರ ಕುಮಾರ ಹೀಗೆ ಪ್ರಶ್ನಿಸಿದ್ದಾರೆ: ಈ ಬಿಜೆಪಿಗರು ಕರ್ನಾಟಕವನ್ನು ಏನಂತ ತಿಳಿದುಕೊಂಡಿದ್ದಾರೆ? ಮಹದಾಯಿ ವಿಚಾರದಲ್ಲಿ ಕರ್ನಾಟಕದೊಂದಿಗೆ ನಿಲ್ಲುವುದಿಲ್ಲ. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಬೆಳಗಾವಿಯಲ್ಲಿ ಮಾಡುತ್ತಿರುವ ಕಿರಿಕ್ ವಿಚಾರದಲ್ಲಿ ನಿಮ್ಮ ಸಂಸದರು ನೇರವಾಗಿ ಏಕೀಕರಣ ಸಮಿತಿಯನ್ನು ಬೆಂಬಲಿಸುತ್ತೀರಾ. ಕಾವೇರಿ ವಿಚಾರದಲ್ಲಿ ಸಂಪೂರ್ಣವಾಗಿ ನಾಟಕ ಮಾಡುತ್ತೀರಾ. ಕನ್ನಡ-ಹಿಂದಿ ವಿಚಾರ ಬಂದಾಗ ಹಿಂದಿ ಪರ ವಕಾಲತ್ತು ವಹಿಸುತ್ತೀರಾ. ಇದೀಗ ಕನ್ನಡ ಬಾವುಟದ ವಿಚಾರದಲ್ಲೂ ವಿರೋಧಿಸುತ್ತೀರಾ. ಆದರೂ ಕನ್ನಡಿಗರು ನಿಮ್ಮನ್ನು ಬೆಂಬಲಿಸಬೇಕೆಂದು ಅಪೇಕ್ಷಿಸುತ್ತಿರಾ. ಕನ್ನಡಿಗರು ನಿಮ್ಮ ಈ ಎಲ್ಲಾ ಕರ್ನಾಟಕ ವಿರೋಧಿ ನಿಲುವಿನ ನಡುವೆಯೂ ಬೆಂಬಲಿಸುತ್ತಾರೆ. ಒಟ್ಟಾರೆಯಾಗಿ ನಿಮ್ಮ ಈ ಎಲ್ಲಾ ನಿಲುವುಗಳನ್ನು ಗಮನಿಸಿದಾಗ ನೀವು ಕರ್ನಾಟಕಕ್ಕೆ ಮತ್ತು ಕನ್ನಡಿಗರಿಗೆ ಕಂಟಕಪ್ರಾಯರು ಎಂದು ಅನಿಸುತ್ತದೆ."

ಎ.ವಿ.ಕೃಷಿಕ ಎಂಬ ಯುವಕ ಹೀಗೆ ಪ್ರಶ್ನಿಸಿದ್ದಾನೆ: "'ಕರ್ನಾಟಕ'ಕ್ಕೆ ಧ್ವಜ ಬಂದ್ರೆ ದೇಶದ ಏಕತೆಗೆ ಹಾನಿ? ಕರ್ನಾಟಕ ಸರ್ಕಾರ ಕನ್ನಡ ನಾಡಗೀತೆ ಹಾಡುವುದು 'ಕರ್ನಾಟಕದ ಶಾಲೆ'ಯಲ್ಲಿ ಕಡ್ಡಾಯ ಮಾಡಿದರೆ ದೇಶದ ಏಕತೆಗೆ ಹಾನಿ? ಕರ್ನಾಟಕ ಸರ್ಕಾರ ಕನ್ನಡ ಕಲಿಕೆಯನ್ನು ಎಲ್ಲಾ 'ಕರ್ನಾಟಕದ ಶಾಲೆ'ಯಲ್ಲಿ ಕಲಿಸುವುದು ಕಡ್ಡಾಯ ಮಾಡಿದರೆ ದೇಶದ ಏಕತೆಗೆ ಹಾನಿ? 'ಕರ್ನಾಟಕ'ದಲ್ಲಿ ಹಿಂದಿ ವಿರೋಧಿಸಿದರೆ ದೇಶದ ಏಕತೆಗೆ ಹಾನಿ? ಅಲ್ಲಾ, ಈ ಏಕತೆ ಅಂದ್ರೆ ಯೆನಾ? ನನಗೆ ಗುಲಾಮಗಿರಿ ತರ ಕಾಣಿಸ್ತದೆ!!! (ಆವರಣದ ಪದಗಳನ್ನು ಭಕ್ತರು ಎರಡು ಬಾರಿ ಓದಬೇಕು)"

ಆನಂದ ರಾಮಣ್ಣ ಎಂಬ ಸಿದ್ದು ಅಭಿಮಾನಿಯ ಅಭಿಪ್ರಾಯ ಹೀಗಿದೆ: "ಚುನಾವಣೆ ಸಮೀಪಿಸುತ್ತಿದ್ದಂತೆ ಕನ್ನಡದ ಮೇಲೆ ಪ್ರೀತಿ ಉಕ್ಕುತ್ತಿದೆ ಎನ್ನುವವರ ಗಮನಕ್ಕೆ... ರಾಜ್ಯದ ಎಲ್ಲಾ ಕಡತಗಳು ಕಡ್ಡಾಯವಾಗಿ ಕನ್ನಡದಲ್ಲೇ ಇರಬೇಕೆಂದು ಅಧಿಕಾರಕ್ಕೆ ಬಂದಕೂಡಲೇ ಎಲ್ಲಾ ಇಲಾಖೆಗಳಿಗೆ ಕಟ್ಟುಪ್ಪಾಣೆ ಆದೇಶ ಹೊರಡಿಸಿದವರು ನಮ್ಮ ಹೆಮ್ಮೆಯ ಕನ್ನಡಿಗ ಮುಖ್ಯಮಂತ್ರಿ ಸಿದ್ದರಾಮಯ್ಯ... ನಾಡುನುಡಿ ಗಡಿ ಜಲ ಕಲೆ ಸಂಸ್ಕೃತಿಗಳ ರಕ್ಷಣೆಗೆ ಅಂದಿನಿಂದ ಇಂದಿನವರೆಗೂ ಸದಾಸಿದ್ಧ... ನಮ್ಮ ಕನ್ನಡದ ಸಿದ್ದ

ಬರಹಗಾರ ಮತ್ತು ಪತ್ರಕರ್ತ ಬಷೀರ್ ಬಿ.ಎಂ ಅವರು ಹೀಗೊಂದು ತೀಕ್ಷ್ಣ ಒಳನೋಟ ಬಿಡಿಸಿಟ್ಟರು: "ದೇಶದ್ರೋಹ ಹೇಗೆ ಹಂತಹಂತವಾಗಿ ತನ್ನ ವ್ಯಾಖ್ಯಾನವನ್ನು ಹಿಗ್ಗಿಸಿಕೊಳ್ಳುತ್ತಿದೆ ಎನ್ನೋದನ್ನು ಗಮನಿಸಿ. ಇದೀಗ, ಕೇಂದ್ರ ಸರಕಾರದ ಪ್ರಕಾರ ಕನ್ನಡ ಧ್ವಜ ಹಾರಿಸಿದರೆ ದೇಶದ್ರೋಹ. ಇನ್ನು ಕನ್ನಡ ಮಾತನಾಡಿದರೆ ದೇಶದ್ರೋಹ ಆಗುವ ದಿನ ಆದಷ್ಟು ಬೇಗ ಬರಲಿದೆ."

ಕನ್ನಡ ಪರ ಹೋರಾಟಗಾರ ಅರುಣ್ ಜಾವಗಲ್ ಈ ಅಂಶಗಳನ್ನು ದಾಖಲಿಸಿದರು:

1. ಮೊದಲಿಗೆ ಭಾರತ ಒಂದು ಒಕ್ಕೂಟ.

2. ಒಕ್ಕೂಟದಲ್ಲಿ ರಾಜ್ಯ ಸರಕಾರಕ್ಕೆ ತನ್ನದೇ ಆದ rights ಗಳು ಇರುತ್ತೆ.

3. ಭಾರತದ ಸಂವಿಧಾನದಲ್ಲಾಗಲಿ flag code of India ನಲ್ಲಾಗಲಿ ರಾಜ್ಯಗಳು ತಮ್ಮ ಧ್ವಜವನ್ನು ಹೊಂದಬಾರದು ಎಂದು ಹೇಳಿಲ್ಲ.

4. Flag code of India ಪ್ರಕಾರ ಭಾರತದ ತಿರಂಗ ಧ್ವಜಕ್ಕೆ ಮೊದಲ ಸ್ಥಾನ, ಅಂದರೆ ಭಾರತ ಒಕ್ಕೂ... ಧ್ವಜ ಬೇರೆಲ್ಲಾ ಧ್ವಜಗಳಿಗಿಂತಲೂ ಮೇಲೆ ಹಾರಾಡಬೇ...

5. ಕರ್ನಾಟಕ ಸರಕಾರ ತನ್ನ ಧ್ವಜವನ್ನು ಹೊಂ... ಸಂಪೂರ್ಣ ಸ್ವತಂತ್ರವಿದೆ.

6. ಪ್ರಪಂಚದಲ್ಲಿ ಅನೇಕ ಒಕ್ಕೂಟಗಳಲ್ಲಿ ರಾಜ್ಯ... ತಮ್ಮದೇ ಧ್ವಜವನ್ನು ಹೊಂದಿವೆ.

7. ರಾಜ್ಯ ತನ್ನದೇ ಧ್ವಜ ಹೊಂದಿದ ಮಾತ್ರಕ್ಕೆ ಏ... ಧಕ್ಕೆ ಅನ್ನುವುದರಲ್ಲಿ ಹುರುಳಿಲ್ಲ.

8. ಅಮೆರಿಕದ 50 ರಾಜ್ಯಗಳೂ ತಮ್ಮದೇ ಧ್ವಜ ಹೊಂದಿವೆ.

9. ಬ್ರೆಸಿಲ್‌ನ 27 ರಾಜ್ಯಗಳು ತಮ್ಮದೇ ಆದ ... ಹೊಂದಿವೆ.

10. ಆಸ್ಟ್ರೇಲಿಯಾದ 8ಕ್ಕೂ ಹೆಚ್ಚು ರಾಜ್ಯಗಳು ತಮ್ಮ... ಆದ ಧ್ವಜ ಹೊಂದಿವೆ.

11. ಜರ್ಮನಿಯ ಸುಮಾರು 16 ರಾಜ್ಯಗಳು ತಮ್ಮ... ಆದ ಧ್ವಜ ಹೊಂದಿವೆ.

12. ಪ್ರಪಂಚದ ಅನೇಕ ಒಕ್ಕೂಟದಲ್ಲಿ ರಾಜ್ಯ... ತಮ್ಮ ಧ್ವಜ ಹೊಂದಿದ ಮಾತ್ರಕ್ಕೆ ಆ ಒಕ್ಕೂಟದ ಏ... ಧಕ್ಕೆಯಾಗಿದೆಯೇ?

13. ಒಂದು ಭಾಷೆ, ಒಂದು ಧರ್ಮ, ಒ... ಊಟ, ಒಂದೇ ಡ್ರೆಸ್ ಇತ್ಯಾದಿ 'ದೇಶಕ್ಕೆಲ್ಲಾ ಒಂ... ಇರಬೇಕು ಎನ್ನುವುದರಿಂದ ಏಕತೆ ಸಾಧ್ಯವಿಲ್ಲ.

ಟೈಮ್ಸ್ ನೌ ಟಿವಿ ಚರ್ಚೆಯಲ್ಲಿ ಅರ... ಭಾಗವಹಿಸಿದಾಗ ಮಾಜಿ ಯೋಧನೊಬ್ಬ ಕರ್ನಾ... ಪ್ರತ್ಯೇಕ ಧ್ವಜ ಸಿಕ್ಕರೆ ಅದು ಕಾಶ್ಮೀರದಂತಾಗುತ್ತದೆ ಎಂ... ವಾದಿಸಿದ. ಅದನ್ನು ಅರುಣ್ ಅಲ್ಲಗಳೆದಾಗ ಆ ಮ... ಮಾಜಿ ಯೋಧ ಅರಚಲಾರಂಭಿಸಿದ. ಆಗ ಅರು... ಹೇಳಿದ ಪ್ರಶ್ನೆ: "ವಾದ ಮಾಡೋಕ್ಕೆ ಅಂಶ... ಖಾಲಿಯಾದಾಗ, ಪಾಕಿಸ್ತಾನ/ಚೈನಾ ವಿಷಯಗಳು ಚರ್ಚೆ... ಬರುತ್ತವೆ. ಸೈನಿಕರು ಗಡಿಯಲ್ಲಿ... ಎಂ... ಶುರುಮಾಡುತ್ತಾರೆ. ಈ ವಾದದಲ್ಲಿ ಹೊಸದೇನಿಲ್ಲ... ಚರ್ಚೆಯ ನಂತರ ಅರುಣ್ ತಮ್ಮ ಫೇಸ್‌ಬುಕ್ ವಾಲ್... ಹೇಗೆ ಬರೆದರು: "ಅಷ್ಟೇ ಅಲ್ಲ, ಟೈಮ್ಸ್ ನೌಗೆ ... ಮಾಡಿದ ದೆಹಲಿಯ ಒಬ್ಬ ವ್ಯಕ್ತಿ ಕರ್ನಾಟಕಕ್ಕೆ ... ಧ್ವಜ ರೂಪಿಸಲು ಹೊರಟಿರುವ ಮುಖ್ಯಮ... ಸಿದ್ದರಾಮಯ್ಯನವರನ್ನು ತಿಹಾರ್ ಜೈಲಿಗೆ ಹಾಕಿ ಗ... ಸಜೆಯ 10 ಪಟ್ಟು ಸಜೆಯನ್ನು ವಿಧಿಸಬೇಕು ಎನ್ನು... ಮಾತನಾಡಿದ. ಎಂಥ ಕರ್ಮ ಇವರದ್ದು? ಅಲ್ಲಾ ... ಭಕ್ತರಿಗೆ ನಾವು 2000 ವರ್ಷದಿಂದ ಕನ್ನಡಿಗರು ... ವರ್ಷದಿಂದ ಭಾರತೀಯರು ಅನ್ನೊ ಸತ್ಯ ಕಹಿಯಾ... ತುಂಬಾ ಸಲ ಸತ್ಯ ಕಹಿಯಾಗಿರುತ್ತೆ."


"ಕಾವೇರಿ, ಮಹದಾಯಿ ಸಮಸ್ಯೆ, ರಾಜ್ಯಗಳ ಕಿತ್ತಾಟ ಬಂದಾಗ ಕರ್ನಾಟಕ ಒಕ್ಕೂಟ ವ್ಯವಸ್ಥೆಯ... ಅನ್ನೋದು ಗೊತ್ತಿಲ್ಲೋರಿಗೆ ಈಗ ಕರ್ನಾಟಕ ಭಾರ... ಒಂದು ರಾಜ್ಯ ಅನ್ನೋದು ನೆನಪಾಗಿದೆ.... ನನ್ನ ನಾ... ನನ್ನ ಧ್ವಜ" ಎಂದವರು ಗಿರೀಶ್ ಗರಗ.

ಇನ್ನು ಲೇಖಕ ಮತ್ತು ಪತ್ರಕರ್ತ ಟಿ.ಕೆ.ದಯಾನ... ಸದಾ ತಮ್ಮ 'ಚರ್' ಎಂದು ಕಿಡಿಗೇಡಿಗಳನ್ನು ತಾ... ಪೋಸ್ಟರ್‌ಗಳ ಮೂಲಕ ಎಲ್ಲರ ಗಮನ ಸೆಳೆಯುವ... ಅವರು ಹಾಕಿದ ಒಂದು ಕಾಮೆಂಟ್ ಮತ್ತು ಪೋ... ಹೀಗಿವೆ:

"ಎಷ್ಟು ದೌಲತ್ ಇರಬೇಕು ಈ ನಾ... ಮುಸುಡಿಗಳಿಗೆ. ಆರ್ಮಿ ಅಂದ್ರೆ ಇವ್ರಪ್ಪಂದಿರ ಥರ ನ... ಗೂರ್ಖಾಗಳು ಅಂದ್ಕೊಂಡವ್ರೆ. ಇವ್ರ ಮಕ ಮೂತಿ ನೋ... ಒಂದ್ಸಲ, ಸುಟ್ ಬದನೇಕಾಯಿ ತಗಂಡು ವಂಗೆಎಣ್ಣೇಲಿ ತೇಲಿಸಿದಂಗಿದೆ."







ಭಾರತ ನನ್ನ ದೇಶ ಅದರಲ್ಲಿ ಎರಡು ಮಾತಿಲ್ಲ.. ...ವಾರು ಪ್ರಾಂತಗಳಾದ ಮೇಲೆ ಒಂದು ರಾಜ್ಯವಾಗಿ ...ಒಂದು ರೀತಿಯ ಸ್ವಾಯತ್ತತೆ ಇದೆ.. ನಮ್ಮ ಗಡಿಗಳು ...ಸಲ್ಪಟ್ಟಿವೆ, ನಮ್ಮದೇ ಭೂಪಟವಿದೆ, ನಮಗೊಂದು ...ಧಾನದತ್ತವಾದ ರಾಷ್ಟ್ರಬಾಷೆಯಿದೆ, ನಮ್ಮದೇ ...ಾನೂನುಗಳು, ನ್ಯಾಯಾಲಯಗಳು ಇವೆ, ನಮ್ಮದೇ ...ಂದೆ ರೂಪಿಸುವ ವಿಧಾನ ಸಭೆ, ವಿಧಾನ ...ದ್‌ಗಳಿವೆ.. ನಾವು ರಾಜ್ಯಕ್ಕೂ, ಕೇಂದ್ರಕ್ಕೂ ಟ್ಯಾಕ್ಸ್ ...ವೆ.. ನಮಗೊಂದು ನಾಡಗೀತೆಯೂ ಇದೆ.. ನಮ್ಮದೇ ಸಂಸ್ಕೃತಿಯೂ ಇದೆ.. ನಮಗೊಂದು ಅಸ್ಮಿತೆಯೂ ...ನಮಗೊಂದು ಧ್ವಜ ಯಾಕೆ ಬೇಡ..? (ಇಲ್ಲಿ ನಾಡಿನ ...ಷ್ಟಿಯಿಂದ ಸಂವಿಧಾನವನ್ನು ಪರಿಷ್ಕೃತಗೊಳಿಸುವುದು (...endment) ಅಗತ್ಯವಾದರೂ ಚಿಂತೆಯಿಲ್ಲ)

...ನ್ನ ನಾಡು, ನುಡಿ, ಜನ, ಜಲ, ಸಂಸ್ಕೃತಿ ನನ್ನ ... ಇದೇ ನನ್ನ ರಾಷ್ಟ್ರೀಯತೆ.. ನನ್ನ ರಾಜ್ಯದ ಹಿತದಲ್ಲಿ ...ದೇಶದ ಹಿತವೂ ಅಡಗಿದೆ.. ಇದನ್ನೇ 'ದೇಶದ್ರೋಹ' ...ವುದಾದರೆ ನಾನು ಆ 'ಬಿರುದನ್ನು' ...ಪೂರ್ವಕವಾಗಿ ಸ್ವೀಕರಿಸುತ್ತೇನೆ.." ಎಂದದ್ದು ಹಿರಿಯ ... ಸಿ.ಎಸ್.ದ್ವಾರಕಾನಾಥ್.

...ಮಾಜಿ ಮಂತ್ರಿ ಸುರೇಶ್ ಕುಮಾರ್ ಅವರೂ ಎಲ್ಲ ...ಸ್ ಸದಸ್ಯರಂತೆ ನಾಡ ಧ್ವಜವನ್ನು ವಿರೋಧಿಸಿದರು. ... ಪ್ರತಿಕ್ರಿಯಿಸಿದ ದಿನೇಶ್ ಅಮಿನ್ ಮಟ್ಟು ...ಂದರು: "'ನಮ್ಮ ರಾಜ್ಯಕ್ಕೆ ಪ್ರತ್ಯೇಕ ಧ್ವಜ ರಚಿಸುವ ...ು ಸಮಿತಿ ಘೋಷಣೆ ಮಾಡುವ ಮೊದಲು ...ಧಾನದಲ್ಲಿ ಇದಕ್ಕೆ ಅವಕಾಶವಿದೆಯೇ ಎಂಬುದನ್ನು ...ರ ಪರಿಶೀಲಿಸಬೇಕಿತ್ತಲ್ಲವೇ?'

...ನರ್ಸರಿ ವಿದ್ಯಾರ್ಥಿಗಳು ಕೇಳುವ ಈ ಪ್ರಶ್ನೆಯನ್ನು ...ವರು ನನ್ನ ಸ್ನೇಹಿತರು, 'ಸಜ್ಜನ' ಶಾಸಕರು, ಕಾನೂನು ...ಧರರು ಮತ್ತು ಮಾಜಿ ಕಾನೂನು ಸಚಿವರಾದ ...ಶ್ ಕುಮಾರ್.

...ನು ಸ್ವಾಮಿ, ಸಂವಿಧಾನದ ಪ್ರತಿಯೂ ನಿಮ್ಮ ...ಮಲ್ಲಿ ಇಲ್ಲವೇ?

...ರಾಜ್ಯಕ್ಕೆ ಒಂದು ಅಧಿಕೃತ ಬಾವುಟ ಎಂದರೆ ಅದೇನೂ ...ರ್ಣ ಧ್ವಜವನ್ನು ತಿರಸ್ಕರಿಸುವುದು ಎಂದಾಗಲೀ, ...ಂದ ಪ್ರತ್ಯೇಕವಾಗುವುದು ಎಂದಾಗಲೀ ಅರ್ಥವಲ್ಲ ...ದು ಎಂತಹ ಗಮಾರನಿಗೂ ಅರ್ಥವಾಗುತ್ತದೆ. ...ೂ ಇದೇನು ಪ್ರತ್ಯೇಕ ರಾಷ್ಟ್ರದ ಬೇಡಿಕೆಯೋ ಎಂಬಂತೆ ... ನೌ ಮತ್ತು ನ್ಯೂಸ್ 18 ಮೊದಲಾದ ಮೂರ್ಖ ...ವಾಹಿನಿಗಳು ಗಂಟಲು ಹರಿದುಕೊಳ್ಳುತ್ತಿವೆ. ಇವರಿಗೆ ...ಪ್ರದೇಶ, ಮಹಾರಾಷ್ಟ್ರ, ಮಧ್ಯಪ್ರದೇಶ, ರಾಜಸ್ತಾನ, ...ಾಖಂಡ, ಅಸ್ಸಾಂ, ಗುಜರಾತ್‌ಗಳಲ್ಲಿ ಯಾವ ...ಗಳೂ ಕಾಣಿಸುವುದೇ ಇಲ್ಲ!! ಸಮಸ್ಯೆ ಇರುವುದೆಲ್ಲ ..., ಕರ್ನಾಟಕ, ದಿಲ್ಲಿ, ಪ.ಬಂಗಾಳ ಮೊದಲಾದ ...ಗಳಲ್ಲಿ!!"

...ತ್ರಕರ್ತ ಶಶಿಧರ್ ಹೆಮ್ಮಾಡಿ ಹೀಗೆ ವ್ಯಂಗ್ಯವಾಡಿದರು: ...ರದ ತಮ್ಮ ಕಚೇರಿಯಲ್ಲಿ ರಾಷ್ಟ್ರ ಧ್ವಜ ಹಾರಿಸದವರು, ...ದಲ್ಲಿ ನಂಬಿಕೆಯೇ ಇಲ್ಲದವರು ಒಂದೇ ರಾಷ್ಟ್ರ ... ಒಂದೇ ಧ್ವಜ ಅಂತೆ."

...ಭಾರತ ಮಾತೆಯ ಕೈಯಲ್ಲಿ ಭಗವಾಧ್ವಜ ಇಟ್ಟು ...ಜ ಒಡೆಯಲು ಪ್ರಯತ್ನಿಸಿದ ಹಡಬೆಗಳಿಗೆ ನಿಷ್ಕಲ್ಮಷ ...ಟ ಕನ್ನಡ ಧ್ವಜವನ್ನು ಸಹಿಸಲು ಎಂದಿಗೂ ...ಲ್ಲ!!!" ಎಂದದ್ದು ರವಿಚಂದ್ರ ಗೌಡ.

...ಳಗಾವಿಯ ವಿಚಾರವಾದಿ ಬಸವರಾಜ್ ಇಟ್ನಾಳ್: ...ಗೀತೆಯನ್ನೇ ತಿರಸ್ಕರಿಸಿ, ಭಾರತದ ತ್ರಿವರ್ಣ ಧ್ವಜ ... ಭಗವಾಧ್ವಜ ಹಿಡಕೊಂಡು ಸಂವಿಧಾನದಲ್ಲಿ ...ಸ್ಕೃತಿ ಇಲ್ಲ ಎಂದು ಬೊಬ್ಬೆ ಹೊಡೆದ, ಕರ್ನಾಟಕದ ... ಧ್ವಜ ವಿರೋಧಿಸುವ ಮೂರ್ಖರ ಬಾಯಲ್ಲಿ ...ಧ್ವಜ ತುರುಕಿ. ಜಯ ಹೇ ಕರ್ನಾಟಕ ಮಾತೆ.

ನಿಮ್ಮ ಊರಲ್ಲಿ ಎಲ್ಲೆಲ್ಲಿ ಭಗವಾಧ್ವಜ ಹಾರುತ್ತಿದೆಯೋ, ಅದರ ಪಕ್ಕ ಅದಕ್ಕಿಂತ ಎತ್ತರದಲ್ಲಿ ತ್ರಿವರ್ಣ ರಾಷ್ಟ್ರ ಧ್ವಜ ಹಾರಿಸಿ. ಆಗ ನೋಡಿ ಆರ್‌ಎಸ್‌ಎಸ್‌ನ ಹುಸಿ ರಾಷ್ಟ್ರಭಕ್ತಿ ಹೆಂಗೆ ಊಕ ಚರಂಡಿಗಳ ತುಂಬ ಹರಿಯುತ್ತದೆ ಅಂತ. ರಾಷ್ಟ್ರ ಧ್ವಜವನ್ನು ಯಾವನಾದರೂ ಅವಮಾನಿಸಿದರೆ ಪೊಲೀಸ್ ಕಂಪ್ಲೇಂಟ್ ಕೊಡಿ."

ಪತ್ರಕರ್ತ ಕುಮಾರ್ ಬುರಡಿಕಟ್ಟಿ: "ಕರುನಾಡು ಒಂದು ರಾಷ್ಟ್ರ... ತನ್ನ ಕನ್ನಡದ ಮೇಲೆ ಹಿಂದಿ ಹೇರಿಕೆಯ ಅವ್ಯಾಹತ ಪ್ರಯತ್ನಗಳನ್ನು ಪ್ರತಿರೋಧಿಸುತ್ತಲೇ ಒಕ್ಕೂಟ ವ್ಯವಸ್ಥೆಗೆ ಧಕ್ಕೆಯಾಗದಂತೆ, ತನ್ನತನವನ್ನು ಬಿಟ್ಟುಕೊಡದೇ ಅನುಸರಿಸಿಕೊಂಡು ಭಾರತ ಒಕ್ಕೂಟದಲ್ಲೊಂದಾಗಿ ಬಾಳುತ್ತಿರುವ ನಾಡು. ವಾಸ್ತವದಲ್ಲಿ ಈಗಾಗಲೇ ಈ ಕನ್ನಡನಾಡಿಗೊಂದು ಬಾವುಟ ಇದೆ. ಬಿಜೆಪಿಯ ನಾಯಕರನ್ನೂ ಒಳಗೊಂಡಂತೆ ಎಲ್ಲರೂ ವಿವಿಧ ಸಂದರ್ಭಗಳಲ್ಲಿ (ವಿಶೇಷವಾಗಿ ಕನ್ನಡ ರಾಜ್ಯೋತ್ಸವದಲ್ಲಿ) ಅದನ್ನು ಹೆಮ್ಮೆಯಿಂದ ಹಾರಿಸುತ್ತಾರೆ. ಅಂದಮಾತ್ರಕ್ಕೆ ಅದು ಭಾರತ ಒಕ್ಕೂಟದ ವಿರೋಧಿಯಾಗುವುದಿಲ್ಲ. ಈಗಾಗಲೇ ಆಚರಣೆಯಲ್ಲಿರುವುದಕ್ಕೆ ಕಾನೂನಿನ ಮನ್ನಣೆ ಕೊಡುವುದಕ್ಕೆ ನನ್ನ ಸಂಪೂರ್ಣ ಬೆಂಬಲ ಇದೆ. ಜೈ ಭಾರತ, ಜೈ ಕರ್ನಾಟಕ..."

ಸಿದ್ದಯ್ಯ ಚಿಕ್ಕಮಾದೇಗೌಡ: "ಒಂದೇ ರಾಷ್ಟ್ರ ಧ್ವಜ, ಒಂದೇ ರಾಷ್ಟ್ರ ಲಾಂಛನ, ಒಂದೇ ರಾಷ್ಟ್ರ ಗೀತೆ, ಇವೆಲ್ಲವೂ ಯೂರೋಪಿನಿಂದ ನಮಗೆ ಕೊಡುಗೆಯಾಗಿ ಬಂದ ಆಧುನಿಕ ರಾಷ್ಟ್ರಗಳ ಪರಿಕಲ್ಪನೆಗಳು.. ಇದರ ಮುಂದುವರಿದ ಭಾಗವಾಗಿಯೇ ಒಂದೇ ಬಾಷೆ, ಒಂದೇ ಧರ್ಮ, ಒಂದೇ ಜನಾಂಗ ಎನ್ನುವ ಘೋಷಣೆಗಳು.

ಭಾಷಾವಾರು ರಾಜ್ಯಗಳ ವಿಂಗಡಣೆಯಾದಾಗ ದೇಶದ ಒಕ್ಕೂಟಕ್ಕೆ ಧಕ್ಕೆಯಾಗಲಿಲ್ಲ, ಪ್ರತಿ ವರ್ಷ ರಾಜ್ಯೋದಯ ದಿನಾಚರಣೆ ಮಾಡುವಾಗ ದೇಶದ ಒಕ್ಕೂಟಕ್ಕೆ ಧಕ್ಕೆಯಾಗಲಿಲ್ಲ, ರಾಜ್ಯಗಳಿಗೆ ಪ್ರತ್ಯೇಕ ಸರ್ಕಾರದ ವ್ಯವಸ್ಥೆ ಮಾಡಿದಾಗ ದೇಶದ ಒಕ್ಕೂಟಕ್ಕೆ ಧಕ್ಕೆಯಾಗಲಿಲ್ಲ, ರಾಜ್ಯಗಳು ಮಾತೃಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡಿಕೊಂಡಾಗ ದೇಶದ ಒಕ್ಕೂಟದ ವ್ಯವಸ್ಥೆಗೆ ಧಕ್ಕೆಯಾಗಲಿಲ್ಲ, ಆದರೆ, ಕರ್ನಾಟಕ ರಾಜ್ಯಕ್ಕೊಂದು ಬಾವುಟ ಬಯಸಿದರೆ ದೇಶದ ಒಕ್ಕೂಟಕ್ಕೆ ಧಕ್ಕೆಯಾಗುತ್ತದೆಯಂತೆ!! ಉತ್ತರ ಭಾರತದ ಬಿಜೆಪಿ ನಾಯಕರ ಹಿಡಿತದ ಕೇಂದ್ರ ಸರ್ಕಾರ ಹಿಂದಿ ಭಾಷೆ ಹೇರಿಕೆ ಮಾಡಿದರೆ ಕನ್ನಡಿಗ ಬಿಜೆಪಿಯವರು ಹಿಂದಿ ಭಾಷೆ ಹೇರಿಕೆಯನ್ನೂ ಸಮರ್ಥಿಸಿಕೊಳ್ಳತೊಡಗಿದ್ದಾರೆ. ಕನ್ನಡ ಬಾವುಟದ ವಿರುದ್ಧ ಉತ್ತರ ಭಾರತದವರು ಧ್ವನಿ ಎತ್ತಿದರೆ ಕನ್ನಡಿಗ ಬಿಜೆಪಿಯವರೂ ಅದನ್ನು ಸಮರ್ಥಿಸಿಕೊಂಡು ಮಾತನಾಡುತ್ತಾರೆ. ಕಾಶ್ಮೀರದ ಪ್ರತ್ಯೇಕತಾವಾದಿಗಳು ಹೊಂದಿರುವ ಪ್ರತ್ಯೇಕ ಬಾವುಟಕ್ಕೆ ಕನ್ನಡ ಬಾವುಟವನ್ನು ಹೋಲಿಕೆ ಮಾಡಿ ಮಾತನಾಡುತ್ತಾರೆ. ಕರ್ನಾಟಕದ ಸಂಘಪರಿವಾರದವರಿಗೆ ಕರ್ನಾಟಕದ ಮತ್ತು ಕನ್ನಡ ಭಾಷೆಯ ರಕ್ಷಣೆಗಿಂತ ತಮ್ಮ ಸಂಘದ ಅಜೆಂಡಾ ಜಾರಿಗೊಳಿಸುವುದೇ ಮುಖ್ಯವಾಗಿದೆ. ಅದಕ್ಕಾಗಿ ಕನ್ನಡ ಮತ್ತು ಕನ್ನಡ ಬಾವುಟವನ್ನು ನಾಶಮಾಡಲೂ ಇವರು ಸಿದ್ಧರಾಗಿದ್ದಾರೆ.

ಅಜೀಜ್ ಕಿರುಗುಂದ: ದೇಶಕ್ಕೊಂದು ಧ್ವಜ ಸಾಕಾದರೆ, ನಾಡಿಗೊಂದು ಧ್ವಜ ಬೇಡ ಎಂದಾದರೆ, ನಿಮ್ಮ ಧರ್ಮಕ್ಕೊಂದು ಧ್ವಜ ಯಾಕೆ ಹಿಡಿಯಬೇಕು? ತಿರಸ್ಕರಿಸಿ ಬಿಡಿ, ನಿಮ್ಮೊಂದಿಗೆ ನಾವೂ ಇದ್ದೇವೆ... (ಅಂದು ಬ್ರಿಟಿಷರ ನೆರವಿಗೆ ನಿಂತು ದೇಶವನ್ನು ವಿರೋಧಿಸಿದವರು, ಇಂದು ನಾಡ ವಿರೋಧಿಗಳಾಗಿ ಧ್ವಜವನ್ನು ವಿರೋಧಿಸಿ ನಿಂತರು.)

ರಮಾನಂದ ಅಂಕೋಲ: "ಭಾರತ ಧ್ವಜವನ್ನು ಮುಂದಿಟ್ಟು ಕನ್ನಡ ಧ್ವಜ ಹಾರಾಡದಂತೆ ತಡೆದು ಮುಂದೆ ಭಗವಾಧ್ವಜ ಹಾರಿಸುವ ಹುನ್ನಾರ ಇವರದು. ಯಾಕೆಂದರೆ ಈ ಹಿಂದೆ ತ್ರಿವರ್ಣ ಧ್ವಜವನ್ನು ವಿರೋಧಿಸಿದವರು ಇವರೇ ಅಲ್ಲವೇ...?"

ಕರ್ನಾಟಕ ವಿದ್ಯಾರ್ಥಿ ಸಂಘದ ಮುತ್ತುರಾಜು: "ನಾಡು ಇದೆ, ನಾಡ ಸರಕಾರ ಇದೆ, ನಾಡ ಕಾನೂನುಗಳಿವೆ, ನಾಡಭಾಷೆಯಿದೆ, ನಾಡಗೀತೆಯಿದೆ, ನಾಡಧ್ವಜ ಯಾಕಿರಬಾರದು?!"

ಅರವಿಂದ ಚೊಕ್ಕಾಡಿ ಹೀಗೆ ಬರೆದಿದ್ದಾರೆ: "ಇವತ್ತು ಕನ್ನಡ ಧ್ವಜದ ಬಗ್ಗೆ ತುಂಬ ಚರ್ಚೆ ಆಗುತ್ತಿದೆ. ಮಾನ್ಯ ಮುಖ್ಯಮಂತ್ರಿಯವರು ಹೇಳಿದಂತೆ ರಾಜ್ಯಗಳು ಧ್ವಜವನ್ನು ಹೊಂದಬಾರದು ಎಂಬ ಸಾಂವಿಧಾನಿಕ ನಿರ್ಬಂಧವೇನೂ ಇಲ್ಲ. ಹಲವರು ಹಾಗಿದ್ದರೆ ಜಿಲ್ಲೆಯ ಧ್ವಜ ಬೇಡವೋ ಎಂದು ಕೊಂಕು ತೆಗೆದಿದ್ದಾರೆ. ಖಂಡಿತಾ ಜಿಲ್ಲೆಯ ಧ್ವಜವನ್ನು ಮಾಡಿಕೊಳ್ಳುವುದಕ್ಕೂ ಸಂವಿಧಾನದ ಆಕ್ಷೇಪವಿಲ್ಲ (ದಕ್ಷಿಣ ಕನ್ನಡಕ್ಕೆ ಬೇಕಾದರೆ ನಾಟಿಕೆ ಧ್ವಜ ಎಂದು ಮಾಡಬಹುದು). ಮನೆಯ ಧ್ವಜವನ್ನೂ ಮಾಡಬಹುದು. ಆದರೆ ಯಾವುದೇ ಧ್ವಜವೂ ರಾಷ್ಟ್ರಧ್ವಜ ಹಾರಾಡುವಲ್ಲಿ ರಾಷ್ಟ್ರಧ್ವಜದ ಕಣ್ಣಳತೆಯಲ್ಲಿ ಅದಕ್ಕಿಂತ ಎತ್ತರದಲ್ಲಿ ಹಾರಾಡತಕ್ಕದ್ದಲ್ಲ ಎಂದು ಸಂವಿಧಾನದ ಧ್ವಜಸಂಹಿತೆ ಹೇಳುತ್ತದೆ (ಆದರೆ ರಾಷ್ಟ್ರಧ್ವಜದ ಕಣ್ಣಳತೆಯಲ್ಲಿ ಈಗಾಗಲೆ ಕೇಸರಿ ಮತ್ತು ಹಸಿರು ಧ್ವಜಗಳು ರಾಷ್ಟ್ರ ಧ್ವಜಕ್ಕಿಂತ ಎತ್ತರದಲ್ಲಿ ಹಾರಾಡುವುದನ್ನು ಅನೇಕ ಬಾರಿ ನಾನು ಕಂಡಿದ್ದೇನೆ). ಅಲ್ಲದೆ ಧ್ವಜಸಂಹಿತೆಯ ಪ್ರಕಾರ ರಾಷ್ಟ್ರಧ್ವಜವನ್ನು ಸೂರ್ಯೋದಯದಿಂದ ಸೂರ್ಯಾಸ್ತದ ನಡುವೆ ಮಾತ್ರ ಹಾರಿಸಬೇಕು. ರಾತ್ರಿ ಹಾರಿಸಬಾರದು. ಅಪರಾತ್ರಿ ಮಾಡುವುದು ವಾಮಾಚಾರದ ಕೆಲಸಗಳನ್ನಾದ್ದರಿಂದ ರಾತ್ರಿ ಧ್ವಜ ಹಾರಿಸಬಾರದೆಂಬ ಧ್ವಜಸಂಹಿತೆಯ ಕಾಳಜಿಯನ್ನೂ ನಾವು ಅರ್ಥಮಾಡಿಕೊಳ್ಳಬೇಕಿದೆ.

ಆದರೆ ಧ್ವಜಕ್ಕಿಂತ ಮುಖ್ಯವಾಗಿ ಕನ್ನಡ ಭಾಷೆಯ ಅಭಿವೃದ್ಧಿ ಆಗಬೇಕು. ಈಗಾಗಲೆ ಕರ್ನಾಟಕ ಸರಕಾರ ಕನ್ನಡ ಮಾಧ್ಯಮ ಮೀಸಲಾತಿಗೆ ಆದೇಶ ಮಾಡಿರುವುದು



ಧ್ವಜಕ್ಕಿಂತ ಹೆಚ್ಚು ಮಹತ್ವದ ಅಭಿನಂದನಾರ್ಹ ಕೆಲಸವಾಗಿದೆ.

ಇನ್ನು ಕನ್ನಡ ಧ್ವಜದ ವಿಚಾರ ಎಡಪಂಥೀಯರ ಯೋಜನೆ ಎಂದಾದರೆ ಈ ವಿಚಾರದಲ್ಲಿ ಎಡಪಂಥೀಯರ ಚಿಂತನೆ ಸರಿಯಾಗಿಯೇ ಇದೆ. ಕನ್ನಡ ಧ್ವಜವನ್ನು ಕರ್ನಾಟಕದಲ್ಲಲ್ಲದೆ ಇಂಗ್ಲೆಂಡ್‌ನಲ್ಲಿ ಹಾರಿಸ್ಲಿಕಾಗ್ತದಾ? ಇದುವರೆಗೆ ಇಲ್ಲದಿದ್ದ ಮಾತ್ರಕ್ಕೆ ಈಗ ಮಾಡಬಾರದೆಂದೇನಿಲ್ಲ. ಪ್ರಮಾಣವಚನ ಸಮಾರಂಭಕ್ಕೆ ಅಕ್ಕಪಕ್ಕದ ರಾಷ್ಟ್ರದ ಮುಖ್ಯಸ್ಥರನ್ನು ಕರೆಯುವ ಪದ್ಧತಿ ಇದುವರೆಗೆ ಇರಲಿಲ್ಲ. ಮಾನ್ಯ ಪ್ರಧಾನ ಮಂತ್ರಿಯವರು ಹೊಸದಾಗಿ ಈ ಪದ್ಧತಿಯನ್ನು ಪ್ರಾರಂಭಿಸಿದರು. ಒಳ್ಳೆಯ ಪದ್ಧತಿ ಅದು. ಒಳ್ಳೆಯದನ್ನು ಯಾಕೆ ಒಪ್ಕೋಬಾರ್ದು."

ಸಿಪಿಐಎಂ ನಾಯಕ ಜಿ.ಎನ್.ನಾಗರಾಜ್ ಅವರು ಹೀಗೆ ಅಭಿಪ್ರಾಯಪಟ್ಟಿದ್ದಾರೆ: "ನಮ್ಮ ಬಾವುಟ ಒತ್ತಾಯದ ಸಂದರ್ಭದಲ್ಲಿ - ರಾಜ್ಯಗಳ ಸ್ವಾಯತ್ತತೆ, ಕನ್ನಡ ಭಾಷೆಯ ಬೆಳವಣಿಗೆ, ಹಿಂದಿ ಹೇರಿಕೆ ಮತ್ತು ಭಾರತದ ಒಕ್ಕೂಟ ವ್ಯವಸ್ಥೆ: ಭಾರತವೆಂಬುದು ಬಹು ರಾಷ್ಟ್ರೀಯತೆಗಳ ದೇಶ ಮತ್ತು ಪ್ರಭುತ್ವ. ಇದು ಮೂಲಭೂತ ವಾಸ್ತವ. ಆದ್ದರಿಂದಲೇ 19ಕ್ಕೂ ಹೆಚ್ಚು ರಾಷ್ಟ್ರಭಾಷೆಗಳು. ಬಲಯುತವಾದ ಭಾಷಾವಾರು ರಾಜ್ಯಗಳೇ ಬಲವಾದ ದೇಶದ ಬುನಾದಿ. ಇದನ್ನೇ ಒಕ್ಕೂಟ ತತ್ವ ಎಂದು ಕರೆಯುವುದು. ರಾಜ್ಯಗಳು ಬಲವಾಗಿರುವುದು ಮತ್ತು ಎಲ್ಲ ರಾಷ್ಟ್ರಭಾಷೆಗಳು ಶಿಕ್ಷಣದ, ನ್ಯಾಯಾಂಗದ, ಆಡಳಿತದ ಜನಜೀವನದ ವಿವಿಧ ಆಯಾಮಗಳಲ್ಲಿ ಹಾಗೂ ಎಲ್ಲಾ ಹಂತಗಳಲ್ಲಿ ಉಪಯೋಗಿಸುವುದು, ಉಪಯೋಗಿಸುವ ಸಾಮರ್ಥ್ಯವನ್ನು ಬೆಳೆಸುವುದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಕರ್ತವ್ಯವಾಗಿತ್ತು.

ವಿವಿಧ ರಾಜ್ಯಗಳಲ್ಲಿ ಅಲ್ಲಿಯ ಉದ್ಯಮಗಳು ಬೆಳೆದು ಅಲ್ಲಿಯ ಜನರಿಗೆ ಕೆಲಸ ದೊರೆಯಲು ಇದರಿಂದ ಪ್ರಯೋಜನವಾಗುತ್ತಿತ್ತು. ಆದರೆ ಇದು ದೊಡ್ಡ ಕಾರ್ಪೊರೆಟ್‌ಗಳು ಭಾರತಾದ್ಯಂತ ವಿಸ್ತರಿಸಿ ಬೃಹತ್ತಾಗಿ ಬೆಳೆಯಲು ದೊಡ್ಡ ಅಡ್ಡಿ ಎಂದು ಭಾವಿಸಿದವು. ಈ ಕಾರ್ಪೊರೇಟ್‌ಗಳ ಮರ್ಜಿ ಹಿಡಿದ ಕಾಂಗ್ರೆಸ್ ಪಕ್ಷ ಮತ್ತು ಬಿಜೆಪಿ ರಾಜ್ಯಗಳಿಗೆ ಸ್ವಾಯತ್ತ ಅಧಿಕಾರ ನೀಡಲಿಲ್ಲ. ಬದಲಾಗಿ ಇದ್ದ ಸ್ವಲ್ಪ ಅಧಿಕಾರವನ್ನು ಕಿತ್ತುಕೊಂಡವು, ಭಾಷಾ ಬೆಳವಣಿಗೆಯನ್ನೂ ಹತ್ತಿಕ್ಕಿದವು.

ಮೋದಿ ಸರ್ಕಾರದಲ್ಲಿ ಯೋಜನಾ ಆಯೋಗದ ನಾಶ ಇತ್ಯಾದಿ ಅನೇಕ ಕ್ರಮಗಳ ಮೂಲಕ ದಿನದಿನವೂ ರಾಜ್ಯಗಳ ಸ್ವಾಯತ್ತತೆಯನ್ನು ಬಹುವೇಗವಾಗಿ ನಾಶಪಡಿಸುತ್ತಿದೆ. ರೈತರಿಗೆ ಲಾಭದಾಯಕ ಬೆಲೆ ನೀಡುವ ರಾಜ್ಯಗಳ ಅಧಿಕಾರವನ್ನೂ ಕಿತ್ತುಕೊಂಡಿದೆ. ಜಿ.ಎಸ್.ಟಿ ಮತ್ತೊಂದು ದೊಡ್ಡ ಧಾಳಿ.

ಹಿಂದೀ ಹೇರಿಕೆಯಂತೂ ಅನೇಕ ಇಲಾಖೆ, ಬ್ಯಾಂಕ್ ರೈಲ್ವೆ ಮೊದಲಾದವುಗಳ ಮೂಲಕ ದಿನನಿತ್ಯ ನಡೆಯುತ್ತಿದೆ. ಇದು ಕೇವಲ ಹಿಂದಿ ಹೇರಿಕೆಯಲ್ಲ, ಹಿಂದಿಯಲ್ಲಿ ಅಭಿಯಂತರ ಇತ್ಯಾದಿ ಜನರಿಗೆ ಅರ್ಥವಾಗದ ಸಂಸ್ಕೃತ ಪದಪುಂಜಗಳ ಬಳಕೆ ಹೆಚ್ಚಿಸಿ ಹಿಂಬಾಗಿಲ ಮೂಲಕ ಸಂಸ್ಕೃತದ ಹೇರಿಕೆ ಕೂಡ.

ಆದ್ದರಿಂದ ರಾಜ್ಯಗಳ ಸ್ವಾಯತ್ತತೆ ಮತ್ತು ಜನಭಾಷೆಗಳ ರಕ್ಷಣೆಯ ಬಗ್ಗೆ ಜನರಲ್ಲಿ ಉಕ್ಕೇರುತ್ತಿರುವ ಭಾವನೆಗಳು ಅವರ ಸಹಜ ಮತ್ತು ನ್ಯಾಯಬದ್ಧ ಸಿಟ್ಟು.

ಇದರಿಂದ ಆರೆಸ್ಸೆಸ್-ಬಿಜೆಪಿಗೆ ಆತಂಕವುಂಟಾಗಿದೆ. ಅದರ ಎಲ್ಲಾ ರೀತಿಯ ಅಭಿವ್ಯಕ್ತಿಯನ್ನು ವಿರೋಧಿಸುತ್ತಿದೆ. ಅವುಗಳನ್ನು ದೇಶದ್ರೋಹವೆಂದು ಬಿಂಬಿಸುತ್ತಿದೆ. ಅದರ ಜೊತೆಗೆ ಕಾಂಗ್ರೆಸ್ ಹೈಕಮಾಂಡ್‌ಗೂ ಗಾಬರಿಯಾಗಿದೆ.

ಆದರೆ ಸ್ವಾಯತ್ತತೆಯ ಪ್ರಶ್ನೆಯನ್ನು, ಹಿಂದಿ ಹೇರಿಕೆ - ಕನ್ನಡದ ಬೆಳವಣಿಗೆಯ ಪ್ರಶ್ನೆಯನ್ನು ಸಮಗ್ರವಾಗಿ ಕೈಗೆತ್ತಿಕೊಳ್ಳಬೇಕು. ಅದು ಇಂದಿನ ರೈತರ, ದಲಿತರ, ಮಹಿಳೆಯರ ಕೈಗಾರಿಕಾ ಬೆಳವಣಿಗೆ, ಯುವಜನ ಉದ್ಯೋಗದ ತುರ್ತು ಪ್ರಶ್ನೆಯಾಗಿದೆ.

ಸಂಕೇತಗಳು ಮುಖ್ಯ ಆದರೆ ಬಿಜೆಪಿ ಮತ್ತು ಕಾರ್ಪೊರೇಟ್‌ಗಳು ಜನರ ತಕ್ಷಣದ ಭಾವನೆಗಳ ಜೊತೆ ರಾಜಿಮಾಡಿಕೊಂಡು ಮೂಗಿಗೆ ತುಪ್ಪ ಸವರಲು ಬಾವುಟದಂತಹ ಸಂಕೇತಗಳನ್ನು ಒಪ್ಪಿಕೊಂಡುಬಿಡಬಹುದು.

ಹಿಂದೆ ಸದಾನಂದ ಗೌಡರು ಸರ್ಕಾರಿ ಆಜ್ಞೆಯನ್ನೇ ಹೊರಡಿಸಿರಲಿಲ್ಲವೇ! ನಂತರ ಜಗದೀಶ್ ಶೆಟ್ಟರ್ ಹಿಂತೆಗೆದುಕೊಳ್ಳಲಿಲ್ಲವೇ!


ಆದ್ದರಿಂದ ಸ್ವಾಯತ್ತತೆ ಮತ್ತು ಹಿಂದಿ ಹೇರಿಕೆ ನಮ್ಮ ಪ್ರಧಾನ ಪ್ರಶ್ನೆಯಾಗಬೇಕು."

ಒಟ್ಟಾರೆಯಾಗಿ ನಾಡಧ್ವಜದ ಪರವಾಗಿ ಇವತ್ತು ಚೆಡ್ಡಿಗಳ ಹೊರತಾಗಿ ನಾಡಿನ ಎಲ್ಲರೂ ನಿಂತಿದ್ದಾರೆ. ನಾಡಧ್ವಜದಿಂದಾಗಿ ರಾಷ್ಟ್ರದ ಧ್ವಜಕ್ಕಾಗಲಿ, ದೇಶದ ಏಕತೆಗಾಗಲಿ ಯಾವ ಧಕ್ಕೆಯೂ ಬರುವುದಿಲ್ಲ. ಆದ್ದರಿಂದ ಆದಷ್ಟು ಬೇಗ ಸಿದ್ದರಾಮಯ್ಯನವರು ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲಿ ಎಂಬುದೇ ಎಲ್ಲಾ ಪ್ರಜ್ಞಾವಂತರ ಆಶಯ.

■ ಸಾವಂತ್ರಿ



ಯಡ್ಡಿ ಸಿಡಿ ರಹಸ್ಯ



ಯಡ್ಡಿ

ಬಿಜೆಪಿಯ ಇಬ್ಬರು ಮಹಾನಾಯಕರ ನಡುವಿನ ಕಿತಾಪತಿ ಅದರ ತಾರ್ಕಿಕ ಅಂತ್ಯವೆಂಬ ಅಸಹ್ಯಕ್ಕೆ ಹೀಗೆಲ್ಲಾ ಬಂದು ಮುಟ್ಟುತ್ತದೆಯೆಂದು ಯಾರು ತಾನೇ ನಿರೀಕ್ಷಿಸಲು ಸಾಧ್ಯವಿತ್ತು?

ಸಾಹೇಬರ ಸಿಡಿ ಇದೆ ಅವನತ್ರ....! ಎಂದು ಮಾಜಿ ಉಪಮುಖ್ಯಮಂತ್ರಿ ಈಶ್ವರಪ್ಪನ ಪಿಎ ವಿನಯ್ ಹೆಚ್‌ಎಎಲ್ ಪೊಲೀಸ್ ಇನ್ಸ್‌ಪೆಕ್ಟರ್ ಮುಂದೆ ಬಾಯಿಬಿಟ್ಟಾಗಲೇ ಇದು ಕೇವಲ ಇಬ್ಬರು ನಾಯಕರ ಪಿಎಗಳ ತೀಟೆ ಶೋಕಿಯಲ್ಲ ಬದಲಿಗೆ ಅವರ ಧಣಿಗಳ ಹಲ್ಕಾ ಪುರಾಣವೆಂಬುದು ಹೊರಜಗತ್ತಿಗೆ ಗೊತ್ತಾಗದೇ ಉಳಿಯಲೂ ಇಲ್ಲ!

ಕಳೆದ ಒಂದು ತಿಂಗಳಿಂದ ಮುಸುಕಿನ ಮಾರಾಮಾರಿಯೆಂಬಂತೆ ನಡೆಯುತ್ತಿರುವ ರಾಜ್ಯ ಬಿಜೆಪಿ ಅಧ್ಯಕ್ಷ ಯಡಿಯೂರಪ್ಪ ಆಪ್ತ ಸಹಾಯಕ ಸಂತೋಷ್ ಮತ್ತು ಈಶ್ವರಪ್ಪ ಪಿಎ ವಿನಯ್ ನಡುವಿನ ಶೀತಲ ಸಮರ ದಿನಕ್ಕೊಂದು ರೂಪ ಪಡೆಯುತ್ತಿದೆ. ಮೊದಮೊದಲು ಇದನ್ನು ಇಬ್ಬರು ಪಿಎಗಳ ಶೋಕಿ ಜಗಳವೆಂದೇ ಮೀಡಿಯಾಗಳು ನಿರ್ಲಕ್ಷಿಸಿದ್ದವು ಅಥವಾ ಜಾಣ ನಿದ್ದೆ ನಟಿಸಿರಲೂ ಬಹುದು. ಯಾರೋ ಮಾಡೆಲ್ ಹುಡುಗಿಯೊಬ್ಬಳ ಜೊತೆ ಯಡಿಯೂರಪ್ಪ ಪಿಎ ಸಂತೋಷ್ ಡಿಂಗ್‌ಡಾಂಗ್ ನಡೆಸಿದ್ದರೆ ಅದಕ್ಕೂ ಈಶ್ವರಪ್ಪನ ಚೇಲಾ ವಿನಯ್‌ಗೂ ಏನು ಸಂಬಂಧ? ಈಶ್ವರಪ್ಪನ ಪಿಎ ವಿನಯ್‌ಗೆ ರೌಡಿಗಳನ್ನು ಬಿಟ್ಟು ಏಕೆ ಯಡ್ಡಿ ಪಿಎ ಅಪಹರಿಸಲೆತ್ನಿಸುತ್ತಾನೆ? ಈಶ್ವರಪ್ಪ ಆಪ್ತ ಸಹಾಯಕನನ್ನು ಅಪಹರಿಸಲು ಯಡ್ಡಿ ಪಿಎ ಸಂತೋಷ್ ಸುಪಾರಿ ಕೊಟ್ಟ ರೌಡಿ ಸಂತೋಷ್ ಯಾರು? ವಿನಯ್ ಪೊಲೀಸರಿಗೆ ನೀಡಿದ ದೂರಿನಲ್ಲಿ ಏನಿದೆ? ಏಕೆ ಪೊಲೀಸರು ಯಡ್ಡಿ ಮನೆ ಮೇಲೆ ನಡುರಾತ್ರಿ ದಾಳಿ ನಡೆಸಿದ್ದು? ಅಂಥಾದ್ದೇನೂ ಇಲ್ಲವೆಂದರೆ ಏಕೆ ಯಡ್ಡಿ ಆಪ್ತಸಹಾಯಕ ರಾತ್ರೋರಾತ್ರಿ ಮನೆ ಮಠ ತೊರೆದು ನಾಪತ್ತೆಯಾಗಿದ್ದು?

ಇದು ಈ ಪ್ರಕರಣದ ಕೆಲ ಮೂಲ ಪ್ರಶ್ನೆಗಳಾದರೆ ದಿನದಿಂದ ದಿನಕ್ಕೆ ಇದರ ನಿಗೂಢತೆಯೂ ಹೆಚ್ಚುತ್ತಲೇ ಇದೆ. ಇಬ್ಬರು ನಾಯಕರ ಪಿಎಗಳು ಮಾಡಿಕೊಂಡ ಚಿಲ್ಲರೆ ಘಾತಕದ ಕುರಿತಂತೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಷಾ ಬಿಜೆಪಿ ರಾಜ್ಯ ಉಸ್ತುವಾರಿ ಮುರಳೀಧರ ರಾವ್‌ರಿಂದ ವರದಿ ಕೇಳಿದ್ದಾದರೂ ಏಕೆ? ತನ್ನ ಪಿಎ ಯಾರಿಗೋ ಸುಪಾರಿ ಕೊಟ್ಟು ಈಶ್ವರಪ್ಪನ ಪಿಎ ಕಿಡ್ನಾಪಿಗೆ ಯತ್ನಿಸಿ ಪರಾರಿಯಾಗಿದ್ದರೆ ಅದಕ್ಕೆ ಯಡ್ಡಿ ಏಕೆ ಪೊಲೀಸ್ ಕಮೀಶನರ್ ಪ್ರವೀಣ್ ಸೂದ್‌ಗೆ ಪತ್ರ ಬರೆಯಬೇಕು? ಇದರಲ್ಲಿ ಯಡ್ಡಿಯ ಪಾತ್ರವೇನು? ಯಾರೋ ಮಾಡೆಲ್ ಹುಡುಗಿಯ ಜೊತೆ ಯಡ್ಡಿ ಪಿಎಗೆ ಸಂಬಂಧವಿದ್ದಿದ್ದರೆ ಈ ಬಗ್ಗೆ ಈಶ್ವರಪ್ಪ ಪಿಎ ಆಪಾಟಿ ತಲೆಕೆಡಿಸಿಕೊಳ್ಳುತ್ತಾನೆಂದರೆ ಅದರ ಹಕೀಕತ್ತಾದರೂ ಏನು? ಅಸಲಿಗೆ ಹುಡುಗಿಯ ಸಂಬಂಧವಿದ್ದದ್ದು ಯಡ್ಡಿಯ ಪಿಎ ಜೊತೆಗೋ ಅಥವಾ ಖುದ್ದು ಯಡ್ಡಿ ಜೊತೆಗೋ? ಸಾಹೇಬರ ಸಿಡಿಯೂ ಇದೆ ಎಂದು ಪೊಲೀಸ್ ವಿಚಾರಣೆಯಲ್ಲಿ ಬಾಯಿಬಿಟ್ಟ ಸಂತೋಷ್‌ನ ಮಾಹಿತಿಯಂತೆ ಆ ಸಿಡಿ ಯಾವುದು? ಅದು ಯಡ್ಡಿ ಮತ್ತು ಆಪ್ತ ಸಖಿ ಕರಂದ್ಲಾಜೆ ಪರಸ್ಪರ



ಶೋಭಾ

ಯೋಗಕ್ಷೇಮ ವಿಚಾರಿಸಿಕೊಳ್ಳುತ್ತಿದ್ದ ಸಿಡಿ ಅಲ್ಲ ತಾನೆ? ಅಥವಾ ಈ ಪ್ರಕರಣದ Star Attraction ಆದ ಆ ಮಾಡೆಲ್ ಹುಡುಗಿಯೇ 'ಭಾವೀ' ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ತನ್ನ 'ಸಮಸ್ಯೆ (!)' ಹೇಳಿಕೊಂಡು ನೀಡಿದ 'ಮನವಿ (!)'ಯ ಸಿಡಿ ಇಟ್ಟುಕೊಂಡು ಯಡ್ಡಿಯನ್ನು ಬ್ಲಾಕ್‌ಮೇಲ್ ಮಾಡಲು ಈಶ್ವರಪ್ಪ ತನ್ನ ಭಟ್ಟಂಗಿ ವಿನಯ್‌ನನ್ನು ಛೂ ಬಿಟ್ಟಿದ್ದ ಫಲವೇ ಇದು?


ಆರ್‌ಎಸ್‌ಎಸ್ ಪ್ರಮುಖ!

ಈ ಪ್ರಕರಣದ ಅತ್ಯಂತ ನಿಗೂಢ ಅಂಶವೆಂದರೆ ರಾಜ್ಯ ಆರ್‌ಎಸ್‌ಎಸ್‌ನ ಪ್ರಮುಖರಲ್ಲೊಬ್ಬನಾದ ರಾಜೇಂದ್ರ ಅರಸ್ ಎಂಬಾತ ಈಶ್ವರಪ್ಪ ಆಪ್ತ ಸಹಾಯಕನ ಅಪಹರಣ ಯತ್ನದ ಪ್ರಮುಖ ಆರೋಪಿಯಾಗಿರುವುದು!

ಸದ್ಯ ರಾಜೇಂದ್ರ ಅರಸ್‌ಗೆ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಮಂಜೂರಾಗಿದೆಯಾದರೂ ಓರ್ವ ಆರ್‌ಎಸ್‌ಎಸ್ ಪ್ರಮುಖನಾಗಿ ಯಡ್ಡಿ ಮತ್ತು ಈಶೂ ಪಿಎಗಳ ಚಿಲ್ಲರೆ ಕಚ್ಚಾಟದಲ್ಲಿ ತಲೆತೂರಿಸುವಷ್ಟು ಮಹತ್ವದ ಸಂಗತಿಯಂತೂ ಇದಾಗಿರಲಿಲ್ಲವಲ್ಲ! ಅಂದರೆ ಪತ್ರಿಕೆ, ಟಿವಿಗಳು ಬೊಬ್ಬೆ ಹೊಡೆದಂತೆ ಯಾರೋ ಮಾಡೆಲ್ ಲಲನೆಯ ವಿಷಯದಲ್ಲಿ ಬಿಜೆಪಿಯ ಮಹಾರಥಿಗಳಿಬ್ಬರ ಭಟ್ಟಂಗಿಗಳ ಕಚ್ಚಾಟವಂತೂ ಇದಲ್ಲವೇ ಅಲ್ಲ, ಹಾಗೊಮ್ಮೆ ತನ್ನ ಪಿಎ ನಡತೆ ಸರಿ ಇಲ್ಲವೆಂದರೆ ನಾಯಕನಾಗಿ ಯಡ್ಡಿ ಆತನನ್ನು ಕೆಲಸದಿಂದ ಕಿತ್ತು ಹಾಕಬೇಕಿತ್ತು, ಮನೆಗೆ ಬರಬೇಡ ಅಂದರೆ ಮುಗಿದುಹೋಗುತ್ತಿತ್ತು, ತನ್ನ ಪಿಎ ಮಾಡಿದ ಕಿಡ್ನಾಪ್ ಯತ್ನ ಮತ್ತು ಆ ಸಂಬಂಧ ದೊಡ್ಡಬಳ್ಳಾಪುರದ ಪಾತಕಿ ಪ್ರಶಾಂತ್‌ನ ಗ್ಯಾಂಗ್ ಈಶೂ ಆಪ್ತ ಸಹಾಯಕ ವಿನಯ್‌ನನ್ನು ಹೊತ್ತೊಯ್ಯಲು ಮಾಡಿದ ನಡುರಸ್ತೆ ದುಸ್ಸಾಹಸ, ಜೊತೆಗೆ ಈ ಕೇಸಿಗೆ ಆರ್‌ಎಸ್‌ಎಸ್ ಪ್ರಮುಖ ರಾಜೇಂದ್ರ ಅರಸ್ ಪ್ರಮುಖ ಆರೋಪಿಯಾಗಿ ದಾಖಲಾದ ಪಜೀತಿಯನ್ನು ನೇರಾನೇರ ತಾನೇ ಕಾರಣಕರ್ತನೆಂಬಂತೆ ಯಡಿಯೂರಪ್ಪ ಪೊಲೀಸ್ ಕಮೀಶನರ್ ಪ್ರವೀಣ್ ಸೂದ್‌ಗೆ ಖುದ್ದಾಗಿ ಪತ್ರ ಬರೆದು ಮತ್ತೊಂದು ಯಡವಟ್ಟಿಗೆ ಬಿದ್ದಿದ್ದಾರೆ.

ಜುಲೈ 16ರ ದಿನಾಂಕ ನಮೂದಿಸಿ ಯಡಿಯೂರಪ್ಪ ಪೊಲೀಸ್ ಕಮೀಷನರ್ ಪ್ರವೀಣ್ ಸೂದ್‌ಗೆ ಬರೆದ ಪತ್ರದ ಕೆಲ ಸಾಲುಗಳಿವು....

ಎಸ್.ಆರ್. ಸಂತೋಷ್ ನನ್ನ ಸಂಬಂಧಿ. ಕಳೆದ ಏಳು ವರ್ಷದಿಂದ ನನ್ನ ಜೊತೆ ಇದ್ದಾನೆ. ಜುಲೈ 15ರ ಮಧ್ಯರಾತ್ರಿ ಮಹಾಲಕ್ಷ್ಮಿ ಲೇಔಟ್ ಎಸಿಪಿ ಬಡಿಗೇರ್ ನೇತೃತ್ವದ ತಂಡ ಏಕಾಏಕಿ ನನ್ನ ಮನೆಗೆ ನುಗ್ಗಿ ಸಂತೋಷ್‌ನನ್ನು ಹುಡುಕಾಡಿದ್ದಾರೆ. ಮೊದಲು ಮನೆಯ ಕಾವಲುಗಾರನನ್ನು ವಶಕ್ಕೆ ಪಡೆದು ಆತನ ಜೊತೆ ಸೆಲ್ಲಾರ್ ಮೂಲಕ ಮನೆಯೊಳಕ್ಕೆ ಪ್ರವೇಶ ಮಾಡಿ ಆತ ಮಲಗುತ್ತಿದ್ದ ಕೊಠಡಿಯನ್ನು ಶೋಧಿಸಿದ್ದಾರೆ. ಅಲ್ಲಿ ಸಂತೋಷ್ ಇಲ್ಲ ಎಂದು ತಿಳಿದು ಪೊಲೀಸ್ ತಂಡ ವಾಪಸ್ಸಾಗಿದೆ. ನನ್ನ ಗಮನಕ್ಕೆ ಬಂದಂತೆ ಆತ ಈ ಪ್ರಕರಣದಲ್ಲಿ ಭಾಗಿಯಾಗಿಲ್ಲ. ಯಾರದೋ ಪಿತೂರಿ ಅಡಗಿದೆ. ಸಂತೋಷ್ ಸಿಲುಕಿಸಲು ಪ್ರಯತ್ನ ನಡೆದಿದೆ. ಈ ಬಗ್ಗೆ ನಿಮ್ಮ ಗಮನಕ್ಕೆ ತರುವ ಪ್ರಯತ್ನ ನಡೆಸಿದ್ದೆ. ಸಾಧ್ಯವಾಗದೆ ಹೆಚ್ಚುವರಿ ಆಯುಕ್ತ ಮತ್ತು ಡಿಜಿಪಿ ಗಮನಕ್ಕೆ ತಂದಿದ್ದೇನೆ. ಕೇಸ್‌ನಲ್ಲಿ ಮೂಗು ತೂರಿಸೋ ಉದ್ದೇಶ ನನಗಿಲ್ಲ, ಆದರೂ ದಯಮಾಡಿ ಪಾರದರ್ಶಕ ತನಿಖೆ ನಡೆಯುವಂತೆ ನೋಡಿಕೊಳ್ಳಿ. ಈ ಪ್ರಕರಣದಲ್ಲಿ ಉದ್ದೇಶಪೂರ್ವಕವಾಗಿ ಸಂತೋಷ್ ವಿರುದ್ಧ ಸಾಕ್ಷ್ಯಾಧಾರಗಳನ್ನು ಸೃಷ್ಟಿಸುವ ಸಾಧ್ಯತೆಯಿದೆ. ಇದನ್ನು ರಾಜಕೀಯಕ್ಕೆ ಬಳಸಿಕೊಳ್ಳುವ ಸಾಧ್ಯತೆಯೂ ಇದೆ. ಈ ರೀತಿ ನಡುರಾತ್ರಿ ಹೊತ್ತು ನನ್ನ ಮನೆಗೆ ಅಕ್ರಮ ಪ್ರವೇಶ



ಈಶ್ವರಪ್ಪ

ಮಾಡಿ ಶೋಧಿಸುವ ಬದಲು ಹಗಲಿನ ವೇಳ[...] ಯಾವುದೇ ಸಂದರ್ಭದಲ್ಲಾದರೂ ಬಂದು ನನ್ನ ಮನೆ[...] ಶೋಧಿಸಬಹುದು.

ಮೇ 11ರ ಕಿಡ್ನಾಪ್...!

ಇದು ಜುಲೈ 16ರಂದು ಯಡ್ಡಿ ಪೊ[...] ಕಮೀಷನರ್‌ಗೆ ಬರೆದ ಪತ್ರದ ಸಾರಾಂಶ. ಅಂದ[...] ಪಿಎ ಸಂತೋಷ್ ಇದರಲ್ಲಿ ಭಾಗಿಯಲ್ಲ, ಯ[...] ದುರುದ್ದೇಶದಿಂದ ಆತನನ್ನು ಸಿಲುಕಿಸಲು ಯತ್ನಿಸು[...] ಎನ್ನುವ ಯಡ್ಡಿ ಹಗಲು ಹೊತ್ತು ಬಂದು ತನ್ನ ಮನೆ[...] ಶೋಧಿಸಬಹುದು ಎಂದೂ ಹೇಳುತ್ತಾರೆ. ಪೊಲೀಸರು ಸಂತೋಷ್‌ಗಾಗಿ ಯಡ್ಡಿ ಮನೆಗೆ ನ[...] ಮತ್ತು ಸಂತೋಷ್ ಪೊಲೀಸರಿಂದ ಮರೆಸಿಕೊಂಡಿರುವುದು ಸತ್ಯವೆಂದಾಯ್ತು.

ಪ್ರಕರಣದ ಜಾಡು ಕೆದಕಹೊರಟರೆ ಈಶ್ವರಪ್ಪ[...] ವಿನಯ್ ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್ ಪೊ[...] ಠಾಣೆಯಲ್ಲಿ ಮೇ 11ರಂದು ದಾಖಲಿಸಿದ ದೂರು[...] ಇಡೀ ಪ್ರಕರಣದ ಮೂಲವಾಗಿ ಗೋಚರಿಸುತ್ತದೆ. [...] ಪೊಲೀಸರಿಗೆ ನೀಡಿದ ದೂರಿನ ಪ್ರಕಾರ ಮೇ 11[...]



ಪ್ರವೀಣ್ ಸೂದ್



ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆ ವ್ಯಾಪ್ತಿಯ [...] ದೇವಸ್ಥಾನದ ಬಳಿ ಎಂಟು ಮಂದಿ ರೌಡಿ[...] ತಂಡವೊಂದು ವಿನಯ್‌ನನ್ನು ಅಡ್ಡಗಟ್ಟುತ್ತದೆ. [...] ಕಾರಿಗೆ ಎತ್ತಿ ಹಾಕಿಕೊಳ್ಳಬೇಕೆನ್ನುವಷ್ಟರಲ್ಲಿ ಅಕ್ಕ[...] ದಾರಿಹೋಕರು ಆತನ ನೆರವಿಗೆ ಬರುತ್ತಾರೆ. ಇದ[...] ಅಪಹರಿಸಲು ಬಂದಿದ್ದ ರೌಡಿಪಡೆ ಕಂಗಾಲಾಗಿ ಹೆದರಿ ವಿನಯ್‌ನನ್ನು ಅಲ್ಲೇ ಬಿಟ್ಟು ಪರಾರಿಯಾಗು[...] ವಿನಯ್ ಕೊಟ್ಟ ದೂರಿನ ಮೇರೆಗೆ ಮಹಾಲಕ್ಷ್ಮಿ ಲೇ[...] ಪೊಲೀಸರು ಕಿಡ್ನಾಪ್ ಮಾಡಲು ಬಂದಿದ್ದವರ [...] ಹತ್ತಿದೆ. ಇಸ್ಕಾನ್ ಪಕ್ಕದ ಮೆಟ್ರೋ ನಿಲ್ದಾಣದ ಸಿಸಿ[...] ಕ್ಯಾಮೆರಾಗಳಲ್ಲಿ ಅಪಹರಣಕಾರರ ಸ್ಪಷ್ಟ [...] ದಾಖಲಾಗಿರುತ್ತದೆ.

ಅದು ಸ್ಥಳೀಯ ಪಾತಕಿಗಳಾದ ಶರವಣ, ಅಭ[...] ಮತ್ತು ಇತರೇ ನಾಲ್ವರು. ಮಹಾಲಕ್ಷ್ಮೀ ಲೇ[...] ಇನ್ಸ್‌ಪೆಕ್ಟರ್ ಭರಮಪ್ಪ ಮಲ್ಲೂರ ಈ ರೌಡಿಗ[...] ಹಿಡಿದು ತಂದು ಬಾಯಿ ಬಿಡಿಸಲಾಗಿ ಒಂದು [...] ಬಯಲಾಗುತ್ತದೆ. ಅದು ಹೆಚ್‌ಎಎಲ್ ಪೊಲೀಸ್ [...] ವ್ಯಾಪ್ತಿಯ ಹಳೇ ರೌಡಿ ಪ್ರಶಾಂತ್ ಎಂಬಾತ [...] ಒಪ್ಪಿಸಿದ ಡೀಲು. ಯಾವತ್ತು ವಿನಯ್ ಕಿ[...] ಯತ್ನಿಸಿದವರ ಬಂಧನವಾಯಿತೋ ಕಾಕತಾಳೀಯವೆ[...] ಮತ್ತೊಂದು ಘಟನೆ ನಡೆಯುತ್ತದೆ. ಬೆಂಗಳೂರು


▶▶| 1

ನಾನು ಮತ್ತು ಯಡ್ಡಿ ಪಿಎ ಸ್ನೇಹಿತರಷ್ಟೇ ಬೇರೇನಿಲ್ಲ- ಮಾಡೆಲ್!

ಇಡೀ ಕಿಡ್ನಾಪ್ ಪ್ರಕರಣದ ಕೇಂದ್ರಬಿಂದುವಾದ ಮಾಡೆಲ್ ಯಾವ ಮುಲಾಜೂ ಇಲ್ಲದೆ ಟಿವಿಗಳಲ್ಲಿ ಬಂದು 'ಅಂಥಾದ್ದೇನೂ ಇಲ್ಲ, ನಾನು ಮತ್ತು ಯಡಿಯೂರಪ್ಪನವರ ಪಿಎ ಸಂತೋಷ್ ಇಬ್ಬರೂ ಸ್ನೇಹಿತರಷ್ಟೇ. ಮೂರ್‍ನಾಲ್ಕು ವರ್ಷಗಳಿಂದ ತನಗೂ ಅವರಿಗೂ ಪರಿಚಯದ ಹೊರತಾಗಿ ಬೇರೇನೂ ಇಲ್ಲ' ಅನ್ನುತ್ತಾಳೆಂದರೆ ಹಕೀಕತ್ತು ಬೇರೆಯದೇ ಇದೆ. ಅಂದರೆ ಸಿಡಿಯಲ್ಲಿರುವುದು ತಾನಲ್ಲ ಅಥವಾ ತನ್ನದೇನನ್ನೂ ಯಾರೂ ವೀಡಿಯೋ ಮಾಡಿಲ್ಲ ಎಂಬ ಗ್ಯಾರಂಟಿ ಆಕೆಗಿದೆ.

ವಿಪರ್ಯಾಸವೆಂದರೆ ಈಕೆಯ ಹೆಸರನ್ನು ತೇಲಿಬಿಟ್ಟಿದ್ದು ಯಾರು ಅಂತ ಕೆದಕಿದರೆ ಕೇಳಿಬರುವುದು ಯಡ್ಡಿ ಆಪ್ತ ಸಹಾಯಕನ ಹೆಸರೇ ಅಂದರೆ ಸಂತೋಷನೇ ಮೇಲೆ ಬಿದ್ದು ಪತ್ರಿಕೆ, ಟಿವಿಯವರಿಗೆ ಈಶೂ ಪಿಎ ವಿನೋದ್ ತನ್ನ ಮತ್ತು ಮಾಡೆಲ್‌ಳ ನಕಲಿ ಸಿಡಿ ಸೃಷ್ಟಿಸಿ ವಿನಯ್ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಎಂದು ಪುಕಾರೆಬ್ಬಿಸಿದ್ದಾನೆ. ಇದು ತನಿಖೆಯ ದಿಕ್ಕು ತಪ್ಪಿಸುವ ತಂತ್ರ, ಅಂದರೆ ಸಿಡಿಯಲ್ಲಿರುವುದು ಧಣಿ ಯಡ್ಡಿ ಎಂದು ಯಾರೂ ತಲೆಕೆಡಿಸಿಕೊಳ್ಳಬಾರದು ಅಥವಾ ಬಿಜೆಪಿ ನಾಯಕರ ಸಿಡಿಗಳಿರುವ ಬಗ್ಗೆಯೂ ಯಾರಿಗೂ ಸುಳಿವು ಸಿಗಬಾರದೆಂಬ ಬ್ಯಾಕ್‌ಅಪ್ ಪ್ಲ್ಯಾನ್!

ಆದರೆ ಈಶ್ವರಪ್ಪ ಪಿಎ ವಿನೋದ್ ತನ್ನ ಕೆಲ ಆಪ್ತ ಟಿವಿ ಪತ್ರಕರ್ತರ ಬಳಿ ಬಾಯಿಬಿಟ್ಟಿದ್ದು ಸಿಡಿಯಲ್ಲಿರುವುದು ಸಾಹೇಬರು! ಅಂದರೆ ಯಡಿಯೂರಪ್ಪ ಸಂತೋಷನ





ಕಾರ್‌ಡ್ರೈವರ್‌ನನ್ನು ಇಲ್ಲಿ ಡಬ್ಬಲ್ ಕ್ರಾಸ್‌ಗೆ ಈಶ್ವರಪ್ಪ ಗ್ಯಾಂಗ್ ಬಳಸಿಕೊಂಡಿದೆ. ಯಡ್ಡಿ ಮನೆಯಲ್ಲಿ ನಡೆಯುತ್ತಿದ್ದ ಲೀಲಾ ವಿನೋದಗಳನ್ನು, ಯಡ್ಡಿ-ಶೋಭಾ ಜೊತೆಜೊತೆಯಾಗಿ ಎಲ್ಲೆಲ್ಲಿಗೆ ಹೋಗುತ್ತಿದ್ದರೋ ಅಲ್ಲೆಲ್ಲ ನೆರಳಿನಂತೆ ಹಿಂಬಾಲಿಸುತ್ತಿದ್ದದ್ದು ಪಿಎ ಸಂತೋಷ್ ಮತ್ತು ಆತನ ಕಾರ್‌ಡ್ರೈವರ್ ಮಾತ್ರ. ಸಂತೋಷ್‌ನ ಕಾರ್ ಡ್ರೈವರ್‌ನನ್ನೇ ಈಶ್ವರಪ್ಪ ಗ್ಯಾಂಗ್ ಬುಟ್ಟಿಗೆ ಹಾಕಿಕೊಂಡಿವೆ ಅಥವಾ ತಮ್ಮ ಕಡೆಯ ನಂಬಿಕಸ್ಥನೊಬ್ಬನನ್ನೇ ಕಾರು ಚಾಲಕನಾಗಿ ಯಡ್ಡಿ ಅಂತಃಪುರದೊಳಕ್ಕೆ ಇನ್‌ಫಿಲ್ಟರ್ ಮಾಡಿದೆ. ಇದು ಗೊತ್ತಾಗಿದ್ದೇ ತಿಂಗಳ ಹಿಂದೆ ಸಂತೋಷ್ ತನ್ನ ಕಾರು ಚಾಲಕನನ್ನು ಬದಲಾಯಿಸಿದ್ದಾನೆ. ಇಲ್ಲದೇ ಹೋಗಿದ್ದರೆ ವಿನಯ್‌ನನ್ನು ಕಿಡ್ನಾಪ್ ಮಾಡಿಸುವ ಡೀಲು ಕೂಡ ಮೊದಲೇ ಈಶೂ ಗ್ಯಾಂಗ್‌ಗೆ ಗೊತ್ತಾಗಿಬಿಡುತ್ತಿತ್ತು.

ಯಾವ ಸಂತೋಷ್‌ನ ಡ್ರೈವರ್ ಈಶ್ವರಪ್ಪ ಪಟಾಲಂ ಪರ ಸಿಡಿ ವೀಡಿಯೋ ಕೈಚಳಕ ಮೆರೆದನೋ ಆತ ಈ ಹಿಂದೆ ನಿರಾಣಿಗೂ ಡ್ರೈವರ್ ಆಗಿದ್ದನಂತೆ. ಸಂತೋಷ್ ಮೂಲಕವೇ ಕೆಲಕಾಲ ಶೋಭಕ್ಕನ ಕಾರನ್ನೂ ಓಡಿಸಿಕೊಂಡಿದ್ದನಂತೆ. ಯಡ್ಡಿ ಮಗ ರಾಘು ಜೊತೆ ಸಂತೋಷ್ ವ್ಯವಹಾರ ಸಂಬಂಧಿ ಓಡಾಟದಲ್ಲಿದ್ದಾಗಲೇ ಇದೇ ಡ್ರೈವರ್ ಜೊತೆಗಿರುತ್ತಿದ್ದದ್ದು. ಅಂದರೆ ಈಶ್ವರಪ್ಪ ಬಳಿ ಬಿಜೆಪಿಯ ಯಾವ್ಯಾವ ಅತಿರಥ ಮಹಾರಥರ ಸಿಡಿಗಳಿರಬಹುದೆಂ[...] ಸಾಹೇಬರ ರಹಸ್ಯ!

ೊಪ್ಪಳ: ಅಖಾಡಕ್ಕೆ ಇಳಿಯುತ್ತಾ ಕರಡಿ ಕುಡಿ?



2018ರ ವಿಧಾನಸಭಾ ಚುನಾವಣೆಗೆ ಕೊಪ್ಪಳದ
ಯಿಂದ ಯಾವ ಕುಟುಂಬ ಸ್ಪರ್ಧಿಸುತ್ತೆ ಅನ್ನೋದ್ರಲ್ಲಿ
ಲ್ಲ. ಆದ್ರೆ ಆ ಕುಟುಂಬದಿಂದ ಯಾರು ಸ್ಪರ್ಧಿಸುತ್ತಾರೆ
ನ್ನೋದೇ ಸದ್ಯದ ಪ್ರಶ್ನೆ. ಕೊಪ್ಪಳದ ಬಿಜೆಪಿಯೆ
ರ್ಣವಾಗಿ ಕರಡಿ ಫ್ಯಾಮಿಲಿಯ ಮುಷ್ಠಿಯಲ್ಲಿದೆ.
ಬಿಜೆಪಿಗೆ ಕರಡಿ ಸಂಗಣ್ಣನೇ ದಂಡನಾಯಕ! ಆತನ
ೇ ಸೇನಾಧಿಪತಿಗಳು!!


ಳೆದ ಎಂಎಲ್‌ಎ ಎಲೆಕ್ಷನ್‌ನಲ್ಲಿ ತನ್ನ ಪಾರಂಪರಿಕ
ಕುಟುಂಬದ ಎಳಸು ಕುಡಿ ರಾಘವೇಂದ್ರ ಹಿಟ್ನಾಳನ
ರು ಸೋತ ಜಿದ್ದು ಸಂಗಣ್ಣ ಕರಡಿಯ ಮನಸಿನಲ್ಲಿ
ಕುದಿಯುತ್ತಿದೆ. ಮುಂದೆ ನಡೆದ ಲೋಕಸಭಾ
ವಣೆಯಲ್ಲಿ ಬಸವರಾಜ್ ಹಿಟ್ನಾಳ್ ಎದುರು ನಿಂತು
ಸಹ ಆ ಜಿದ್ದು ಕಮ್ಮಿಯಾಗಿಲ್ಲ. ಹಾಗಾಗಿ 2018ಕ್ಕೆ
ಳದಿಂದ ಸಂಗಣ್ಣ ಕರಡಿಯೇ ಅಖಾಡಕ್ಕಿಳಿಯಲಿದ್ದಾರೆ
ಾಗುತ್ತಿತ್ತು.



ಆದರೆ ಯಡಿಯೂರಪ್ಪನನ್ನು ಹೊರತುಪಡಿಸಿ ಮತ್ತಾವ
ವನಿಗೂ ವಿಧಾನಸಭೆಗೆ ಟಿಕೆಟ್ ನೀಡಲಾಗುವುದಿಲ್ಲ
ಎಂಬ ಅನೌಪಚಾರಿಕ ಫರ್ಮಾನು ಬಿಜೆಪಿ ಪಾಳೆಯದಿಂದ ಹೊರಬೀಳುತ್ತಿದ್ದಂತೆಯೇ ಸಂಗಣ್ಣ ಕರಡಿ ಶಾಕ್‌ನಿಂದ ತತ್ತರಿಸಿಹೋಗಿದ್ದ. ನಂತರ ನಿಧಾನಕ್ಕೆ ಚೇತರಿಸಿಕೊಂಡ ಆತ ತನ್ನ ಮಗನನ್ನು ಅಖಾಡಕ್ಕಿಳಿಸಲು ಸಕಲ ಸಿದ್ಧತೆ ಮಾಡಿಕೊಳ್ಳುತ್ತಿದ್ದಾನೆ.



ಆರಂಭದಲ್ಲಿ ತನ್ನ ಬದಲು ಹಿರಿಯ ಪುತ್ರ ಜಿಪಂ ಸದಸ್ಯ ಗವಿಸಿದ್ದಪ್ಪ ಕರಡಿಯನ್ನು ಬಿಜೆಪಿ ಅಭ್ಯರ್ಥಿಯನ್ನಾಗಿಸಲು ಆಸಕ್ತಿ ತೋರಿದ್ದ ಸಂಗಣ್ಣ ಇದೀಗ ಎರಡನೇ ಪುತ್ರರತ್ನ ಅಮರೇಶ ಕರಡಿಯನ್ನು ಚುನಾವಣೆ ಕದನಕ್ಕಿಳಿಸುವ ಸೂಚನೆ ನೀಡುತ್ತಿದ್ದಾರೆ. ಜಿಲ್ಲೆಯ ಬಿಜೆಪಿ ರಾಜಕಾರಣದಲ್ಲಿನ ಜಾತಿ ಗ್ರಾಫಿಕ್ಸ್ ನೋಡಿದರೆ ಅಮರೇಶ ಕರಡಿಗೆ ಟಿಕೆಟ್ ಖಾತ್ರಿಯಾದಂತಿದೆ. ಯಾಕೆಂದರೆ ಕುಷ್ಟಗಿಯಲ್ಲಿ ಕುರುಬರ ಕೋಟಾದಡಿ ಅಲ್ಲಿನ ಹಾಲಿ ಶಾಸಕ ದೊಡ್ಡಣ್ಣ ಗೌಡ ಪಾಟೀಲ್‌ಗೆ ಬಿಜೆಪಿ ಟಿಕೆಟ್ ಖಚಿತ. ಈಗಾಗಲೇ ಎರಡು ಬಾರಿ ಗೆದ್ದಿರುವ ದೊಡ್ಡಣ್ಣನಿಗೆ ಟಿಕೆಟ್ ತಪ್ಪಿಸುವ ಪರ್ಯಾಯ ಶಕ್ತಿಗಳೇ ಕುಷ್ಟಗಿಯ ಬಿಜೆಪಿಯಲ್ಲಿಲ್ಲ. ಇನ್ನು ಯಲಬುರ್ಗಾ ವಿಧಾನಸಭಾ ಕ್ಷೇತ್ರಕ್ಕೆ ಲಿಂಗಾಯತ ಪಂಗಡಕ್ಕೆ ಸೇರಿದ ಹಾಲಪ್ಪ ಆಚಾರ್‌ಗೆ ಬಿಜೆಪಿ ಟಿಕೆಟ್ ನಿಕ್ಕಿಯಾಗಿದೆ. ಮೊನ್ನೆ ಯಲಬುರ್ಗಾದಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಸ್ವತಃ ಯಡಿಯೂರಪ್ಪನೇ ಹಾಲಪ್ಪನೇ ಮುಂದಿನ ಬಿಜೆಪಿ ಅಭ್ಯರ್ಥಿ ಎಂದು ಘೋಷಣೆ ಮಾಡಿಯಾಗಿದೆ.

ಇತ್ತ ಗಂಗಾವತಿ ವಿಧಾನ ಸಭಾಕ್ಷೇತ್ರಕ್ಕೆ ಲಿಂಗಾಯತ ಬಣಜಿಗ ಕೋಟಾದಡಿ ಮಾಜಿ ಶಾಸಕ ಪರಣ್ಣ ಮುನವಳ್ಳಿ ಟಿಕೆಟ್ ಗಿಟ್ಟಿಸುವುದು ಖಾತ್ರಿ. ಯಾಕೆಂದರೆ ಮುನವಳ್ಳಿಗೆ ಟಿಕೆಟ್ ಕೊಡಿಸಲು ನೆಂಟ ಕಂ ಮಾಜಿ ಸಿಎಂ ಜಗದೀಶ ಶೆಟ್ಟರ್ ಟೊಂಕಕಟ್ಟಿ ನಿಂತಿದ್ದಾರೆ. ಈ ಎಲ್ಲಾ ಜಾತಿ ಕೆಮಿಸ್ಟ್ರಿ ಅಳಿದು ತೂಗಿದರೆ ಜಿಲ್ಲೆಯಲ್ಲಿ ಒಂದು ಲಕ್ಷಕ್ಕೂ ಅಧಿಕವಾಗಿರುವ ಪಂಚಮಸಾಲಿ ಸಮಾಜಕ್ಕೆ ಒಂದು ಕ್ಷೇತ್ರವನ್ನಾದರೂ ಮೀಸಲಿಡೋದು ಬಿಜೆಪಿಗೆ ಅನಿವಾರ್ಯವಾಗುತ್ತದೆ. ಅಂತಹ ಅವಕಾಶವಿರೋದು ಕೊಪ್ಪಳ ಕ್ಷೇತ್ರದಲ್ಲಿ ಮಾತ್ರ. ಹಾಗಾಗಿ ಪಂಚಮಸಾಲಿ ಕೋಟಾದಡಿ ಅಮರೇಶ್ ಕರಡಿಗೆ ಟಿಕೇಟು ದಕ್ಕಲಿದೆ.

ಇತ್ತ ಕೊಪ್ಪಳದ ಬಿಜೆಪಿ ಟಿಕೆಟ್‌ಗಾಗಿ ರೆಡ್ಡಿ ಜನಾಂಗಕ್ಕೆ ಸೇರಿದ, ಬಿಜೆಪಿ ರಾಷ್ಟ್ರೀಯ ಕೋರ್ ಕಮಿಟಿ ಸದಸ್ಯ ಸಿ.ವಿ. ಚಂದ್ರಶೇಖರ ಕೂಡಾ ಭರ್ತಿ ಕಸರತ್ತು ನಡೆಸಿದ್ದಾನೆ. ಆದರೆ ಇದೇ ಸಮುದಾಯ ಹಾಲಪ್ಪ ಆಚಾರ್‌ಗೆ ಯಲಬುರ್ಗಾ ಟಿಕೆಟು ಸಿಗುವುದರಿಂದ ಚಂದ್ರಶೇಖರ್‌ಗೆ ಅದು ತೊಡಕಾಗಲಿದೆ. ಈ ಎಲ್ಲಾ ಅಂಶಗಳು ಅಮರೇಶ್ ಕರಡಿಗೆ ಪ್ಲಸ್ ಪಾಯಿಂಟ್‌ಗಳು. ಅಮರೇಶ ಕರಡಿ ಸಹ ಈಗಾಗಲೆ ತಾನೆ ಬಿಜೆಪಿ ಅಭ್ಯರ್ಥಿಯೆಂಬಂತೆ ಬಿಂಬಿಸಿಕೊಳ್ಳುತ್ತಿದ್ದಾನೆ. 2010ರಲ್ಲಿ ಬಂಡಿ ಹರ್ಲಾಪೂರ ಕ್ಷೇತ್ರದಿಂದ ಜಿಲ್ಲಾ ಪಂಚಾಯತ್‌ಗೆ ಸ್ಪರ್ಧಿಸಿದ್ದ ಅಮರೇಶ್, ಸಂಗಣ್ಣ ಕರಡಿಯ ಆಪ್ತನಾಗಿದ್ದ ಸುಬ್ಬಾರೆಡ್ಡಿ ಬಂಡಾಯವೆದ್ದಿದ್ದರಿಂದ ಸೋತಿದ್ದ. ಅಮರೇಶ ಕರಡಿ ಈಗ ಬಿಜೆಪಿಯಿಂದ ಸ್ಪರ್ಧಿಸಿದರೆ ಅತ್ತ ಕಾಂಗ್ರೆಸ್‌ನಿಂದ ಕುಟುಂಬದ ಪಾರಂಪರಿಕ ಎದುರಾಳಿ ಹಿಟ್ನಾಳ್ ಕಂಪನಿಯಿಂದ ಹಾಲಿ ಶಾಸಕ ರಾಘವೇಂದ್ರ ಹಿಟ್ನಾಳ್ ಅಖಾಡಕ್ಕಿಳಿಯಲಿದ್ದಾನೆ. ಈತನ ತಂದೆ ಬಸವರಾಜ್ ಹಿಟ್ನಾಳ್ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ, ಅಲ್ಲದೇ ಈತನ ಮತ್ತೊಬ್ಬ ಮಗ ಅಂದರೆ ರಾಘವೇಂದ್ರನ ಸೋದರ ರಾಜಶೇಖರ ಹಿಟ್ನಾಳ ಹಾಲಿ ಜಿಲ್ಲಾ ಪಂಚಾಯತ್ ಅಧ್ಯಕ್ಷ. ಹೀಗಾಗಿ ಕರಡಿ ಮತ್ತು ಹಿಟ್ನಾಳ್ ಕಂಪನಿಗಳ ನಡುವೆ ರೋಚಕ ಕದನ ನಡೆಯುವುದು ಹೆಚ್ಚೂಕಮ್ಮಿ ನಿಕ್ಕಿಯಾಗಿದೆ.




■ ಸ.ಶರಣಪ್ಪ ಪಾಟೀಲ್

---

೦ ⏮

ಿ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಮತ್ತು
ಎಸ್‌ಎಸ್‌ನ ಕಾರ್ಯಕರ್ತನಾದ ರಾಜೇಂದ್ರ ಅರಸ್
ಾತ ಇದ್ದಕ್ಕಿದ್ದಂತೆ ಈ ಪ್ರಕರಣದಲ್ಲಿ ತನ್ನನ್ನು
ಸದಂತೆ ಸೆಷನ್ಸ್ ಕೋರ್ಟಿನಲ್ಲಿ ನಿರೀಕ್ಷಣಾ ಜಾಮೀನಿಗೆ
ಹಾಕುತ್ತಾನೆ. ತಮಾಷೆಯೆಂದರೆ ಮಹಾಲಕ್ಷ್ಮಿ ಲೇಔಟ್
ೀಸರಿಗೆ ಸಿಕ್ಕಿಬಿದ್ದ ರೌಡಿಗಳಿಗೂ ಈತನಕ ಈತನ
ೇ ಗೊತ್ತಿರುವುದಿಲ್ಲ, ಏನೂ ಸಂಬಂಧವಿಲ್ಲದೆ ಈತನೇಕೆ
ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಪಡೆದ? ಎಂದು
ಡಿಸಿಕೊಂಡ ಪೊಲೀಸರು ರಾಜೇಂದ್ರ ಅರಸ್‌ನ ಕಾಲ್
ಲ್ಸ್‌ನ ಕೆದಕಿದಾಗ ಆತನಿಗೂ ಹೆಚ್‌ಎಎಲ್‌ನ ರೌಡಿ
ಂತ್‌ಗೂ ಮತ್ತು ಯಡ್ಡಿಯ ಪಿಎ ಸಂತೋಷ್‌ಗೂ
ಸಂಬಂಧ ಬಯಲಾಗಿದೆ.

ಮೂರು ಸಿಡಿಗಳು

ಮತ್ತೊಂದೆಡೆ ಹೆಚ್‌ಎಎಲ್ ಪೊಲೀಸರು ರೌಡಿ
ರ್ ಪ್ರಶಾಂತ್‌ನನ್ನು ಹಿಡಿದು ತಂದು ಬಾಯಿ
ಸಾಗಿ ಆತ ಬಾಯಿಬಿಟ್ಟದ್ದು ಯಡ್ಡಿ ಪಿಎ ಸಂತೋಷ್‌ನ
ನ್ನು!

ಆರ್‌ಎಸ್‌ಎಸ್ ಮುಖಂಡ ರಾಜೇಂದ್ರ
ನನ್ನು ಕರೆಸಿ ಪೊಲೀಸರು ವಿಚಾರಿಸಲಾಗಿ ಆತ
ೇಬರ ಸಿಡಿ ಇತ್ತು, ಅದನ್ನು ಇಟ್ಟುಕೊಂಡು ಈಶ್ವರಪ್ಪ
ಬರನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದ. ಸಾಹೇಬರು
ವೇ ಅಲ್ಲದೆ ಬಿಜೆಪಿಯ ಇನ್ನೂ ಮೂರ್ನಾಲ್ಕು ಮಂದಿ
ಕರ ಸಿಡಿಗಳೂ ವಿನಯ್ ಬಳಿಯಿತ್ತು, ಅವನನ್ನು
ಮಾಡಿ ಆ ಸಿಡಿಗಳನ್ನು ಕಿತ್ತುಕೊಳ್ಳೋಕೆ ಪ್ರಶಾಂತ್‌ಗೆ
ಕೊಟ್ಟಿದ್ದೆ..." ಎಂದು ಬಾಯಿಬಿಟ್ಟಿದ್ದ.

ಅಲ್ಲಿಗೆ ಯಡ್ಡಿ ಪಿಎ ಸಂತೋಷನೇ ಕಿಡ್ನಾಪ್ ಹಿಂದಿದ್ದ
ಧಾರ ಎಂದಾಯಿತು. ಆ ಪ್ರಕಾರವೇ ಸಂತೋಷ್‌ನ
ೂರಿನ ಮನೆ ಮತ್ತು ತುಮಕೂರಿನ ಬಂಗಲೆಗೆ
ದ ಮಹಾಲಕ್ಷ್ಮಿ ಲೇಔಟ್ ಪೊಲೀಸರಿಗೆ ಸಂತೋಷ್
ಇಲ್ಲ, ಫೋನ್ ಸ್ವಿಚ್ ಆಫ್. ಅಲ್ಲಿಗೆ
ರಿಸಿಕೊಂಡದ್ದು ಖಾತರಿಯಾಯಿತು. ಆ ಪ್ರಕಾರವೇ
15ರಂದು ಯಡ್ಡಿ ಮನೆ ಮೇಲೆ ದಾಳಿ ನಡೆಸಿದ
ಬಡಿಗೇರ್‌ಗೆ ಸಂತೋಷ್ ಅಲ್ಲಿಂದಲೂ
ಸಾಗಿದ್ದು ಸ್ಪಷ್ಟವಾಯಿತು. ಆದರೆ ವಿನಯ್ ನೀಡಿದ
ಗಳು ಇದೇ ಪೊಲೀಸ್ ತಂಡವನ್ನೇ ಅಚ್ಚರಿಗೆ
ತ್ತು. ಆಕೆಯ ಹೆಸರು ಪ್ರಾಚಿಗೌಡ. ನ್ಯೂ ಬಿಇಎಲ್
ನಿವಾಸಿ. ಒಂದೆರಡು ಟಿವಿ ಸೀರಿಯಲ್ಲುಗಳಲ್ಲಿ
ನೆಪಕ್ಕಷ್ಟೇ ಮುಖ ತೋರಿಸಿ ಗಾಂಧಿನಗರದ ಕೆಲ ಸಿನಿಮಾ ಧೂರ್ತರ ಜೊತೆಗೂ ಓಡಾಡಿಕೊಂಡಿದ್ದಳು. ಈಕೆಗೂ ಸಂತೋಷ್‌ಗೂ ಏರ್ಪಟ್ಟ ಸಂಬಂಧ ಕಳೆದ ಮೂರ್ನಾಲ್ಕು ವರ್ಷಗಳಿಂದ ಸಮೃದ್ಧವಾಗೇ ಇತ್ತು.




ಆದರೆ ಈಕೆಯನ್ನು ಸಂತೋಷ್ ತನ್ನ ಧಣಿ ಯಡ್ಡಿಗೆ ಪರಿಚಯಿಸಿದ್ದನೇ ಅಥವಾ ಯಡ್ಡಿ ಮತ್ತು ಈಕೆ ಹಿಂದೂತ್ವದ ಸವಾಲುಗಳ ಕುರಿತಂತೆ ನಡೆಸಿದ ಕುಶಲೋಪರಿಯ ವೀಡಿಯೋ ಅದ್ಹೇಗೋ ಈಶ್ವರಪ್ಪನ ಕೈಸೇರಿತ್ತೆ? ಇತ್ಯಾದಿ ಏನೊಂದೂ ಬಾಯಿ ಬಿಡಲಿಲ್ಲ ಅಥವಾ ವಿನಯ್ ಬಳಿಯಿದ್ದ ಸಿಡಿಗಳ ಪೈಕಿ ಒಂದು ಯಡ್ಡಿ ಮತ್ತು ಕರಂದ್ಲಾಜೆ ಲೋಕಾಭಿರಾಮ ಕುರಿತಾಗಿತ್ತೆ ಎಂಬುದು ಬಿಡಿಸಿ ಹೇಳಲಿಲ್ಲ. ಆರ್‌ಎಸ್‌ಎಸ್ ಮುಖಂಡ ರಾಜೇಂದ್ರ ಅರಸ್ ಮತ್ತು ರೌಡಿ ಪ್ರಶಾಂತ್ ಬಾಯಿಬಿಟ್ಟ ಪ್ರಕಾರ ವಿನಯ್ ಬಳಿ ಮೂರ್ನಾಲ್ಕು ಮಂದಿ ಬಿಜೆಪಿ ನಾಯಕರ ರಾಸಲೀಲಾ ಹಾಸಿದ ಸಿಡಿಗಳಿದ್ದವು. ಹಾಗೊಮ್ಮೆ ವಿನಯ್‌ನ ಕಿಡ್ನಾಪ್ ಯಶಸ್ವಿಯಾಗಿದ್ದರೆ ಈ ಹೊತ್ತಿಗೆ ಬಿಜೆಪಿ ನಾಯಕರ ಸಿಡಿಗಳೆಲ್ಲ ಸದ್ದಿಲ್ಲದೆ ಭೂಗರ್ಭ ಸೇರುತ್ತಿದ್ದವೇನೊ. ಹಾಗಾಗಲಿಲ್ಲ. ಬಿಜೆಪಿಗಂಟಿದ ಕಾಮಪಿಪಾಸೆಯ ಕರ್ಮವೋ, ಹಿಂದೂತ್ವದ ದೌರ್ಭಾಗ್ಯವೋ ಎಲ್ಲಾ ಸಿಡಿಗಳೂ ಸೇಫಾಗಿ ವಿನಯ್‌ನ ಬಳಿಯೇ ಉಳಿದುಬಿಟ್ಟಿವೆ. ಅಂದರೆ ಈಶ್ವರಪ್ಪನ ಬತ್ತಳಿಕೆಯ ಅಸ್ತ್ರಗಳಾಗಿ ಅವು ಯಡ್ಡಿ ವಿರುದ್ಧ ಯಾವ ಕ್ಷಣದಲ್ಲಾದರೂ ಹೊರಬೀಳಬಹುದು!

ಯಡ್ಡಿಯೇ ಸೂತ್ರಧಾರ?

ಯಾವತ್ತು ತನ್ನ ಪಿಎ ಸಂತೋಷ್‌ನನ್ನು ಹುಡುಕಿಕೊಂಡು ಪೊಲೀಸರು ನಡುರಾತ್ರಿ ಮನೆಗೆ ನುಗ್ಗಿದರೋ ಗಾಬರಿ ಬಿದ್ದ ಯಡ್ಡಿ ಕಮೀಶನರ್ ಪ್ರವೀಣ್ ಸೂದ್‌ಗೆ ಫೋನಾಯಿಸಿದರೆ ಮರ್ಮ ಗೊತ್ತಿದ್ದ ಸೂದ್ ಫೋನ್ ಎತ್ತಲಿಲ್ಲ. ವಿಧಿಯಿಲ್ಲದೆ ನಿಂಬಾಳ್ಕರ್‌ಗೆ ಫೋನ್ ಮಾಡಿದ್ದಾರೆ. ಎಷ್ಟೆಂದರೂ ಪೊಲೀಸ್ ತಲೆಯಲ್ಲವೆ? ಉಪಾಯವಾಗಿ "ಹೌದಾ....? ಕಮೀಶನರ್ ಸಾಹೇಬ್ರು ಫೋನ್ ತೆಗೀತಿಲ್ವಾ? ಯಾವುದಕ್ಕೂ ಒಂದು ಲೆಟರ್ ಹಾಕಿಬಿಡಿ ಸಾರ್..." ಎಂದು ಯಡ್ಡಿಯ ತಲೆ ನೇವರಿಸಿದ್ದಾರೆ ನಿಂಬಾಳ್ಕರ್. ಅದು ಲಿಖಿತವಾಗಿ ಯಡ್ಡಿಯನ್ನು ಸಿಕ್ಕಿಸುವ ಮೂಲಕ ಖೆಡ್ಡಾಕ್ಕೆ ಬೀಳಿಸುವ ಪೊಲೀಸ್ ತಂತ್ರವಾಗಿತ್ತು. ಯಾಮಾರಿದ ಯಡ್ಡಿ ಮಾರನೇ ಬೆಳಗ್ಗೆಯೇ ಕಮೀಶನರ್‌ಗೆ ಲಿಖಿತ ಪತ್ರ ರವಾನಿಸಿಬಿಟ್ಟರು. ಅಲ್ಲಿಗೆ ಈ ಪ್ರಕರಣದಲ್ಲಿ ಯಡ್ಡಿ ಕೂಡ ಸಂತೋಷ್‌ನ ಬೆನ್ನಿಗೆ ನಿಂತಿದ್ದು ಸಾಕ್ಷ್ಯಾಧಾರದ ಮೂಲಕವೇ ಸಾಬೀತಾದಂತಾಯ್ತು. ಅಂದರೆ ಇಲ್ಲಿ ಯಡ್ಡಿಯೇ ತನ್ನ ಪಿಎ ಸಂತೋಷ್‌ನನ್ನು ಬಚ್ಚಿಟ್ಟ ಆರೋಪಿ!

ಅಂಥಾದ್ದೇನೂ ಇಲ್ಲವೆಂದರೆ ಅಥವಾ ಸಂತೋಷ್ ನಿರ್ದೋಷಿಯಾಗಿದ್ದರೆ ಯಡ್ಡಿಯೇ ತನ್ನ ಆಪ್ತ ಸಹಾಯಕನನ್ನು ಪೊಲೀಸರಿಗೆ ಒಪ್ಪಿಸಬಹುದಿತ್ತಲ್ಲವೆ? ತನ್ನ ಧಣಿಯ ಮಾತನ್ನು ಮೀರಿ ಸಂತೋಷ್ ತಲೆಮರೆಸಿಕೊಂಡಿರಲು ಹೇಗೆ ತಾನೇ ಸಾಧ್ಯ? ಇದರರ್ಥ ಸಂತೋಷ್‌ನನ್ನು ಬಚ್ಚಿಡುವುದರಲ್ಲಿ ಯಡ್ಡಿಯ ಪಾತ್ರವಿದ್ದೇ ಇದೆ. ಅದು ಕಮೀಶನರ್‌ಗೆ ಬರೆದ ಪತ್ರದ ಮೂಲಕವೇ ಸಾಬೀತಾಗಿದೆ. ನಡುರಾತ್ರಿಗೆ ಬದಲು ಹಗಲು ಹೊತ್ತು ಬಂದು ತನ್ನ ಮನೆಯನ್ನು ಶೋಧಿಸಿ ಎನ್ನುವ ಯಡ್ಡಿಗೆ ತನ್ನ ಪಿಎಯನ್ನು ಪೊಲೀಸ್ ತನಿಖೆಗೆ ಸಹಕರಿಸುವಂತೆ ಹಾಜರು ಪಡಿಸುವುದು ಕಷ್ಟವೆ? ಒಬ್ಬ ಮಾಜಿ ಮುಖ್ಯಮಂತ್ರಿಯಾಗಿ ರಾಜ್ಯ ಬಿಜೆಪಿಯ ಅಧ್ಯಕ್ಷನಾಗಿ ಎಲ್ಲಕ್ಕೂ ಮಿಗಿಲಾಗಿ ಓರ್ವ ಜವಾಬ್ದಾರಿಯುತ ನಾಗರಿಕನಾಗಿ ನಡುರಾತ್ರಿ ತನ್ನ ಮನೆಗೇ ಪೊಲೀಸರು ನುಗ್ಗಿದ ಮೇಲೂ ತನ್ನ ಆಪ್ತ ಸಹಾಯಕನನ್ನು ಕರೆದು ಪೊಲೀಸರ ಬಳಿ ಹೋಗಲು ಸೂಚಿಸದೇ 'ಆತ ಈ ಪ್ರಕರಣದಲ್ಲಿ ಭಾಗಿಯಲ್ಲ...' ಎಂದು ಕಮೀಶನರ್‌ಗೆ ಪತ್ರ ಬರೆಯುವಂತ ಅಡ್ಡದಾರಿ ಏನಿದೆ?



ಇದರರ್ಥ ಇಡೀ ಪ್ರಕರಣದಲ್ಲಿ ಯಡ್ಡಿಯೇ ಸೂತ್ರಧಾರಿ ಮತ್ತು ಕಿಡ್ನಾಪ್ ಪ್ರಕರಣ ಯಡ್ಡಿಗೆ ಗೊತ್ತಿಲ್ಲದೆ ನಡೆಯಲು ಸಾಧ್ಯವೇ ಇಲ್ಲ!

ಪ್ರಶ್ನೆಯಾಗಿಯೇ ಉಳಿದ ಅತೀ ಮುಖ್ಯ ಅಂಶವೆಂದರೆ ಈಶೂ ಪಿಎ ವಿನಯ್ ಬಳಿಯಿದ್ದ ಆ ಸಿಡಿಗಳಿಗಾಗಿ ರೌಡಿಯೊಬ್ಬನನ್ನು ಬಿಟ್ಟು ಅಪಹರಿಸುವಂಥದ್ದೇನಿತ್ತು? ತಮ್ಮ ಪಿಎಗೇ ಸಂಬಂಧಿಸಿದ್ದ ಸಿಡಿಯಾಗಿದ್ದರೆ ಯಡ್ಡಿ ಈ ಪಾಟ ತಲೆ ಕೆಡಿಸಿಕೊಳ್ಳಬೇಕಿತ್ತೇಕೆ?

ಬಿಜೆಪಿಗಂಟಿದ ಕಾಮಪಿಪಾಸೆ ಮತ್ತು ಸೆಕ್ಸ್ ಸಿಡಿಯ ಶಾಪವೆಂಬುದು ಯಾರ್‍ಯಾರನ್ನು ಬಲಿ ತೆಗೆದುಕೊಳ್ಳುತ್ತೋ ಗೊತ್ತಿಲ್ಲ. ಕಮೀಶನರ್ ಪ್ರವೀಣ್ ಸೂದ್ ನಿಮ್ಮ ಮೇಲೆ ಜನರಿನ್ನೂ ಭರವಸೆಯಿಟ್ಟಿದ್ದಾರೆ....

■ ರಾ.ಸೋಮನಾಥ್

ಇಸ್ರೇಲಿಗೆ ಮುದ್ದು ಪ್ಯಾಲೆಸ್ಟೀನಿಗೆ ಗುದ



■ಸುರೇಶ್ ಭಟ್ ಬಾಕ್ರಬೈಲ್


ಪ್ರಧಾನಿ ಮೋದಿಯ ಮತ್ತೊಂದು ಆಡಂಬರದ ವಿದೇಶ ಪ್ರವಾಸ ಮುಗಿದಿದೆ. ಮೋದಿಯ ಪ್ರತಿಯೊಂದು ವಿದೇಶ ಭೇಟಿಯನ್ನೂ ಅತಿರಂಜಿತವಾಗಿ ವರದಿ ಮಾಡುತ್ತಾ ಜನಮಾನಸದಲ್ಲಿ ಈತನೊಬ್ಬ ಮಹಾನ್ ನಾಯಕನೆಂಬ ಮಿಥ್ಯೆಯನ್ನು ಬೇರೂರಿಸುವ "ಮಹತ್ಕಾರ್ಯ"ದಲ್ಲಿ ತೊಡಗಿರುವ ನಮ್ಮ ಭಟ್ಟಂಗಿ ಮಾಧ್ಯಮಗಳು ಜುಲೈ 4ರಿಂದ 6ರ ತನಕದ ಇಸ್ರೇಲ್ ಭೇಟಿಯನ್ನು ಅಭೂತಪೂರ್ವ, ಅಸಾಧಾರಣ, ಚಾರಿತ್ರಿಕ ಎಂಬಿತ್ಯಾದಿಯಾಗಿ ಎಂದಿಗಿಂತ ಜಾಸ್ತಿಯಾಗಿ ವರ್ಣಿಸಿ ಪುಟಗಟ್ಟಲೆ ಬರೆದವು. ಅಮೆರಿಕದ ಮಾಜಿ ಅಧ್ಯಕ್ಷ ಒಬಾಮನನ್ನು ಒಂದಲ್ಲ, ಎರಡಲ್ಲ ಬರೋಬ್ಬರಿ 22 ಸಲ ಬರಾಕ್ ಎಂದು ಸಂಬೋಧಿಸುವ, ಚೀನಾದ ಕ್ಸಿ ಜಿನ್‌ಪಿಂಗ್ ಜೊತೆ ಜೋಕಾಲಿ ಆಡುವ, ಆಸ್ಟ್ರೇಲಿಯಾ ಪ್ರಧಾನಿ ಮಾಲ್ಕೋಲ್ಮ್ ಟರ್ನ್‌ಬುಲ್ ಜೊತೆ ಮೆಟ್ರೊದಲ್ಲಿ ಪಯಣಿಸುವ, ಫ್ರೆಂಚ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕರಾನ್‌ನನ್ನು ಆತನದೆ ಮನೆಯ ಉದ್ಯಾನದಲ್ಲಿ ಸುತ್ತಾಡಿಸುವ ಮೋದಿಯ ಚಿತ್ರಗಳನ್ನು ದೃಶ್ಯ ಮಾಧ್ಯಮಗಳಲ್ಲಿ ವೀಕ್ಷಿಸುವ ಮೋದಿಭಕ್ತರು ಹುಚ್ಚೆದ್ದು ಕುಣಿಯಬಹುದು. ಆದರೆ ಒಂದು ನಿಷ್ಪಕ್ಷಪಾತ ದೃಷ್ಟಿಯಿಂದ ನೋಡಿದರೆ ಜಾಗತಿಕ ನಾಯಕರೊಂದಿಗೆ ಈ ರೀತಿಯ ವರ್ತನೆಗಳು ತೀರ ಅತಿರೇಕವೆನಿಸುವಂತಿಲ್ಲವೆ? ಕೀಳರಿಮೆಯಿಂದ ಮತ್ತು ಬರೀ ಪ್ರಚಾರೋದ್ದೇಶಕ್ಕಾಗಿ ಮಾಡುವ ಆ ಹಾವಭಾವಗಳು, ಆ ಅತಿ ಸಲುಗೆಯ ವರ್ತನೆಗಳು ವಾಸ್ತವವಾಗಿ ಭಾವಶೂನ್ಯವಾಗಿರುತ್ತವೆ; ಆ ನಗು ಕೃತಕವಾಗಿರುತ್ತದೆ. ವಿದೇಶೀ ನಾಯಕರು ಈ ನಾಟಕವನ್ನು ಮೌನವಾಗಿ ಸಹಿಸುತ್ತಾರೆ ಏಕೆಂದರೆ ಅವರ ಕಣ್ಣುಗಳು ಭಾರತದ ಮಾರುಕಟ್ಟೆಗಳ ಮೇಲೆ ನೆಟ್ಟಿವೆ.

ಅಸಲಿಗೆ ಇತ್ತೀಚಿನ ಇಸ್ರೇಲ್ ಭೇಟಿಯೊಂದನ್ನು ಹೊರತುಪಡಿಸಿದರೆ ಮಿಕ್ಕ ಯಾವ ಭೇಟಿಯನ್ನೂ ಐತಿಹಾಸಿಕ ಎನ್ನುವಂತಿಲ್ಲ. ಮೋದಿಯ ಇಸ್ರೇಲ್ ಭೇಟಿಯನ್ನು ಋಣಾತ್ಮಕ ಅರ್ಥದಲ್ಲಿ ಚಾರಿತ್ರಿಕ ಎನ್ನಬಹುದು. ಏಕೆಂದರೆ ಮೊದಲನೆಯದಾಗಿ, ಈ ಮೂಲಕ ಪ್ಯಾಲೆಸ್ಟೀನಿಯರ ನೆಲದ ಮೇಲೆ ಆಕ್ರಮಣ, ಅತಿಕ್ರಮಣ ಮಾಡುತ್ತಿರುವುದನ್ನು ವಿರೋಧಿಸುತ್ತಾ ಬಂದಿರುವ ಭಾರತದ ನೀತಿಗೆ ತಿಲದರ್ಪಣ ನೀಡಲಾಗಿದೆ. ಎರಡನೆಯದಾಗಿ, ಇಸ್ರೇಲಿನ ಈ ವಿಸ್ತರಣವಾದಿ ನೀತಿಯ ವಿರೋಧದ ಭಾಗವಾಗಿ ಭಾರತದ ಯಾವೊಬ್ಬ ಪ್ರಧಾನಿಯೂ ಇದುವರೆಗೆ ಇಸ್ರೇಲಿಗೆ ಭೇಟಿ ನೀಡಿರಲಿಲ್ಲ.

ಇಸ್ರೇಲಿನಲ್ಲಿ

ಇಸ್ರೇಲಿನ ಪ್ರಧಾನಿ ನೇತನ್ಯಾಹುನನ್ನು ಅಪ್ಪಿಕೊಂಡ ಮೋದಿ ಆತನನ್ನು ಆತನ ಅಚ್ಚುಮೆಚ್ಚಿನ "ಬೀಬಿ" ಎಂಬ ಹೆಸರಿನಿಂದ ಸಂಬೋಧಿಸಿದ. ಇದಕ್ಕುತ್ತರವಾಗಿಯೊ ಎಂಬಂತೆ ಭಾರತದೊಂದಿಗಿನ ಸಂಬಂಧಗಳನ್ನು 'ಸ್ವರ್ಗದ ಮದುವೆ' ಎಂದು ನೇತನ್ಯಾಹು ಬಣ್ಣಿಸಿದ. ಆದರೆ ಈಗಾಗಲೆ 2016ರಲ್ಲಿ ಮೈಕ್ರೊಸಾಫ್ಟ್ ಜತೆ, 2017ರ ಮಾರ್ಚ್‌ನಲ್ಲಿ ಚೀನಾ ಜತೆ ಇದೇ ತೆರನಾದ ಮದುವೆಗಳಾಗಿರುವುದರಿಂದ ಇದು ಮೂರನೆಯದು ಎನ್ನುವುದು ಬೇರೆ ವಿಷಯ! ಮೋದಿ, ನೇತನ್ಯಾಹು ಇಬ್ಬರೂ ತೀವ್ರ ಬಲಪಂಥೀಯ ವಿಚಾರಧಾರೆಗಳನ್ನು ಪ್ರೋತ್ಸಾಹಿಸುವರು. ರಾಜಕೀಯ ಉದ್ದೇಶಗಳ ಈಡೇರುವಿಕೆಗೆ ಹಿಂಸಾಮಾರ್ಗವನ್ನು ಬಳಸಲು ಕಿಂಚಿತ್ತೂ ಹಿಂದೆಮುಂದೆ ನೋಡದವರು. ಇಸ್ರೇಲ್ ಕೂಡ ತನ್ನಂತೆ ಮಾನವಹಕ್ಕು ಎನ್ಜಿಒಗಳ ನಿಯಂತ್ರಣಕ್ಕಾಗಿ ಕಾನೂನು ಮಾಡಹೊರಟಿರುವುದೂ ಮೋದಿ ಸರ್ಕಾರಕ್ಕೆ ಖುಷಿ ತಂದುಕೊಟ್ಟಿದೆ. ಇಸ್ರೇಲಿನಲ್ಲಿ ಒಂದಲ್ಲ ಹಲವಾರು ಮೋದ್ಯಾಲಿಂಗನಗಳು ನಡೆದವು. ಟ್ರಂಪ್‌ನನ್ನು ತಬ್ಬಿಕೊಂಡ ಬಗೆಯಲ್ಲೇ ನೇತನ್ಯಾಹುನನ್ನು ಅಪ್ಪಿಕೊಂಡಿರುವುದು ಭಾರತ ಆ ಎರಡು ಯುದ್ಧಕೋರ ದೇಶಗಳ ನೀತಿಗಳನ್ನು ಆಲಂಗಿಸಿದಂತಾಗಿದೆ. ಈ ಮೂವರೂ ಇಸ್ಲಾಂ ಧರ್ಮವನ್ನು ಹಣಿಯುವ ಜಾಗತಿಕ ಅಭಿಯಾನದಲ್ಲಿ ಸಮಾನಮನಸ್ಕರಾಗಿರುವುದು ಗಮನಾರ್ಹ.

ಒಂದೊಮ್ಮೆ ದಕ್ಷಿಣ ಏಷಿಯಾದಲ್ಲಿ ವಾಸ ಮಾಡುತ್ತಿದ್ದು ಇದೀಗ ಇಸ್ರೇಲಿನ ಪ್ರಜೆಗಳಾಗಿರುವ ಯಹೂದಿಗಳೇ ಇದ್ದ ಸಭೆಯೊಂದರಲ್ಲಿ ಮಾತನಾಡಿದ ಮೋದಿ, ಯಹೂದಿಗಳಿಗೆ ಭಾರತದಲ್ಲಿ ಸಿಕ್ಕಷ್ಟು ಶಾಂತಿ, ಪ್ರೀತಿಗಳು ಬೇರೆಲ್ಲೂ ಸಿಕ್ಕಿಲ್ಲ ಎಂದ. ಆದರೆ ಮೋದಿಯ ಮಾತು ಅರ್ಧ ಸತ್ಯ. ಭಾರತದಲ್ಲಿ ಹಿಂದೂ, ಮುಸಲ್ಮಾನ ಮತ್ತು ಬ್ರಿಟಿಷ್ ಆಡಳಿತಗಳ ಕಾಲದಲ್ಲಿ ಯಹೂದಿಗಳು ದೊಡ್ಡ ದೊಡ್ಡ ವಾಣಿಜ್ಯೋದ್ಯಮಗಳನ್ನು ನಡೆಸುತ್ತಿದ್ದುದು ನಿಜ. ಇಸ್ರೇಲ್ ರಾಷ್ಟ್ರ ಸ್ಥಾಪನೆಯಾಗುತ್ತಲೆ ಇವರಲ್ಲಿ ಹೆಚ್ಚಿನವರು ಅಲ್ಲಿಗೆ ವಲಸೆ ಹೋದರು. ಉಳಿದ ಕೆಲವರಲ್ಲಿ ಬಹುತೇಕ ಮಂದಿ ಭಾರತದಲ್ಲಿ ತಮ್ಮ ಕೋಶರ್ ತತ್ವವನ್ನು ಪಾಲಿಸಲಾಗದೆ ಶಾಖಾಹಾರಿಗಳಾಗಿರುವುದೂ ನಿಜ. ವಾಸ್ತವವಾಗಿ ಯಹೂದಿಗಳ ಸ್ವರ್ಣ ಯುಗವೆಂದರೆ ಅವರು ಮುಸ್ಲಿಂ ಆಡಳಿತದ ಸ್ಪೇನ್‌ನಲ್ಲಿದ್ದ ಕಾಲ. ಅಂದು ಅಲ್ಲಿ ಅವರನ್ನು ತುಂಬಾ ಗೌರವದಿಂದ ಕಾಣಲಾಗುತ್ತಿತ್ತು. ಪ್ರಾಯಶಃ ಯಹೂದಿಗಳಿಗೆ ಇನ್ಯಾವ ದೇಶದಲ್ಲೂ ಅಷ್ಟೊಂದು ಗೌರವ ಸಿಕ್ಕಿರಲಿಕ್ಕಿಲ್ಲ. 1492ರಲ್ಲಿ ಕ್ರಿಶ್ಚಿಯನ್ ಧರ್ಮ ಸ್ಪೇನ್ ದೇಶವನ್ನು ಮರಳಿ ತನ್ನ ವಶಕ್ಕೆ ಪಡೆದುಕೊಂಡ ಬಳಿಕ ಯಹೂದಿಗಳನ್ನು ಅಲ್ಲಿಂದ ಒದ್ದೋಡಿಸಲಾಯಿತು.



ಮೋದಿ ತನ್ನ ಭಾಷಣದ ವೇಳೆ ಬಾಂಗ್ಲಾ ವಿಮೋಚನಾ ಯುದ್ಧದಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದ ಜನರಲ್ ಜೇಕಬ್ ಎಂಬ ಯಹೂದಿಯ ಶೌರ್ಯವನ್ನು ಕೊಂಡಾಡಿದ. ಜ. ಜೇಕಬ್ ಮೋದಿಯ ಹೊಗಳುವಿಕೆಗೆ ಪಾತ್ರನಾಗಲು ಪ್ರಧಾನ ಕಾರಣವೆಂದರೆ ಆತ ಭಾರತೀಯ ಜನತಾ ಪಕ್ಷವನ್ನು ಸೇರಿಕೊಂಡಿರುವುದು ಎನ್ನಬಹುದು. ಹಾಗೆ ನೋಡಿದರೆ ಇರಾನಿನಲ್ಲಿ ವಾಸವಾಗಿದ್ದ ಯಹೂದಿಗಳು ಕೂಡಾ ಇರಾನಿನ ಸೇನೆಗೆ ಸೇರಿ ಇರಾನ್, ಇರಾಕ್ ನಡುವಿನ ಸುದೀರ್ಘ ಸಮರದಲ್ಲಿ ಭಾಗವಹಿಸಿದ್ದರು. ಇರಾನಿನಲ್ಲಿ ಇಂದಿಗೂ ನೆಲಸಿರುವ 15,000ಕ್ಕೂ ಅಧಿಕ ಯಹೂದಿಗಳಿಗೆ ಅಲ್ಲಿನ ಸಂಸತ್ತಿನಲ್ಲಿ ಪ್ರಾತಿನಿಧಿತ್ವ ಕೂಡಾ ಇದೆ. ಜೇಕಬ್‌ನನ್ನು ಹೊಗಳಿದ ಮೋದಿಗೆ ಇವರ ಬಗ್ಗೆ ಮಾತಾಡಬೇಕೆಂದು ಅನಿಸದಿರುವುದರಲ್ಲಿ ಆಶ್ಚರ್ಯವಿಲ್ಲ, ಏಕೆಂದರೆ ಆತನಿಗೆ ಇತಿಹಾಸದ ಎಲ್ಲಾ ಸತ್ಯಗಳು ಬೇಕಿಲ್ಲ. ಚಪ್ಪಾಳೆ, ಶಹಬ್ಬಾಸ್‌ಗಿರಿ ಮತ್ತು ಪ್ರಚಾರ ಗಿಟ್ಟಿಸಲು ಎಷ್ಟು ಬೇಕೊ ಅಷ್ಟನ್ನೆ ಆತ ಉಪಯೋಗಿಸಿಕೊಳ್ಳುತ್ತಾನೆ.

ಇಸ್ರೇಲಿಗೆ ಭೇಟಿ ನೀಡುವ ಪ್ರತಿಯೊಬ್ಬ ವಿಶ್ವ ನಾಯಕನೂ ಪ್ಯಾಲೆಸ್ಟೀನ್‌ಗೆ ಹೋಗದಿರುವುದಿಲ್ಲ. ಕೇವಲ ಅರ್ಧ ಗಂಟೆಯಲ್ಲಿ ತಲುಪಬಹುದಾದ ರಮಲ್ಲಾ ಮತ್ತಿತರ ತಾಣಗಳಿಗೆ ಭೇಟಿ ನೀಡದಿರುವುದಿಲ್ಲ. ಇದೇ ಮೇ ತಿಂಗಳಲ್ಲಿ ಇಸ್ರೇಲಿಗೆ ಬಂದಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹಿತ ಪ್ಯಾಲೆಸ್ಟೀನ್‌ಗೆ ಭೇಟಿ ನೀಡಿದ್ದ. ಆದರೆ ಮೋದಿ ಇದಕ್ಕೊಂದು ದೊಡ್ಡ ಅಪವಾದ ಆಗಿದ್ದಾನೆ. ಮೋದಿಯ ವರ್ತನೆ ಪ್ಯಾಲೆಸ್ಟೀನ್ ದೇಶ ಮತ್ತು ಅರಬರು ಅಸ್ತಿತ್ವದಲ್ಲಿ ಇಲ್ಲವೊ ಎಂಬಂತಿತ್ತು. ಲಭ್ಯ ಮಾಹಿತಿಗಳ ಪ್ರಕಾರ ಪ್ಯಾಲೆಸ್ಟೀನ್ ಅಧ್ಯಕ್ಷ ಊರಲ್ಲಿಲ್ಲದ ಸಮಯವನ್ನೆ ನೋಡಿಕೊಂಡು ಇಸ್ರೇಲ್ ಭೇಟಿಯ ದಿನಾಂಕಗಳನ್ನು ನಿಗದಿಪಡಿಸಲಾಗಿತ್ತು! ಪ್ಯಾಲೆಸ್ಟೀನ್‌ನ ನೆಲಕ್ಕೆ ಕಾಲಿಡದ ಮೋದಿ ಜಯೊನಿಸಂ ತತ್ವದ ರೂವಾರಿ ಥಿಯೊಡೋರ್ ಹರ್ಜ್‌ಲ್ ಸಮಾಧಿಗೆ ಭೇಟಿ ನೀಡಿದ್ದಾನೆ! ಇದು ಹಿಂದುತ್ವವಾದ ಮತ್ತು ಜಯೊನಿಸಂಗಳ ನಿಕಟ ಸಂಬಂಧಗಳನ್ನು ಸಂಪೂರ್ಣವಾಗಿ ಬಯಲಿಗೆಳೆದಿದೆ. ಯಹೂದಿಗಳ ನರಮೇಧದ ಸ್ಮಾರಕ ಯಾದ್ ವಶೆಮ್‌ಗೆ ಭೇಟಿ ನೀಡಿ ನಮನ ಸಲ್ಲಿಸಿದ ಮೋದಿಗೆ ತನ್ನ ಗುರು ಗೋಲ್ವಲ್ಕರ್ ಮಾತುಗಳು ನೆನಪಾಗಲಿಲ್ಲವೆ? ಹಿಟ್ಲರ್ ನಡೆಸಿದ ನರಮೇಧವನ್ನು ಹೊಗಳಿದ ಗೋಲ್ವಲ್ಕರ್ ತನ್ನ 'ವಿ ಅಂಡ್ ಅವರ್ ನೇಷನ್‌ಹುಡ್ ಡಿಫೈನ್ಡ್' ಎಂಬ ಕೃತಿಯಲ್ಲಿ ಹೀಗೆಂದಿದ್ದಾನೆ: "ಜರ್ಮನಿ ತನ್ನ ಸ್ವಂತ ಜನಾಂಗ ಹಾಗೂ ಸಂಸ್ಕೃತಿಯ ಪರಿಶುದ್ಧತೆಯನ್ನು ಕಾಪಾಡುವ ದಕ್ಕೋಸ್ಕರ ದೇಶದೊಳಗಿದ್ದ ಸೆಮಿಟಿಕ್ ಜನಾಂಗಗಳಾದ ಯಹೂದಿಗಳನ್ನು ತೊಲಗಿಸಿ ಇಡೀ ವಿಶ್ವಕ್ಕೆ ಆಘಾತ ನೀಡಿತು. ಇಲ್ಲಿ ವ್ಯಕ್ತವಾಗಿರುವುದು ಅತ್ಯುನ್ನತ ಮಟ್ಟದ ಜನಾಂಗ ಗರ್ವ. ಮೂಲಭೂತ ವ್ಯತ್ಯಾಸಗಳನ್ನು ಹೊಂದಿರುವ ಜನಾಂಗಗಳನ್ನೂ, ಸಂಸ್ಕೃತಿಗಳನ್ನೂ ಒಂದು ಏಕೀಕೃತ ಸಮಗ್ರವಾಗಿಸುವುದು ಹೆಚ್ಚುಕಮ್ಮಿ ಅಸಾಧ್ಯವೆನ್ನುವುದನ್ನೂ ಜರ್ಮನಿ ತೋರಿಸಿಕೊಟ್ಟಿದೆ. ಹಿಂದೂಸ್ತಾನದಲ್ಲಿರುವ ನಮಗೆ ಇದೊಂದು ಒಳ್ಳೆಯ ಪಾಠ. ನಾವು ಅದನ್ನು ಕಲಿತು ಅದರ ಲಾಭ ಪಡೆದುಕೊಳ್ಳಬೇಕು"!

ಇಸ್ರೇಲ್ ಚರಿತ್ರೆ

1917ರಲ್ಲಿ ಬ್ರಿಟನ್ ತನ್ನ ಬಾಲ್ಫರ್ ಘೋಷಣೆಯ ಮೂಲಕ ಜಯೊನಿಸ್ಟರಿಗೆ ಪ್ಯಾಲೆಸ್ಟೀನಿನ ಒಂದು ಭಾಗವನ್ನು ನೀಡಿತು. ವಾಸ್ತವದಲ್ಲಿ ತನ್ನದಲ್ಲದ ಭೂಮಿಯನ್ನು ಹೀಗೆ ಇನ್ನೊಬ್ಬರಿಗೆ ಕೊಡಲು ಬ್ರಿಟನ್‌ಗೆ ಯಾವ ಹಕ್ಕೂ ಇರಲಿಲ್ಲ. ಬಾಲ್ಫರ್ ಘೋಷಣೆಗೆ ಮೊದಲು ರಾಷ್ಟ್ರಗಳ ಒಕ್ಕೂಟದ (League of Nations) ಸಮ್ಮತಿಯನ್ನೂ ಅದು ಪಡೆದುಕೊಂಡಿರಲಿಲ್ಲ. 1938ರಲ್ಲಿ ಗಾಂಧೀಜಿ ಕೂಡಾ "ಅರಬರು ಸಂತೋಷದಿಂದ ಒಪ್ಪಿಗೆ ನೀಡಿದರೆ ಮಾತ್ರ ಯಹೂದ್ಯರು ಪ್ಯಾಲೆಸ್ಟೀನ್‌ನಲ್ಲಿ ನೆಲಸಬಹುದು. ಪ್ಯಾಲೆಸ್ಟೀನ್ ಅರಬರ ನಾಡು. ಅವರ ಮೇಲೆ ಯಹೂದ್ಯರನ್ನು ಹೇರುವುದು ತಪ್ಪು, ಅಮಾನವೀಯ... ಪ್ಯಾಲೆಸ್ಟೀನ್‌ಅನ್ನು ಅರಬರಿಂದ ಕಿತ್ತು ಯಹೂದಿಗಳಿಗೆ ನೀಡುವುದೆಂದರೆ, ಅದು ಮಾನವಕುಲದ ವಿರುದ್ಧ ಎಸಗುವ ಅಪರಾಧ" ಎಂದು ಹೇಳಿದ್ದಾರೆ. ಮುಂದೆ 1947ರಲ್ಲಿ ವಿಶ್ವಸಂಸ್ಥೆಯಲ್ಲಿ ವಿಭಜನೆಯ ಪ್ರಸ್ತಾಪವನ್ನು ಮತಕ್ಕೆ ಹಾಕಿದಾಗ ಮತಗಳು ವಿಭಜನೆಯ ಪರವಾಗಿ ಬಿದ್ದವು. ಇದಕ್ಕೆ ಕಾರಣ ಸರಳ. ಯುರೋಪಿನ ರಾಷ್ಟ್ರಗಳಿಗೆ ಯಹೂದ್ಯ ದ್ವೇಷದ ದೊಡ್ಡ ಇತಿಹಾಸವೆ ಇದೆ. ಹಿಟ್ಲರನ ಯಹೂದಿ ನರಮೇಧವನ್ನು ತಡೆಯುವಲ್ಲಿಯೂ ಅವು ವಿಫಲವಾಗಿದ್ದವು. ಆ ವೈಫಲ್ಯದಿಂದಾಗಿ ಜನಿಸಿದ ಪಾಪಪ್ರಜ್ಞೆಯೆ ಯಹೂದಿಗಳ ಪ್ರತ್ಯೇಕ ರಾಷ್ಟ್ರ ಬೇಡಿಕೆಗೆ ಒಪ್ಪಿಗೆ ಸೂಚಿಸುವಂತೆ ಮಾಡಿದೆ. ಭಾರತ ಅಂದು ಪ್ಯಾಲೆಸ್ಟೀನ್ ವಿಭಜನೆಯನ್ನು ತೀವ್ರವಾಗಿ ವಿರೋಧಿಸಿ ಅದನ್ನು ದ್ವಿರಾಷ್ಟ್ರವಾಗಿ ಪರಿವರ್ತಿಸುವ ಪ್ರಸ್ತಾಪವನ್ನು ಬೆಂಬಲಿಸಿತ್ತು.

1948ರಲ್ಲಿ ಇಸ್ರೇಲ್ ರಾಷ್ಟ್ರ ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದ ನಂತರದಲ್ಲಿ 7 ಲಕ್ಷಕ್ಕೂ ಅಧಿಕ ಅರಬರನ್ನು ಅಲ್ಲಿಂದ ಉಚ್ಚಾಟಿಸಲಾಯಿತು. ಜಯೊನಿಸ್ಟರ ತಂಡಗಳು ಅನೇಕ ಅರಬ್ ನಾಗರಿಕರನ್ನು ಕೊಂದುಹಾಕಿವೆ. ಇಸ್ರೇಲಿ ಸೇನೆ 1953ರಲ್ಲಿ ಈಜಿಪ್ಟ್ ಮೇಲೆ, 1967ರಲ್ಲಿ ಈಜಿಪ್ಟ್, ಸಿರಿಯಾ, ಜೋರ್ಡಾನ್ ಮೇಲೆ ಯುದ್ಧ ಮಾಡಿದೆ. ಗಾಜಾ ಪಟ್ಟಿ ಮೇಲಿನ ಇಸ್ರೇಲಿ ದಾಳಿಯಲ್ಲಿ 2200 ಅರಬರು ಮೃತಪಟ್ಟಿದ್ದರು. ಗಾಜಾ ಪಟ್ಟಿಯಲ್ಲಿ ಇಸ್ರೇಲ್‌ನ ಕುಕೃತ್ಯಗಳನ್ನು ಯುದ್ಧಾಪರಾಧಗಳೆಂದು ಬಣ್ಣಿಸಲಾಗಿದ್ದು ಇದನ್ನು 2014ರ ಆಗಸ್ಟ್‌ನಲ್ಲಿ ವಿಶ್ವಸಂಸ್ಥೆಯ ಇತರ ರಾಷ್ಟ್ರಗಳೊಂದಿಗೆ ಮೋದಿ ಸರ್ಕಾರವೂ ಖಂಡಿಸಿತ್ತು! ಇದಲ್ಲದೆ ಇಸ್ರೇಲ್ ತನ್ನ ನೆರೆಕರೆಯಲ್ಲಿ ಭಯೋತ್ಪಾದಕ ಕೃತ್ಯಗಳನ್ನೂ ನಡೆಸುತ್ತಿದೆ. 2005ರಲ್ಲಿ ಲೆಬನಾನ್‌ನ ನಾಗರಿಕ ಮೂಲಭೂತ ವ್ಯವಸ್ಥೆಗಳ ಮೇಲೆ ಬಾಂಬ್ ದಾಳಿ ನಡೆಸಿದೆ. ನಿಷೇಧಿತ ಬಿಳಿ ಫಾಸ್ಫರಸ್‌ಅನ್ನೂ ಬಳಸಿದೆ. ಕಾನಾದಲ್ಲಿ ವಿಶ್ವಸಂಸ್ಥೆಯ ನಿರಾಶ್ರಿತರ ಶಿಬಿರದ ಮೇಲೆ ಪೂರ್ವಯೋಜಿತ ದಾಳಿ ನಡೆಸಿ ಅಮಾಯಕರ ಹತ್ಯೆ ಮಾಡಿದೆ. ಇಷ್ಟೆ ಅಲ್ಲ ಇರಾನ್ ಸೇರಿದಂತೆ ಹಲವಾರು ಅರಬ್ ರಾಷ್ಟ್ರಗಳಲ್ಲಿ ರಹಸ್ಯ ಹಸ್ತಕ್ಷೇಪ ನಡೆಸಿರುವ ಅನುಮಾನಗಳಿವೆ. ಸಿರಿಯವನ್ನು ... ಸಂಘರ್ಷಗಳ ಮೂಲಕ ಒಡೆದು ಹೋಳು ಮಾ... ಯೂ ಇಸ್ರೇಲಿನ ಪಾತ್ರವಿದೆ. ಅಮೆರಿಕದಲ್ಲಿ ... ಗಿಂತಲೂ ಹೆಚ್ಚು ಯಹೂದಿಗಳಿದ್ದು ಅವರು ಅ... ವಿದೇಶಾಂಗ ನೀತಿಗಳ ಮೇಲೆ ಭಾರಿ ... ಬೀರಬಲ್ಲವರಾಗಿದ್ದಾರೆ. ಹೀಗಾಗಿ ಅಮೆರಿಕ ಮತ್ತ... ರಾಷ್ಟ್ರಗಳು ಪ್ಯಾಲೆಸ್ಟೀನ್–ಇಸ್ರೇಲ್ ವಿವಾದಕ್ಕೆ ಸಂಬಂ... ವಿಶ್ವಸಂಸ್ಥೆಯ 78 ನಿರ್ಣಯಗಳಲ್ಲಿ ಪ್ರತಿಯೊ... ತಳ್ಳಿಹಾಕಿವೆ.

1948ರಲ್ಲಿ ಇಸ್ರೇಲ್ ಸ್ಥಾಪನೆಯಾದಾಗ ಭಾರತ ... ಗುರುತಿಸಿದೆಯಷ್ಟೆ ಹೊರತು ರಾಜತಾಂತ್ರಿಕ ಸಂಬಂ... ಕೈಚಾಚಿರಲಿಲ್ಲ. ಅಂದಿನಿಂದಲೂ ಪ್ಯಾಲೆಸ್ಟೀನಿಯರ ಬ... ನಿಂತಿರುವ ಭಾರತ ಯಾವತ್ತೂ ಇಸ್ರೇಲಿನ ಅತಿ... ಮತ್ತು ದಮನ ನೀತಿಗಳನ್ನು ಖಂಡಿಸುತ್ತ ಬಂದಿದೆ. ... ಆಕ್ರಮಣ, ಅತಿಕ್ರಮಣಗಳು ಮುಂದುವರಿದಾಗ ... ಪ್ಯಾಲೆಸ್ಟೀನ್ ನಾಯಕ ಯಾಸೆರ್ ಅರಾಫತ್ ಜೊ... ಸಂಬಂಧಗಳನ್ನು ವೃದ್ಧಿಸಿತು. ಇಸ್ರೇಲ್ ತಾನು ಆಕ್ರ... ಪ್ರದೇಶಗಳಿಂದ ಹಿಂದೆ ಸರಿಯಬೇಕೆಂಬುದು ಕಳೆದ ... ವರ್ಷಗಳಿಂದಲೂ ಭಾರತದ ನಿಲುವಾಗಿದೆ. ಪ್ಯಾ... ನಗರಗಳಿಂದ ಮತ್ತು ಇತರ "ಆಕ್ರಮಿತ" ಪ್ರದೇಶ... "ಇಸ್ರೇಲ್ ತುರ್ತಾಗಿ ಹಿಂದೆ ಸರಿಯಬೇಕು" ... ಭಾರತದ ನಿಲುವಿನಲ್ಲಿ ಬದಲಾವಣೆ ಇಲ್ಲವೆಂದು ... ಪ್ರಧಾನಿ ವಾಜಪೇಯಿ ಕೂಡಾ ಅಂದಿನ ಇಸ್ರೇಲಿ ... ಏರಿಯಲ್ ಶರೋನ್‌ಗೆ ಹೇಳಿದ್ದರು. ಇದೀಗ ... ಭೇಟಿಯ ಪರಿಣಾಮವಾಗಿ ಎಲ್ಲವೂ ತಲೆಕೆಳ... ಪ್ಯಾಲೆಸ್ಟೀನಿಯರ ನ್ಯಾಯಯುತ ಹೋರಾಟ... ಬೆಂಬಲಿಸುವ ನೀತಿಗೆ ಇತಿಶ್ರೀ ಹಾಡಿದಂತಾಗಿದ...

ಒಪ್ಪಂದಗಳಲ್ಲೇನಿದೆ

ಇಸ್ರೇಲ್ ಜೂನ್ 21ನ್ನು ಅಂತಾರಾಷ್ಟ್ರೀಯ ... ದಿನವಾಗಿ ಆಚರಿಸಬೇಕೆಂದು ಸೂಚಿಸಿರುವುದು ... ಸರ್ಕಾರಕ್ಕೆ ಸಂತಸ ಉಂಟುಮಾಡಿದೆ. ಭಾರತಕ್ಕೆ ತನ್ನ ... ಶೇಕಡಾ 25ರಷ್ಟು ಹೆಚ್ಚಿಸುವುದು ಇಸ್... ಬಯಕೆಯಾಗಿತ್ತಾದರೂ ಮುಕ್ತ ವಾಣಿಜ್ಯ ಒಪ್ಪಂದ ... ಮಾತುಕತೆಗಳಲ್ಲಿ ಪ್ರಗತಿಯಾಗಿಲ್ಲ. ಮೋದಿಯ ... ಭೇಟಿ ಸಂದರ್ಭದಲ್ಲಿ ನೀರು, ಬೇಸಾಯ, ಬಾಹ್... ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಿಗೆ ಸಂಬಂಧಪ... ಹಲವಾರು ಒಪ್ಪಂದಗಳಿಗೆ ಸಹಿಹಾಕಲಾಗಿದೆ. ಇವುಗಳಲ್ಲಿ ಹೊಸತೇನೂ ಇಲ್ಲ. ಹೊಸಾ ವಿಷಯ... ಯುದ್ಧತಂತ್ರಗಳಲ್ಲಿ ಸಹಭಾಗಿತ್ವ. 1992ರಲ್ಲಿ ಪಿ.ವಿ.ನ... ರಾವ್ ಸರಕಾರದ ಮತಿಯಿಂದ ಆರಂಭವಾದ ... ಇಸ್ರೇಲ್ ನಡುವಿನ ಸಂಬಂಧಗಳನ್ನು ಯುದ್ಧತ... ಸಹಭಾಗಿತ್ವಕ್ಕೆ ಏರಿಸಿರುವುದನ್ನು ಪ್ರಸ್ತುತ ಮೋದಿ ಭೇ... ನಂತರದ ನಿರ್ಣಾಯಕ ತಿರುವು ಎನ್ನಬಹುದು. ಇಂದು ಇಸ್ರೇಲಿನಿಂದ ಅತ್ಯಧಿಕ ಶಸ್ತ್ರಾಸ್ತ್ರಗಳನ್ನು ಖರೀ... ದೇಶವಾಗಿದೆ. ರಷಿಯಾ ನಂತರ ಇಸ್ರೇಲೇ ನಮ್ಮ ... ದೊಡ್ಡ ಶಸ್ತ್ರಾಸ್ತ್ರ ಪೂರೈಕೆದಾರ. ಇಸ್ರೇಲ್ ರಫ್ತು ಮಾ... ಆಯುಧಗಳ ಪೈಕಿ ಶೇಕಡಾ 41ರಷ್ಟನ್ನು ... ಖರೀದಿಸುತ್ತಿದೆ. ಮೋದಿ ಸರ್ಕಾರಕ್ಕೆ ಇಸ್ರೇಲ್ ... ಯುದ್ಧತಾಂತ್ರಿಕ ಸಹಯೋಗ ಬೇಕಿತ್ತು. ಭವಿ... ಮಿಲಿಟರಿ ಸಾಮಗ್ರಿಗಳು, ತಂತ್ರಜ್ಞಾನಗಳ ವಿಷಯ... ಸಂಬಂಧಗಳನ್ನು ಇನ್ನಷ್ಟು ವೃದ್ಧಿಸುವ ಯೋ... ಹಾಕಿಕೊಂಡಿರುವ ಮೋದಿ ಸರ್ಕಾರ ಯುದ್ಧತಾ... ಸಹಯೋಗವನ್ನು ಜಂಟಿ ಹೇಳಿಕೆಯಲ್ಲಿ ಸೇರಿ... ಸೂಚನೆಯನ್ನು ತಾನೇ ಕೊಟ್ಟಿದೆ. ಸಹಯೋಗ... ಸದುಪಯೋಗಪಡಿಸಲಿರುವ ಇಸ್ರೇಲ್ ತನ್ನ ಬಾಹ್... ಮತ್ತು ಮಿಲಿಟರಿ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿ... ಭಾರತದ ನೆಲವನ್ನು ಬಳಸಿಕೊಳ್ಳಲಿದೆ.

ಸೈಬರ್ ತಂತ್ರಜ್ಞಾನದಲ್ಲಿ ಸಹಕಾ...

ಮೂಲತಃ ಇಸ್ರೇಲಿ ಸೇನೆಯ ಉತ್ಪನ್ನಗಳಾದ ... ಪಾಯಿಂಟ್, ಆಮ್‌ಡಾಕ್ಸ್, ವೆರಿಂಟ್, ನಾರಸ್ ಮುಂ... ಸೈಬರ್ ಮತ್ತು ಗೂಢಚರ ಸಂಸ್ಥೆಗಳು ಈಗಾಗಲೆ ಭಾರ... ಕಾರ್ಯಾಚರಿಸುತ್ತಿದ್ದು ಒಳ್ಳೆಯ ಲಾಭ ಗಳಿಸು... ಆಮ್‌ಡಾಕ್ಸ್, ವೆರಿಂಟ್, ನಾರಸ್ ವಿಶ್ವಾದ್ಯಂತ ... ಗೂಢಚಾರಿಕೆಯ ಹಗರಣಗಳಲ್ಲಿ ಸಿಲುಕಿಕೊಂಡಿವೆ. ... ಆಫ್ ಇಸ್ರೇಲ್'ನಲ್ಲಿ ಪ್ರಕಟವಾಗಿರುವ ಲೇಖನವೊ... ಹೇಗೆ ವೆರಿಂಟ್ ತಂತ್ರಜ್ಞಾನದ ಮೂಲಕ ಸರಕಾ... ಮತ್ತು ಗುಪ್ತಚರ ಸಂಸ್ಥೆಗಳು ಪ್ರಜೆಗಳ ಸಂಭಾಷಣೆ... ಕದ್ದಾಲಿಸಬಲ್ಲವು, ವಿರೋಧಿಗಳನ್ನು ಬಂಧಿಸಬ... ಭಯವನ್ನು ಹರಡಬಲ್ಲವು ಎಂಬುದನ್ನು ವಿವರಿಸಿ...

ಶಾಂತಿ ಪ್ರಕ್ರಿಯೆ

ಜಂಟಿ ಹೇಳಿಕೆಯಲ್ಲಿ ಇಸ್ರೇಲ್–ಪ್ಯಾಲೆಸ್ಟೀನ್ ... ಪ್ರಕ್ರಿಯೆ ಬಗ್ಗೆ ತೀರ ಚಿಕ್ಕದಾದ ಒಂದು ಪ್ಯಾರಾ...

▶▶

...ಬಂಗಾಳೀ ಸಮಾಜದೊಳಗೇ ಇರುವ ಅಂತರ್ಗತ ಕೋಮುವಾದಿ ಬಿರುಕುಗಳು

EPW ಸಂಪಾದಕೀಯ

ಕೃಪೆ: *Economic and Political Weekly*
July 15, 2017. Vol. 52. No.28

■ ಅನು: ಶಿವಸುಂದರ್

ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗೆ ...ುಗಿಲೆದ್ದಿರುವ ಕೋಮು ವಿದ್ವೇಷದ ಬೇರುಗಳು ಆ ಪ್ರದೇಶದ ಹಿಂದೂ-ಮುಸ್ಲಿಂ ವೈಷಮ್ಯದ ಇತಿಹಾಸದಲ್ಲಿದೆ.

ಪಶ್ಚಿಮ ಬಂಗಾಳದ ಬಸಿರತ್ ಉಪವಿಭಾಗದ ...ುರಿಯಾದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಕೋಮು ...ಸಾಚಾರಗಳು ಆ ರಾಜ್ಯದಲ್ಲಿ ಹೆಚ್ಚುತ್ತಿರುವ ಕೋಮು ...ವೀಕರಣಕ್ಕೆ ಸಂಕೇತವಾಗಿದೆ. ಹೆಚ್ಚುತ್ತಿರುವ ಈ ಹಿಂದೂ ...ಮುಸ್ಲಿಂ ವೈಷಮ್ಯದ ಹಿಂದೆ ಭಾರತೀಯ ಜನತಾ ...ಕ್ಷದ (ಬಿಜೆಪಿ) ಚುನಾವಣಾ ಆಶೋತ್ತರಗಳೂ ...ಕೊಂಡಿವೆ. ಆದರೆ ಬಂಗಾಳದಲ್ಲಿ ಮತದಾರರ ಒಂದು ...ವು ಬಿಜೆಪಿ ಕಡೆ ಏಕೆ ಸೆಳೆಯಲ್ಪಡುತ್ತಿವೆ? ಆ ಪ್ರದೇಶದ ...ೀಮುವಾದದ ಇತಿಹಾಸದ ಹಿನ್ನೆಲೆಯಲ್ಲಿ ಇತ್ತೀಚಿನ ...ವಣಿಗೆಗಳನ್ನು ಅರ್ಥಮಾಡಿಕೊಳ್ಳುವ ಮೂಲಕ ಈ ...ಧ್ರುವೀಕರಣವನ್ನು ವಿವರಿಸಿಕೊಳ್ಳಬಹುದು. ಅಂಥಾ ಒಂದು ...ಧ್ಯಯನವು, ದೇಶಾದ್ಯಂತ ಬೀಸುತ್ತಿರುವ ಹಿಂದೂ ...ೀಮುವಾದಿ ವಿದ್ವೇಷಕ್ಕೆ ಬಂಗಾಳವು ಹೊಸದಾಗಿಯೇನೂ ...ಿಯಾಗಿಲ್ಲವೆಂಬುದನ್ನೂ, ಐತಿಹಾಸಿಕವಾಗಿಯೇ ಆ ...ದೇಶವು ತೀವ್ರ ಸಾಮಾಜಿಕ ಕಲಹದ ಬೀಜಗಳನ್ನು ... ಒಡಲಲ್ಲಿ ಇಟ್ಟುಕೊಂಡಿತ್ತೆಂಬುದನ್ನೂ ಮತ್ತು ಇತ್ತೀಚಿನ ...ಜಕೀಯ ಪ್ರಕ್ರಿಯೆಗಳು ಅದನ್ನೇ ಬಯಲಿಗೆ ...ದಿದೆಯೆಂಬುದನ್ನೂ ಹೊರಗೆಡಹುತ್ತದೆ.

17 ವರ್ಷದ ಶಾಲಾ ಬಾಲಕನೊಬ್ಬ ಪ್ರವಾದಿಯ ...ಗ್ಗೆ ಮತ್ತು ಕಾಬಾದ ಬಗ್ಗೆ ಹೀನಾಯವಾದ ...ಲ್ಲೇಖಗಳನ್ನೊಳಗೊಂಡ ಹೇಳಿಕೆಯನ್ನು ಫೇಸ್‌ಬುಕ್ಕಿನಲ್ಲಿ ...ಟಿಸಿದ್ದರಿಂದಲೇ ಬಶಿರತ್‌ನಲ್ಲಿ ಭುಗಿಲೆದ್ದ ಕೋಮು ...ಘರ್ಷಕ್ಕೆ ಕಿಡಿ ಹಚ್ಚಿತೆಂದು ಹೇಳಲಾಗುತ್ತಿದೆ. ಇದು ...ಸ್ಲಿಂ ಸಮುದಾಯವನ್ನು ರೊಚ್ಚಿಗೆಬ್ಬಿಸಿತು. ಈ ಬಗೆಯ ...ಳಿಕೆಯನ್ನು ಪ್ರಕಟಿಸಿದ ಅಪರಾಧಿಯನ್ನು ಒಂದೋ ...ಗೆ ಒಪ್ಪಿಸಬೇಕು ಅಥವಾ ನೇಣಿಗೇರಿಸಬೇಕೆಂದು ...ತ್ತಾಯಿಸುತ್ತಾ ಬೀದಿಬೀದಿಯಲ್ಲಿ ದೊಂಬಿಗಿಳಿಯುವಂತೆ ...ಡಿತು. ಇದಕ್ಕೆ ಪ್ರತಿಯಾಗಿ ಹಿಂದೂಗಳು ಸಹ ...ೀಕಾರದ ಕ್ರಮಗಳಲ್ಲಿ ತೊಡಗಿಕೊಂಡರು. ಪರಿಣಾಮವಾಗಿ ...ವು ದಿನಗಳವರೆಗೆ ಕೋಮು ಹಿಂಸಾಚಾರಗಳು ...ುಂದುವರೆದವು. ಬಿಜೆಪಿಗೆ ಸಂಬಂಧಿಸಿದ ಕೆಲವರು ...ವು ಸುಳ್ಳು ಸುದ್ದಿಯನ್ನು ಪ್ರಚಾರ ಮಾಡುವ ಮೂಲಕ ಉರಿಯುವ ಬೆಂಕಿಗೆ ತುಪ್ಪ ಸುರಿದರೆಂದು ವರದಿಗಳು ಹೇಳುತ್ತಿವೆ. ತೃಣಮೂಲ ಕಾಂಗ್ರೆಸ್ (ಟಿಎಂಸಿ) ನೇತೃತ್ವದ ರಾಜ್ಯ ಸರ್ಕಾರವು ಗಲಭೆಗಳಿಗೆ ಬಿಜೆಪಿಯೇ ಕಾರಣವೆಂದು ದೂರುತ್ತಿದ್ದರೆ, ಬಿಜೆಪಿಯು ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತವನ್ನು ಹೇರಬೇಕೆಂದು ಒತ್ತಾಯಿಸುತ್ತಿದೆ. ಈ ಬಹಿರಂಗ ಕೆಸರೆರಚಾಟಗಳು ಎಷ್ಟೇ ನಡೆದರೂ ಅವು ಪಶ್ಚಿಮ ಬಂಗಾಳ ಸಮಾಜದೊಳಗೇ ಇರುವ ವಿಭಜನೆಗಳನ್ನಂತೂ ಮರೆಮಾಚುವುದಿಲ್ಲ. ಈಗಾಗಲೇ ಇದ್ದ ಈ ವಿಭಜನೆಗಳನ್ನು ಬಿಜೆಪಿಯ ಇತ್ತೀಚಿನ ಪ್ರಚಾರಾಂದೋಲನಗಳು ಇನ್ನಷ್ಟು ದೊಡ್ಡದಾಗಿಸಿದೆಯಷ್ಟೆ.

ಬಂಗಾಳೀ ಸಮಾಜದಲ್ಲಿ 1900 ರಿಂದಲೂ ಹಿಂದೂ-ಮುಸ್ಲಿಂ ಹಿಂಸಾಚಾರಗಳು ಸಂಭವಿಸುತ್ತಿವೆ. ನಂತರದ ದಶಕಗಳಲ್ಲಿ ಕೋಮು ವೈಷಮ್ಯಗಳು ಇನ್ನಷ್ಟು ತೀವ್ರಗೊಂಡವು. ಅದಕ್ಕೆ ಬಹಳಷ್ಟು ಬಾರಿ ವಸಾಹತುಶಾಹಿಗಳ ನೀತಿಗಳು ಕಾರಣವಾಗಿದ್ದವು. 1930ರ ಮಧ್ಯಭಾಗದಲ್ಲಿ ವಸಾಹತುಶಾಹಿ ಸರ್ಕಾರವು ಚುನಾವಣೆಯ ಮೂಲಕ ಪ್ರಾಂತೀಯ ಸರ್ಕಾರಗಳ ಆಯ್ಕೆಗೆ ಅನುವು ಮಾಡಿಕೊಟ್ಟಿತು. ಬಂಗಾಳ ಪ್ರಾಂತ್ಯದಲ್ಲಿ ಹಿಂದೂಗಳ ಸಂಖ್ಯೆ ಮುಸ್ಲಿಮರಿಗೆ ಹೋಲಿಸಿದಲ್ಲಿ ಕಡಿಮೆ ಇದ್ದಿದ್ದರಿಂದ



ಬಂಗಾಳದ ಪ್ರಾಂತೀಯ ಆಳ್ವಿಕೆ ಮುಸ್ಲಿಂ ರಾಜಕೀಯ ಪಕ್ಷಗಳ ಪಾಲಾಯಿತು. ಜನಸಂಖ್ಯೆಯ ಬೆಂಬಲವಿಲ್ಲದಿದ್ದರಿಂದ ಹಿಂದೂ ಆಳುವವರ್ಗಗಳು ಅಲ್ಪಸಂಖ್ಯಾತರಾದರು. ಸ್ವಾತಂತ್ರ್ಯಕ್ಕೆ ಮುನ್ನ ಮುಸ್ಲಿಂ ಲೀಗ್ ಪಕ್ಷವು ಬಂಗಾಳ ಪ್ರಾಂತ್ಯದಲ್ಲಿ ಹಲವು ವರ್ಷಗಳ ಕಾಲ ಆಳ್ವಿಕೆ ಮಾಡಿತ್ತೆಂಬುದು ಜನಸಮೂಹದ ನೆನಪಿನಿಂದ ಮರೆಯಾಗಿದೆ. ಹಾಗೆಯೇ ಈ ವಿದ್ಯಮಾನವು ಮುಸ್ಲಿಂ ವಿರೋಧಿ ದ್ವೇಷವನ್ನು ಹುಟ್ಟಿಹಾಕಿತೆಂಬುದೂ ಸಹ ಜನರು ಮರೆತಿದ್ದಾರೆ. 1946ರ ಆಗಸ್ಟಿನ ಮಹಾನ್ ಕೋಲ್ಕತ್ತ ಕಗ್ಗೊಲೆಗಳ ಮೂಲಕ ದೇಶ ವಿಭಜನೆ ಸಂಬಂಧೀ ಕೋಮುಹಿಂಸಾಚಾರಗಳು ಪ್ರಾರಂಭಗೊಂಡಿದ್ದೂ ಸಹ ಬಂಗಾಳದಿಂದಲೇ. ಯಾವುದೇ ನೈತಿಕ ಅಳುಕೂ ಇಲ್ಲದೆ ಈ ಕೋಮು ವಿದ್ವೇಷದ ಬೆಂಕಿಗೆ ಮುಸ್ಲಿಂ ಲೀಗಿನ ನಾಯಕರೂ ಮತ್ತಷ್ಟು ಇಂಧನ ಒದಗಿಸಿದರು. ಆದರೆ ಈ ಕೋಮು ಸಂಘರ್ಷದಲ್ಲಿ ಬೆಳೆದು ನಿಂತ ಹಿಂದೂ ಕೋಮುವಾದವು ಮಾತ್ರ ಭಾರತದ ವಿಭಜನೆಯ ನಂತರದಲ್ಲೂ ಪಶ್ಚಿಮ ಬಂಗಾಳದಲ್ಲಿ ಒಂದು ಬಲವಾದ ರಾಜಕೀಯ ಅಂತರ್ಶಕ್ತಿಯಾಗಿ ಮುಂದುವರೆಯಿತು.

ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಹಿಂದೂ ಮಹಾ ಸಭ (ಇಂದಿನ ಬಿಜೆಪಿಯ ಪಿತಾಮಹ) ಬಂಗಾಳದಲ್ಲಿ ಒಂದು ಬಲವಾದ ರಾಜಕೀಯ ಶಕ್ತಿಯಾಗಿತ್ತು, ಆದರೆ ಸ್ವಾತಂತ್ರ್ಯಾನಂತರದಲ್ಲಿ ಗಾಂಧಿ ಹತ್ಯೆಯ ಕಾರಣದಿಂದ ಎದುರಿಸಿದ ಸಾರ್ವಜನಿಕ ಆಕ್ರೋಶ ಹಾಗೂ ಮತ್ತಿತರ ಕಾರಣಗಳಿಂದಾಗಿ ಅದರ ಪ್ರಭಾವ ನಿಧಾನವಾಗಿ ಕುಸಿಯುತ್ತಾ ಹೋಯಿತು. ಮತ್ತೊಂದು ಕಡೆ ಎಡಪಕ್ಷಗಳು ನೆಲೆಯನ್ನು ವಿಸ್ತರಿಸಿಕೊಳ್ಳುತ್ತಾ ಹೋದವು. ಕಾಂಗ್ರೆಸ್ ಆಳ್ವಿಕೆಯಲ್ಲಿ ಮತ್ತು ತದನಂತರದ ಎಡಪಕ್ಷಗಳ ಆಳ್ವಿಕೆಯಲ್ಲಿ ಹಿಂದೂ ಕೋಮುವಾದವನ್ನು ಮರೆಗೆ ಸರಿಸಲಾಯಿತಾದರೂ, ಅದು ಸಮಾಜದಿಂದ ಪಡೆದುಕೊಳ್ಳುತ್ತಿದ್ದ ಪೋಷಣೆಯನ್ನು ಮಾತ್ರ ಯಾರೂ ತಪ್ಪಿಸಲಿಲ್ಲ.

ಬಂಗಾಳಿ ನಿರಾಶ್ರಿತರ ಹಕ್ಕುಗಳ ಬಗ್ಗೆ ಹೋರಾಡುತ್ತಾ ಎಡಪಕ್ಷಗಳು ಪಶ್ಚಿಮ ಬಂಗಾಳದ ರಾಜಕೀಯದಲ್ಲಿ ತಮ್ಮ ಹಿಡಿತವನ್ನು ಗಟ್ಟಿಪಡಿಸಿಕೊಂಡವು. ಬಂಗಾಳಕ್ಕೆ ಹರಿದುಬಂದ ನಿರಾಶ್ರಿತರಲ್ಲಿ ಮೊದಲ ಅಲೆಯಲ್ಲಿ ಬಂದವರು ಇದ್ದಿದ್ದರಲ್ಲಿ ಉಳ್ಳವರು ಮತ್ತು ಮೇಲ್ಜಾತಿ ಹಿಂದೂಗಳು. ಈ ಹಿಂದೂ ನಿರಾಶ್ರಿತರ ಹಕ್ಕುಗಳ ರಕ್ಷಣೆಗಾಗಿ ಹೋರಾಡುತ್ತಿದ್ದ ಎಡಪಕ್ಷಗಳು ಹಲವಾರು ಸಾರಿ ಪ್ರಬಲವಾದ ಮುಸ್ಲಿಂ ವಿರೋಧಿ ಧೋರಣೆಗಳನ್ನು ತಳೆಯಬೇಕಾಯಿತು. 1970ರ ಮಧ್ಯಭಾಗದ ನಂತರದಲ್ಲಿ ಕಾಂಗ್ರೆಸ್ ಅನ್ನು ಸೋಲಿಸಿ ಎಡಪಕ್ಷಗಳು ಆಳ್ವಿಕೆಗೆ ಬಂದರೂ, ಅದರ ನಾಯಕ ಗಣ ಮಾತ್ರ ಹಿಂದಿನ ಕಾಂಗ್ರೆಸ್ಸಿನಂತೆ, ಸಾಮಾಜಿಕವಾಗಿ ಬಂಗಾಳದ ಭದ್ರಲೋಕ್‌ಗೆ (ಬಂಗಾಳದ ಸುಶಿಕ್ಷಿತ, ಆಸ್ತಿವಂತ, ಮೇಲ್ಜಾತಿ ವರ್ಗವನ್ನು ಭದ್ರಲೋಕ್ ಎಂದು ಕರೆಯುತ್ತಾರೆ- ಅನುವಾದಕನ ಟಿಪ್ಪಣಿ) ಸೇರಿದವರೇ ಆಗಿದ್ದರು.

ಎಡಪಕ್ಷಗಳ ಆಳ್ವಿಕೆಯಲ್ಲಿದ್ದ ಪಶ್ಚಿಮ ಬಂಗಾಳದಲ್ಲಿ ಮುಸ್ಲಿಮರ ಪರಿಸ್ಥಿತಿ ಹೇಗಿತ್ತೆಂಬುದು 2006ರಲ್ಲಿ ಸಾಚಾರ ಸಮಿತಿ ಬರುವವರೆಗೆ ಯಾರ ಪರಿಶೀಲನೆಗೂ ಒಳಪಟ್ಟಿರಲಿಲ್ಲ. ಆ ವರದಿಯು, ಎಡಪಕ್ಷಗಳ ಬಡವರ ಪರವಾದ ಪದಪುಂಜಗಳು ಆ ರಾಜ್ಯದ ಮುಸ್ಲಿಮರನ್ನು ಯಾವರೀತಿಯಲ್ಲೂ ಸಬಲೀಕರಿಸಿಲ್ಲವೆಂಬುದನ್ನು ಸ್ಪಷ್ಟವಾಗಿ ಬೆಳಕಿಗೆ ತಂದಿತು. ಆದರೆ ಹಿಂದಿನ ಕಾಂಗ್ರೆಸ್ ಸರ್ಕಾರದಂತೆ ಎಡಪಕ್ಷಗಳಿಗೂ ಸಹ ಮುಸ್ಲಿಂ ಸಮುದಾಯದ ಅತ್ಯಂತ ಪ್ರತಿಗಾಮಿ ನಾಯಕರೊಂದಿಗೆ ವ್ಯೂಹಾತ್ಮಕ ಮೈತ್ರಿಯನ್ನು ಮಾಡಿಕೊಳ್ಳುವಲ್ಲಿ ಮಾತ್ರ ಯಾವ ಹಿಂಜರಿಕೆಯೂ ಇರಲಿಲ್ಲ. ಏಕೆಂದರೆ ದೇಶ ವಿಭಜನೆಯಾದ ನಂತರ ಒತ್ತೊತ್ತಾಗಿ ಒಟ್ಟಿಗೆ ಕೇರಿಗಳಲ್ಲಿ ಬದುಕುತ್ತಿದ್ದ ಮುಸ್ಲಿಂ ಮತದಾರರ ಮೇಲೆ ಈ ನಾಯಕರ ಪ್ರಭಾವ ಹೆಚ್ಚಿರುತ್ತಿತ್ತು.

ವಾಸ್ತವವೆಂದರೆ ಆ ನಂತರದ ಅವಧಿಯಲ್ಲಿ ನಿರಾಶ್ರಿತರಾಗಿ ಬಂದವರು ಕೆಳಜಾತಿಗಳ ರೈತಾಪಿ ವರ್ಗದವರಾಗಿದ್ದು ಎಡಪಕ್ಷಗಳು ಅವರ ಬಗ್ಗೆ ಮಿತ್ರ ಧೋರಣೆಯನ್ನೇನೂ ಪ್ರದರ್ಶಿಸಲಿಲ್ಲ. ಅದಕ್ಕೆ ಅವರಿಂದಾಗಿ ಸರ್ಕಾರಕ್ಕೆ ಹೆಚ್ಚುತ್ತಿದ್ದ ಹಣಕಾಸು ಹೊಣೆಗಾರಿಕೆಯೂ ಒಂದು ಕಾರಣವಿದ್ದಿರಬಹುದು. ಭೂಮಿ ಹಂಚಿಕೆಯ ಕುರಿತು ಎಡಪಕ್ಷಗಳು ಯಶಸ್ವೀ ಮುಂದೊಡಗನ್ನು ತೋರಿದವು. ಆದರೆ ನಂತರದ ದಿನಗಳಲ್ಲಿ ಬಡ ರೈತಾಪಿ ವರ್ಗದಿಂದ ದೂರಗೊಂಡರು. ಹೀಗೆ, ಎಡಪಕ್ಷಗಳ ಆಳ್ವಿಕೆಯು ಮೇಲ್ನೋಟಕ್ಕೆ ಸ್ಥಿರತೆಯಿಂದ ಕೂಡಿರುವುದಾಗಿ ಕಂಡುಬಂದರೂ, ದೀರ್ಘಕಾಲದ ಆಳ್ವಿಕೆಯಲ್ಲಿ ಅದರ ಸಾಮಾಜಿಕ ತಳಹದಿ ನಿರಂತರವಾಗಿ ಕುಸಿಯುತ್ತಲೇ ಹೋಗಿತ್ತು. ಈ ಒಡಕಿನ ಲಾಭವನ್ನು ಪಡೆದುಕೊಂಡ ತೃಣಮೂಲ ಕಾಂಗ್ರೆಸ್ (ಟಿಎಂಸಿ) 2011ರಲ್ಲಿ ಅಧಿಕಾರವನ್ನು ಪಡೆದುಕೊಂಡಿತು. ಆದರೆ ಅದೂ ಸಹ ಬಂಗಾಳದಲ್ಲಿ ಲಾಗಾಯ್ತಿನಿಂದಲೂ ಪರಿಣಾಮಕಾರಿಯೆಂದು ರುಜುವಾತಾದ ರಾಜಕೀಯ ತಂತ್ರಗಾರಿಕೆಯನ್ನೇ ಮುಂದುವರೆಸಿತು. ತನ್ನ ಹಿಂದಿನವರಂತೆ ಟಿಎಂಸಿ ಸಹ ಮುಸ್ಲಿಂ ಸಮುದಾಯದ ಅತ್ಯಂತ ಪ್ರತಿಗಾಮಿ ನಾಯಕರನ್ನು ಓಲೈಸಲು ಪ್ರಾರಂಭಿಸಿತು. ಉದಾಹರಣೆಗೆ ಈಗ ಟಿಎಂಸಿ ಪಕ್ಷದಿಂದ ಸಂಸದನಾಗಿರುವ ಇದ್ರೀಸ್ ಅಲಿ ಎಂಬುವನೇ 2007ರಲ್ಲಿ ಬಾಂಗ್ಲಾದೇಶದಿಂದ ಬಹಿಷ್ಕೃತಳಾಗಿದ್ದ ಬರಹಗಾರ್ತಿ ತಸ್ಲಿಮಾ ನಸ್ರೀನ್ ಅವರನ್ನು ಪಶ್ಚಿಮ ಬಂಗಾಳದಿಂದಲೂ ಓಡಿಸಬೇಕೆಂದು ಆಗ್ರಹಿಸಿ 2007ರಲ್ಲಿ ಗಲಭೆಗಳನ್ನು ಹುಟ್ಟುಹಾಕಿದ್ದ.

ಪ್ರಾಯಶಃ ಪಶ್ಚಿಮ ಬಂಗಾಳದ ರಾಜಕೀಯಕ್ಕೆ ಟಿಎಂಸಿ ನೀಡಿದ ಬಹುದೊಡ್ಡ ಕೊಡುಗೆಯೆಂದರೆ ಸಾರ್ವಜನಿಕ ಜೀವನದಲ್ಲಿ ಧಾರ್ಮಿಕ ವಿಷಯದ ಬಗ್ಗೆ ಮಾತನಾಡುವುದರ ಬಗ್ಗೆ ಇದ್ದ ಸ್ವಯಂ ನಿಷೇಧವನ್ನು ಕಿತ್ತುಹಾಕಿದ್ದೇ ಇರಬೇಕು. ಮಮತಾ ಬ್ಯಾನರ್ಜಿಯವರು ತನ್ನ ಮುಸ್ಲಿಂ ಮತಕ್ಷೇತ್ರವನ್ನುದ್ದೇಶಿಸಿ ಪದೇಪದೇ ನೀಡುವ ಟೊಳ್ಳು ಸಾಂಕೇತಿಕ ಸಂದೇಶಗಳು ಮತ್ತು ಸಂಕೇತಗಳು ಸಾಮಾನ್ಯ ಮುಸ್ಲಿಮರ ಬದುಕಿನಲ್ಲಂತೂ ಯಾವುದೇ ಬಗೆಯ ಬದಲಾವಣೆಯನ್ನೂ ತಂದಿಲ್ಲ. ಆಕೆಯ ತೋರಿಕೆಯ ಮುಸ್ಲಿಂ ಪರವಾದ ಧೋರಣೆಗಳು ಹೆಚ್ಚೆಂದರೆ ಮುಸ್ಲಿಂ ಸಮುದಾಯದ ಪ್ರತಿಗಾಮಿ ನಾಯಕರಿಗೆ ಮತ್ತಷ್ಟು ಹುಚ್ಚು ಧೈರ್ಯ ತುಂಬುತ್ತಿದೆ. ಮತ್ತು ಅದೇ ಸಮಯದಲ್ಲಿ ಆಕೆಯ ಸವರ್ಣೀಯ ಹಿಂದೂ ಬೆಂಬಲಿಗರಲ್ಲಿ ಸಾಕಷ್ಟು ಕಿರಿಕಿರಿಯನ್ನೂ ಉಂಟುಮಾಡಿದೆ. ಅಸಮಾಧಾನಗೊಂಡಿರುವ ಮತ್ತು ಭಯಭೀತ ಸ್ಥಿತಿಯಲ್ಲಿರುವ ಹಿಂದೂಗಳ ಬೆಂಬಲವನ್ನು ಪಡೆದುಕೊಳ್ಳಲು ಬಿಜೆಪಿಯು ಈ ಸಂದರ್ಭವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿದೆ. ಬರಲಿರುವ ವರ್ಷಗಳಲ್ಲಿ ಬಿಜೆಪಿಯ ಕಾರ್ಯತಂತ್ರವು ಅದನ್ನು ಪಶ್ಚಿಮ ಬಂಗಾಳದಲ್ಲಿ ಅಧಿಕಾರಕ್ಕೂ ತಂದುಬಿಡಬಹುದು. ಆದರೆ ಇತಿಹಾಸ ಹೇಳುವುದೇನೆಂದರೆ ಪಶ್ಚಿಮ ಬಂಗಾಳಕ್ಕೆ ಕೋಮುವಾದವನ್ನು ಯಾರೂ ಹೊರಗಿನಿಂದ ಆಮದುಮಾಡಿಕೊಳ್ಳಬೇಕಿಲ್ಲ. ಅದು ಈಗಾಗಲೇ ಆ ಸಮಾಜದಲ್ಲಿ ಅಸ್ತಿತ್ವದಲ್ಲಿದ್ದು ಈವರೆಗೆ ರಾಜ್ಯವನ್ನು ಆಳಿದ ಎಲ್ಲಾ ಪಕ್ಷಗಳು ಅದನ್ನು ಪೋಷಿಸಿವೆ. ■

12 ⏮

...ೆ. ಆದರೆ ಗಮನಾರ್ಹವಾಗಿ ವಿಶ್ವಸಂಸ್ಥೆಯ ನಿರ್ಣಯ, ...ರಾಷ್ಟ್ರ ಸೂತ್ರ, ಮಾತುಕತೆಗಳ ಪ್ರಸ್ತಾಪ ಇಲ್ಲ. ಎರಡು ...ಗಳ ಹಿಂದೆ ಪ್ಯಾಲೆಸ್ಟೀನ್ ಅಧ್ಯಕ್ಷ ಮಹಮೂದ್ ಅಬ್ಬಾಸ್ ...ರತಕ್ಕೆ ಬಂದಿದ್ದಾಗ ಇದೇ ಮೋದಿ ಮಾತುಕತೆ ...ನರಾರಂಭದ ಬಗ್ಗೆ ಹೇಳಿದ್ದ. ಆದರೆ ಇಂದಿನ ...ದ-ಇಸ್ರೇಲ್ ಜಂಟಿ ಹೇಳಿಕೆಯನ್ನು ನೋಡಿದರೆ ಅದರ ...ಸ್ತಾಪವೇ ಇಲ್ಲ. ತನ್ನದೇ ದೇಶದ ಇತಿಹಾಸವನ್ನು ...ನುಕೂಲವಾಗುವ ರೀತಿಯಲ್ಲಿ ತಿರುಚುತ್ತಿರುವ ಮೋದಿ ...ರ ಪ್ಯಾಲೆಸ್ಟೀನಿಯರ ಹೋರಾಟದ ಇತಿಹಾಸಕ್ಕೆ ಬೆಲೆ ...ಡುತ್ತದೆಂಬ ನಿರೀಕ್ಷೆ ಇಟ್ಟುಕೊಳ್ಳಲು ಸಾಧ್ಯವೆ?

ಭಯೋತ್ಪಾದನೆ

...ಗಡಿಯಾಚೆಯ ಭಯೋತ್ಪಾದನೆ ವಿಷಯವನ್ನು ಜಂಟಿ ...ಳಿಕೆಯಲ್ಲಿ ಸೇರಿಸಬೇಕೆಂಬುದು ಭಾರತದ ...ಬಯಕೆಯಾಗಿತ್ತು, ಆದರೆ ಇದರಿಂದ ಇಸ್ರೇಲಿಗೆ ...ಜುಗರವಾಗುತ್ತಿತ್ತು, ಏಕೆಂದರೆ ಪ್ಯಾಲೆಸ್ಟೀನ್ ಪ್ರದೇಶಗಳನ್ನು ...ಕಾನೂನುಬಾಹಿರವಾಗಿ ವಶಪಡಿಸಿಕೊಂಡಿರುವುದರಿಂದ ...ರ ಗಡಿಗಳನ್ನೂ ಸ್ಪಷ್ಟವಿಲ್ಲ, ಆದುದರಿಂದಲೆ ಹೇಳಿಕೆಯನ್ನು ...ಲಾಯಿಸಿ ಭಯೋತ್ಪಾದನೆಯ ಮೂಲಗಳು ಮತ್ತು ...ೋಜಕನ್ನು ಸಲ್ಲದು ಎಂದು ಬರೆಯಲಾಗಿದೆ. 2008ರ ...ಂಬಯಿ ದಾಳಿ ಕಾರಣಕರ್ತರನ್ನು ಶಿಕ್ಷೆಗೆ ಗುರಿಪಡಿಸುವ ...ಷಯವನ್ನೂ ಕೈಬಿಡಲಾಗಿದೆ.

ಹಿಂದೂತ್ವ ಮತ್ತು ಜಯೊನಿಸಂ ನಡುವೆ ಸಾಮ್ಯ

ತಿಯೊಡೋರ್ ಹರ್ಜ್‌ಲ್ 1897ರಲ್ಲಿ ಹುಟ್ಟುಹಾಕಿದ ಜಯೊನಿಸಂ ಸಿದ್ಧಾಂತ ಯಹೂದಿ ಸಮುದಾಯ ಮತ್ತು ಯಹೂದಿ ರಾಷ್ಟ್ರ ನಿರ್ಮಾಣವನ್ನು ಪ್ರತಿಪಾದಿಸುತ್ತದೆ. ಇದು ಸಾವರ್ಕರ್ ಪ್ರತಿಪಾದಿಸಿದ ಹಿಂದೂತ್ವ ಸಿದ್ಧಾಂತಕ್ಕೆ ಸಮನಾಗಿದೆ. ಅದಕ್ಕೇ ಸಾವರ್ಕರ್ ಕೂಡ ಜಯೊನಿಸಂನ್ನು ಬೆಂಬಲಿಸಿದ್ದ. "ಪ್ಯಾಲೆಸ್ಟೀನ್ ಒಂದು ಯಹೂದ್ಯ ರಾಷ್ಟ್ರವಾದಲ್ಲಿ ನಮಗೆ ಹೆಚ್ಚುಕಡಿಮೆ ಯಹೂದಿಗಳಷ್ಟೆ ಸಂತಸವಾಗಲಿದೆ" ಎಂದಾತ ಹೇಳಿದ್ದ. ಇಸ್ಲಾಂ ದ್ವೇಷದ ವಿಷಯದಲ್ಲಿ ಹಿಂದೂತ್ವವಾದ ಮತ್ತು ಜಯೊನಿಸಂ ನಡುವೆ ಬಹಳಷ್ಟು ಸಾಮ್ಯಗಳಿವೆ. ಮುಸ್ಲಿಂ ರಾಷ್ಟ್ರಗಳಿಗೆ ಸೆಡ್ಡುಹೊಡೆದು ನಿಂತಿರುವ ಇಸ್ರೇಲ್ ಅಂದರೆ ಆರೆಸ್ಸೆಸ್‌ಗೆ ಎಲ್ಲಿಲ್ಲದ ಪ್ರೀತಿ. ಅರಬರೊಂದಿಗೆ ಕದನ ನಡೆಸುವ ಇಸ್ರೇಲಿನಂತೆ ಭಾರತವೂ ಆಗಬೇಕೆಂಬುದು ಸಂಘಿಗಳ ಹೆಬ್ಬಯಕೆ. ಆದುದರಿಂದಲೆ ಇಸ್ಲಾಂ ವಿರುದ್ಧದ ಸಮರದಲ್ಲಿ "ಹಿಂದೂ" ಭಾರತ ಮತ್ತು "ಯಹೂದಿ" ಇಸ್ರೇಲ್‌ಗಳ ಮೈತ್ರಿ ಸಹಜವಾಗಿದೆ. ಆದರೆ ಭಾರತದ ವಿದೇಶಾಂಗ ನೀತಿಯ ಪ್ರಮುಖ ಸೂತ್ರಗಳಿಗೆ ತಿಲಾಂಜಲಿಯಿತ್ತು ಇಸ್ರೇಲಿನ ಆಕ್ರಮಣ ಮತ್ತು ದಮನತಂತ್ರಗಳನ್ನು ಒಪ್ಪಿರುವ ಮೋದಿ ಸರ್ಕಾರದ ಕ್ರಮದಿಂದಾಗಿ ಮುಂಬರುವ ದಿನಗಳಲ್ಲಿ ಮಧ್ಯಪ್ರಾಚ್ಯದಲ್ಲಿರುವ ಭಾರತೀಯರಿಗೆ ಅಪಾಯ ಕಾದಿದೆ. ■

'ಷಂಡ'ರಾಪುರವಾಗುತ್ತಿದೆಯೇ ನಮ್ಮೀ ಕರಾವ

ಹೊಗಳಿಕೆ ತೆಗಳಿಕೆ


ಈಕೆ ಓರ್ವ ಹೆಣ್ಣು, ಅದರಲ್ಲೂ 'ಸನಾತ'ನ ಸಂಸ್ಕೃತಿಯನ್ನು ಗುತ್ತಿಗೆ ಹಿಡಿದಂತಹ ಸಂಘಟನೆಯಿಂದ ಬಂದು ರಾಜ್ಯ ಬಿಜೆಪಿಯಲ್ಲಿ ಒಂದು ಕಾಲಕ್ಕೆ ಕರ್ನಾಟಕದ ಲಕ್ಷ್ಮಿಪಾರ್ವತಿಯೆಂದೇ ಹೆಸರುವಾಸಿಯಾದಾಕೆ (ಆಂಧ್ರದಲ್ಲಿ ಎಂಟಿಆರ್ ತನ್ನ ಮುದಿವಯಸ್ಸಿನಲ್ಲಿ ಸಿಎಂ ಆಗಿದ್ದಾಗ ರಾಜಕೀಯದ ಜಬರ್ದಸ್ತಿಲ್ಲ ಯಾವ ಕೌಟುಂಬಿಕ ಸಂಬಂಧ



ವೂ ಇರದ ಲಕ್ಷ್ಮಿಪಾರ್ವತಿ ಎಂಬಾಕೆಯ ಕೈಯ್ಯಲ್ಲಿತ್ತು). ಕಳೆದ ಬಿಜೆಪಿ ಆಡಳಿತಾವಧಿಯಲ್ಲಿ ಇದ್ದಂತಹ ಏಕೈಕ ಮಹಿಳಾ ಸಚಿವೆಯೂ ಈಕೆಯಲ್ಲದೇ ಆ ಆಡಳಿತಾವಧಿಯಲ್ಲಿ ಬದಲಾದ ಮೂರುಮುಕ್ಕಾಲು ಮುಖ್ಯಮಂತ್ರಿಗಳ ಪಟ್ಟಿಯಲ್ಲಿ ಈಕೆಯ ಹೆಸರೂ ಕೂಡ ಹರಿದಾಡಿತ್ತು. ಚಾರು ವಾಕ್ ಅರ್ಥಾತ್ ಸವಿ ಮಾತು ಎಂಬರ್ಥದ ಪುತ್ತೂರಿನ 'ಚಾರ್ವಾಕ' ಎಂಬಲ್ಲಿ ಅವತರಿಸಿದ್ದ ಈ ಸುಪ್ರಸಿದ್ಧ ಮಹಿಳೆಯ ಬಾಯಿ ಮಾತ್ರ ಬಚ್ಚಲು ಹೊಂಡ.

ರಾಜ್ಯದ ಯಾವ ಮೂಲೆಯಲ್ಲೇ ಆಗಲಿ ಸಾಬಿಗಳು ಹಿಂದೂಗಳನ್ನು ಕಡಿದು ಕೊಂದರು ಅಥವ ಅತ್ಯಾಚಾರ ಮಾಡಿದರು ಎಂಬ ಸಣ್ಣ ಗುಲ್ಲೆದ್ದರೂ ಅದರ ಸತ್ಯಾಸತ್ಯತೆ ವಿಚಾರಿಸದೇ ಓಡಿಬಂದು ತನ್ನ ಬಾಯಿ ಬಚ್ಚಲಿನ ಕಸ ಕೊಳೆಗಳನ್ನೆಲ್ಲ ಹೊರಹಾಕಿ ದ್ವೇಷ ಹಚ್ಚಿಬಿಡುವಂತಹ ಚಾಳಿ ಈಕೆಯದು. ಆದರೆ ಈಕೆ ತನ್ನದೇ ಸರಕಾರ ಆಡಳಿತದಲ್ಲಿದ್ದಾಗ ತನ್ನದೇ ಜಿಲ್ಲೆಯಲ್ಲಿ, ತನ್ನದೇ ಜಾತಿಯ (ಅಥವ ಇವನ್ನೆಲ್ಲ ಹೊರತಾಗಿ ನೋಡಿದರೂ ಕೂಡ ಮಾನವೀಯತೆಯಿಂದ ಸ್ಪಂದಿಸಬೇಕಾಗಿದ್ದ) ಸೌಜನ್ಯಾ ಎಂಬ ಮುಗ್ಧ ಹೆಣ್ಣಿನ ಅಮಾನುಷ ಕಗ್ಗೊಲೆಯ ಸಮಯದಲ್ಲಿ ಮಾತ್ರ ತನ್ನ 'ಬಚ್ಚಲು' ಮನೆಗೆ ಇಪ್ಪತ್ತು ಲಿವರಿನ ಬೀಗ ಹಾಕಿ ಕೂತಿದ್ದ ಇತಿಹಾಸವೂ ಇದೆ. ಒಟ್ಟಾರೆ ತನ್ನ ಕೋಪತಾಪಗಳೆಲ್ಲ ಕೇವಲ ಸಾಬರು ಮತ್ತು ಸಿದ್ದರಾಮಯ್ಯರ ಮೇಲಷ್ಟೇ ಎಂದು ಸ್ವಯಂ ಶರತ್ತನ್ನು ಈಕೆ ಹಾಕಿಕೊಂಡಿದ್ದಳಂತೆ ಪಾಪ.

ಫ್ಯಾಸಿಸ್ಟ್ ಶಕ್ತಿಗಳಿಗಿರುವ ಏಕೈಕ ದುಃಸ್ವಪ್ನವೆಂದರೆ ಅದು ವಿರೋಧ. ವಿರೋಧ ಸಣ್ಣದೇ ಇರಲಿ ದೊಡ್ಡ ಮಟ್ಟದ್ದೇ ಇರಲಿ ಹೆಸರಿಗಾದರೂ ತಮ್ಮ ಮುಂದೆ ವಿರೋಧಿಸುವವರು ಇರಲೇಬಾರದೆಂಬುದು ಅವರ ಮೊದಲ ಸಿದ್ಧಾಂತ. ಈ ಸಿದ್ಧಾಂತದ ಹಿನ್ನೆಲೆಯಿಂದಲೇ ಹುಟ್ಟಿದ್ದು ಅವರ 'ಕಾಂಗ್ರೆಸ್ ಮುಕ್ತ ಭಾರತ'ವೆಂಬ ಪ್ರಜಾಪ್ರಭುತ್ವ ಸಿದ್ಧಾಂತಕ್ಕೇ ಅವಮಾನಿಸುವಂತಹ ನಿಲುವು. (ಕಾಂಗ್ರೆಸ್‌ನ



ಸೈದ್ಧಾಂತಿಕ ವಿರೋಧಗಳಿಲ್ಲವೋ ಎಷ್ಟು ಪ್ರಾಮಾಣಿಕ ಎನ್ನುವುದು ಬೇರೆ ವಿಚಾರ.)

ಒಟ್ಟಾರೆ ಅಮಿತ್ ಷಾನ ಖಡಕ್ ಆದೇಶದಂತೆ ದೇಶದಲ್ಲಿ ತಮಗಿರುವ ಏಕೈಕ ದೊಡ್ಡ ತಡೆಯಾಗಿರುವ ಸಿದ್ದು ಸರಕಾರವನ್ನು ಹಣಿಯಲು ಚಾತಕ ಪಕ್ಷಿಯಂತೆ ಕಾದು ಇದೀಗ ಫೀಲ್ಡಿಗಿಳಿದಿರುವ ಬಿಜೆಪಿಯ ರಾಜ್ಯಾಧ್ಯಕ್ಷ ಹಾಗು ಮುಖ್ಯಕಾರ್ಯದರ್ಶಿಗಳೆಂಬ ಈ 'ಜೋಡಿ ಜೀವ'ಗಳು ಆಡುತ್ತಿರುವ ಆಟ ಮಾತ್ರ ತೀರಾ ಅಸಹ್ಯಕಾರಿಯಾದದ್ದು. ಕರಾವಳಿಯಲ್ಲಿ ಹಬ್ಬುತ್ತಿರುವ ಗಲಭೆಯ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕರೆದ ಶಾಂತಿಸಭೆಗೆ ಕಾಟಾಚಾರಕ್ಕೂ ಹಾಜರಾಗದ ಇವರ ಈ ನಡವಳಿಕೆ ಇವರುಗಳು ವಾಸ್ತವವಾಗಿ ಬಯಸುತ್ತಿರುವುದು ಏನನ್ನು ಎಂಬುದನ್ನು ಎತ್ತಿ ತೋರಿಸುತ್ತದೆ. ಇವುಗಳಿಗೆ ಶಾಂತಿಗಿಂತ ಉನ್ಮಾದ ಸ್ಥಿತಿ ಮುಂದುವರೆಯುವಿಕೆಯೇ ಬೇಕೆನ್ನುವುದು ಇದರಲ್ಲಿ ಸ್ಪಷ್ಟ.

ತಾನು ದೇಶಭಕ್ತಿಯ ಗುತ್ತಿಗೆ ಹೊತ್ತ ಪಕ್ಷದಿಂದ ಬಂದು ರಾಜ್ಯದ ಜವಾಬ್ದಾರಿಯುತ ಮುಖ್ಯಮಂತ್ರಿಯೂ ಆದಂತವನು ಎಂಬುವುದನ್ನು ಮರೆತು ಒಟ್ಟಾತ ರಾಜ್ಯಕ್ಕೇ ಬೆಂಕಿಯಿಡುವ ಮಾತನ್ನಾಡುತ್ತಾನೆ. ಅದೇನು ನಂಬಿದವಳನ್ನು ನೀರಿನ ಸಂಪಿನೊಳಗೆ ದೂಡಿದಷ್ಟು ಸುಲಭ ಎಂದಾತ ಭಾವಿಸಿರಬೇಕು. ಆತನ ಸಹಚರಿ ಇನ್ನೂ ಮುಂದುವರೆದು ತನ್ನ ಬಚ್ಚಲು ಬಾಯಿ ತೆರೆದು 'ಕರಾವಳಿಯವರು ಷಂಡರೇ?' ಎಂದು ಸ್ಥಳೀಯರನ್ನು ಮತ್ತಷ್ಟು ಪ್ರಚೋದಿಸ ಹೊರಡುತ್ತಾಳೆ. ರಾಜ್ಯದ ಜನತೆಗೆ ಇದೇನು ಗಾಬರಿ ಹುಟ್ಟಿಸುವ ಅಚ್ಚರಿಯ ವಿಷಯವೇನೂ ಖಂಡಿತಾ ಅಲ್ಲ, ಇಂತಹ ಸೊಂಟದ ಕೆಳಗಿನ ಹೊಲಸು ಮಾತುಗಳ ದೊಡ್ಡ ಉಗ್ರಾಣವೇ ಈಕೆಯಲ್ಲಿದೆಯೆಂಬುದು ಯಾವತ್ತೋ ಸಾಬೀತಾಗಿರುವ ಅಂಶ.

ಹಿಂದೊಮ್ಮೆ ಇದೇ ಸಿದ್ದರಾಮಯ್ಯ ಯಾವನದ್ದೋ ಕೂದಲಿಗೂ ಸಮ ಅಲ್ಲ ಎಂದು ಈಕೆಯೇ ಎಲ್ಲವನ್ನೂ ಕೂ(ದ)ಲಂಕಷ ಸ್ಟಡಿ ಮಾಡಿಬಂದಂತೆ ರಿಪೋರ್ಟ್ ಕೊಟ್ಟು ತನ್ನ ಹೊಲಸುತನವನ್ನು ಹೊರಹಾಕಿದ್ದಳು. ಅದರ ಮುಂದುವರಿಕೆಯೇ ಈ ಷಂಡತನದ ಮಾತು.

ಹೌದು, ಈಕೆಯ ಮಾತಿನಂತೆ ಕರಾವಳಿಗರು ಷಂಡರಾಗುತ್ತಿರುವುದು ಒಂದರ್ಥದಲ್ಲಿ ಸತ್ಯವೇ ಹೌದು. ಷಂಡ ಎಂದರೆ ನಿರ್ವೀರ್ಯ ಅಥವ ನಪುಂಸಕ ಎಂದರ್ಥ. ನಮ್ಮಲ್ಲಿ ಹಿಂದಿನಿಂದಲೂ ಎತ್ತುಗಳ ಪ್ರಕೃತಿ ಸಹಜ ಜೀವನಕ್ಕೆ ಕತ್ತರಿಹಾಕಿ ತಮ್ಮ ಆಣತಿಯಂತೆ ತಲೆಬಗ್ಗಿಸಿ ದುಡಿಯಲು ಹಚ್ಚುವ ಸಲುವಾಗಿ ಅವುಗಳನ್ನು ಬರೆಹಾಕಿ ನಪುಂಸಕವನ್ನಾಗಿಸುವ ಕ್ರಮವುಂಟು. ಇಂತಹ ಕೋಣ-ಎತ್ತುಗಳನ್ನು ಬಂಡಿಗೋ, ಉಳುಮೆ, ಗಾಣಕ್ಕೋ ಇಲ್ಲಾ ಕಂಬಳಕ್ಕೋ ತನ್ನ ಹಿಡಿತದಲ್ಲಿಟ್ಟುಕೊಂಡು ಬಳಸಿಕೊಳ್ಳುತ್ತಾರೆ. ಅದೇ ರೀತಿ ಕರಾವಳಿ ಪರಿಸರ ಪ್ರಾಚೀನಕಾಲದಿಂದಲೂ ಕುಂದಿಲ್ಲದೇ ನಡೆದುಕೊಂಡು ಬರುತ್ತಿದ್ದ ಸೌಹಾರ್ದ ಬಾಂಧವ್ಯ ಎಂಬ ಬದುಕಿನ ಸಹಜ ಸಿದ್ಧಾಂತಗಳಿಗೆ, ವಿರುದ್ಧವಾಗಿ ಕೆಲ ಸಮಾಜಘಾತುಕ ಶಕ್ತಿಗಳು ಜನರಲ್ಲಿ ಆದರಲ್ಲೂ ಮುಖ್ಯವಾಗಿ ಯುವಜನರಲ್ಲಿ ಮತೀಯ ದ್ವೇಷಗಳ ಕೋಮು ವಿಷವನ್ನು ತುಂಬಿ ಅವರ ಸಹಜ ಬದುಕಿಗೆ ವಿಮುಖವಾಗಿ ಹಾದಿ ತಪ್ಪಿಸುವ ಮೂಲಕ ಅವರನ್ನು ವ್ಯವಸ್ಥಿತವಾಗಿ ಷಂಡರನ್ನಾಗಿ ಮಾಡಲಾಗುತ್ತಿದೆ ಎನ್ನುವುದು ಖಂಡಿತಾ ಸತ್ಯ.

ಇದರಲ್ಲಿ ಇನ್ನೂ ವಿಶೇಷವೆಂದರೆ. ಸಹಸ್ರಾರು ವರ್ಷಗಳಿಂದ ವಿದ್ಯೆ ಹಾಗು ಸುರಕ್ಷಿತ ಜೀವನದಿಂದ ವಂಚಿತರನ್ನಾಗಿಸಿದ ಇದೇ ವೈದಿಕಶಾಹಿಯ ಷಡ್ಯಂತ್ರಕ್ಕೆ ಬಲಿಯಾಗಿ ಅವರ ಆಣತಿಯಂತೆಯೇ ತಮ್ಮ ಅಮೂಲ್ಯ ಬದುಕನ್ನು ಹಾಳು ಮಾಡಿಕೊಳ್ಳುತ್ತಿರುವ (ಕೊನೆಗಾಲದಲ್ಲಿ ತಮಗೆ ಆಸರೆಯಾಗಬೇಕಿದ್ದ ಒಬ್ಬನೇ ಮಗ ಶರತ್‌ನನ್ನು ಕಳಕೊಂಡ ಅವನ ಪೋಷಕರಂತೆ) ಮೂಲಕ ಇಲ್ಲಿನ ದಲಿತ-ಹಿಂದುಳಿದ ವರ್ಗಗಳ ಮಾನಸಿಕ ಷಂಡ[illegible] ತನಕ್ಕೆ ಗುರಿಯಾಗುವವರನ್ನು ತಡೆಯುವವ[illegible] ಯಾರು?

ಒಂದು ತಿಳಿದುಕೊಳ್ಳಿ ಸುತ್ತ ಗನ್‌ಮ್ಯಾನ್[illegible] ಇಟ್ಟುಕೊಂಡು, ಪುಂಡ ಪಟಾಲಮ್ ಕಟ್ಟಿ[illegible] ರಾಜಕೀಯ ಪ್ರಭಾವ ಬೆಳೆಸಿಕೊಂಡು ಸಭೆಗಳಲ್ಲಿ ಕಿರುಚಾಡಿ ದ್ವೇಷ ಹಬ್ಬಿಸುವುದು ಯಾವ ವೀ[illegible] ಅಲ್ಲ, ಸಹಬಾಳ್ವೆ ಸಹೋದರತ್ವಗಳಿಗೆ ಪೂ[illegible] ನಡೆದುಕೊಳ್ಳುವಂತಹ ಮನಸ್ಥಿತಿ ಬೆಳೆಸಿಕೊ[illegible] ಸಾಮರ್ಥ್ಯ ಅಥವ ಮಾನಸಿಕ ಆರೋಗ್ಯಕ್ಕಿಂತ ದ[illegible] ಈ ಸಮಾಜದಲ್ಲಿ ಯಾವುದೂ ಇಲ್ಲ. ಯಾರದೆ[illegible] ಮಕ್ಕಳನ್ನು ಬಾವಿಗೆ ದೂಡಿ ಆಳ ನೋಡು[illegible] ಮನೋಭಾವದ ಕ್ರಿಮಿಗಳಿಗೆ ಇವೆಲ್ಲ ಯಾವ [illegible] ಅರ್ಥವಾಗದು.

- ಸತೀಶ್ ಪೂಜಾರಿ, ಮಂಗ[illegible]

ಕಲ್ಲಡ್ಕ ಇಸ್ಮಾಯಿಲ್ ಕೊಲೆ[illegible] ಮತ್ತು ಆರ್‌ಎಸ್‌ಎಸ್


ಕಳೆದ ವಾರ ಪ್ರಕಟವಾದ ನನ್ನ ಪತ್ರದಲ್ಲಿ[illegible] ಇಸ್ಮಾಯಿಲ್ ಕೊಲೆಯಾಗಿದ್ದು 1975-76 ರಲ್ಲಿ[illegible] ನಾನು ತಪ್ಪಾಗಿ ಬರೆದಿದ್ದೆ. ನಿಜವಾಗಿ ಇಸ್ಮಾಯಿಲ[illegible] ನಡೆದಿದ್ದು 1971ರಲ್ಲಿ. ಆಗ ಕಾಂಗ್ರೆಸ್‌ನ[illegible] ಇಂಡಿಕೇಟ್- ಸಿಂಡಿಕೇಟ್ ಜಗಳ ನಡೆಯುತ್ತಿತ್ತು[illegible] ಸಂಘಿಗಳು ಈ ಅವಕಾಶ ಉಪಯೋಗಿಸಿ ತಮಗೆ [illegible] ಕೊಡುತ್ತಿದ್ದ ಕಾಂಗ್ರೆಸ್ಸಿನ ಒಬ್ಬ ಮುಸ್ಲಿಂ ಕಾರ್ಯಕ[illegible] ಮುಗಿಸಿದ್ದರು.

ನನಗೆ ಈಗ ಸಿಕ್ಕಿರುವ ಹೆಚ್ಚಿನ ಮಾಹಿತಿಯಂತೆ[illegible] ರಲ್ಲಿಯ ಇಸ್ಮಾಯಿಲ್ ಕೊಲೆ ಆರೋಪಿಗಳಲ್ಲಿ ಒಬ[illegible] ಬ್ರಾಹ್ಮಣನಿದ್ದು ಆಗ ಅವನು ಕೇವಲ 30 [illegible] ಯುವಕನಾಗಿದ್ದ. ಇಂದು ಅವನೇ 76 ವರ್ಷದ [illegible]



ರಕ್ತಗತ ವೀರತ್ವಕ್ಕೂ, ರಕ್ತಗತ ಕ್ರಿಮಿನಲ್ ಬುದ್ಧಿಗೂ ವ್ಯತ್ಯಾಸ ಇ[illegible]

"ದಕ್ಷಿಣ ಕನ್ನಡ ಜಿಲ್ಲೆಯವರೇನು ಷಂಡರಾ" ಎಂದು ಶೋಭಾ ಕರಂದ್ಲಾಜೆ ಚಾಲೆಂಜ್ ಹಾಕಿದ್ದಾರೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯವರು ಷಂಡರೋ ಇಲ್ಲವೋ ಗೊತ್ತಿಲ್ಲ, ಆದರೆ ಒಂದಂತೂ ಸ್ಪಷ್ಟ. ಅದೇನೆಂದರೆ ಆರು ತಿಂಗಳಿಗೊಮ್ಮೆ ಮಂಗಳೂರಿನ ಮಂಗಳಾ ಸ್ಟೇಡಿಯಮ್‌ನಲ್ಲಿ ಮಿಲಿಟರಿ ರಿಕ್ರೂಟ್‌ಮೆಂಟ್ ನಡೆಯುವಾಗ ಅಲ್ಲಿ ಬರುವ 98% ಅಭ್ಯರ್ಥಿಗಳು ಚಿಕ್ಕಮಗಳೂರು, ಹಾಸನ, ಶಿವಮೊಗ್ಗ ಜಿಲ್ಲೆಯವರೇ ಆಗಿರುತ್ತಾರೆ. ಸ್ಥಳೀಯ ಅಭ್ಯರ್ಥಿಗಳು ತುಂಬಾ ವಿರಳ. ದಕ್ಷಿಣ ಕನ್ನಡ-ಉಡುಪಿ ಜಿಲ್ಲೆಯವರದ್ದು ಕೇವಲ ಬಾಯಲ್ಲಿ ದೇಶ ಭಕ್ತಿ! ಸೇನಾಪಡೆ ಸೇರುವ ವಿಷಯ ಬಂದಾಗ ಅವರು ಬಿಲ ಸೇರಿಕೊಳ್ಳುತ್ತಾರೆ. ಕರಾವಳಿಯವರು ನಿರುದ್ಯೋಗಿ ಆಗಿದ್ದುಕೊಂಡು ಸಂಘ ಪರಿವಾರದ ಕಾಲಾಳು ಆಗಿ ಗಾಂಜಾ ದಾಸರಾಗಿ ಸಮಾಜ ಘಾತಕ ಕೆಲಸ ಮಾಡುತ್ತಾ ತಮ್ಮ ಜೀವನ ವ್ಯರ್ಥ ಮಾಡಿಕೊಳ್ಳುವಲ್ಲಿ ನಿಸ್ಸೀಮರು.



ಕರ್ನಾಟಕದಲ್ಲಿ ಅತಿಹೆಚ್ಚು ಸೇನಾಪಡೆ ಸೇರುವ ಯುವಕರನ್ನು ಕೊಟ್ಟಿರುವ ಜಿಲ್ಲೆಗಳೆಂದರೆ ಕೊಡಗು ಹಾಗೂ ಬೆಳಗಾವಿ ಜಿಲ್ಲೆ. ವಿಜಾಪುರ-ಬಾಗಲಕೋಟೆ ಜಿಲ್ಲೆಯವರೂ ದೊಡ್ಡ ಸಂಖ್ಯೆಯಲ್ಲಿ ಸೇನಾಪಡೆ ಸೇರುತ್ತಾರೆ. ಆದರೆ ದಕ್ಷಿಣ ಕರಾವಳಿ ಅರ್ಥಾತ್ ತುಳುನಾಡಿನ ಯುವಕರು ಪ್ರಕೃತಿಯ ದಯೆಯಿಂದ ಉತ್ತಮ ದೇಹದಾರ್ಢ್ಯ ಹೊಂದಿದ್ದರೂ ರಣಹೇಡಿಗಳಂತೆ ಸೇನೆ ಸೇರಲು ಭಯಪಡುತ್ತಾರೆ. ಭೂಗತ ಜಗತ್ತು ಸೇರಲು ಮಾತ್ರ ಕರಾವಳಿಯವರು ಉತ್ಸಾಹದಿಂದ ಹೋಗುತ್ತಾರೆ. ರಕ್ತಗತ ವೀರತ್ವಕ್ಕೂ ರಕ್ತಗತ ಕ್ರಿಮಿನಲ್ ಬುದ್ಧಿಗೂ ಇರುವ ವ್ಯತ್ಯಾಸವೆಂದರೆ ಇದುವೇ!

ಮಾತುಮಾತಿಗೆ ತುಳುನಾಡಿನ ಬಂಟ-ಬಿಲ್ಲವರು "ನಾವು ಕ್ಷತ್ರಿಯ ಜನಾಂಗದವರು" ಎಂದು ಬಡಾಯಿ ಕೊಚ್ಚುತ್ತಾರೆ. ಆದರೆ ಇವರ ಕ್ಷಾತ್ರತೇಜ ನೈಜ ದೇಶ ಸೇವೆ ಮಾಡುವ ಮಿಲಿಟರಿಗೆ ಸೇರುವಂತೆ ಉತ್ತೇಜಿಸುವ ಬದಲು ಭೂಗತ ಜಗತ್ತು ಸೇರುವಂತೆ ಪ್ರಚೋದಿಸುತ್ತದೆ ಅಷ್ಟೇ. ನಿಸ್ಸಹಾಯಕ ಮುಸ್ಲಿಮರನ್ನು ಹಾಗೂ ಕ್ರೈಸ್ತರನ್ನು ಕಂಡ ಕೂಡಲೇ ಈ ಸಂಘಿ ಕಾಲಾಳುಗಳ (ಕೃತಿಮ) ದೇಶಭಕ್ತಿ ಹಾಗೂ ಕ್ಷಾತ್ರತೇಜ ಉಮ್ಮಳಿಸಿ ಬರುತ್ತದೆ. ಆದರಲ್ಲೂ ಗಾಂಜಾದ ಅಮಲಿನಲ್ಲಿ ಬಿಲ್ಲವ-ಬಂಟ-ಗೌಡ ಹುಡುಗರ ದೇಶ ಭಕ್ತಿ ಉತ್ಕಟೆಗೆ ಏರುತ್ತದೆ ಪಾಪ! ಕೆಲವು ಮೋದಿ ಭಕ್ತರು ತಾವು ನಿವೃತ್ತ ಯ[illegible] ಎಂದು ಬಡಾಯಿ ಕೊಚ್ಚುತ್ತಾರೆ. ಆದರೆ ಸೇನಾಪಡೆಯಲ್ಲಿ ಬಳಸುವ ಪಾರಿಭಾ[illegible] ಬಗ್ಗೆ ಅವರಲ್ಲಿ ಮಾತನಾಡಿದಾಗ ಅವರು ಎಂದೂ ಸೇನಾಪಡೆಯಲ್ಲಿ ಇರಲ[illegible] ಎಂಬ ಅವರ ಹೂರಣ ಹೊರಬೀಳುತ್ತದೆ.

ಹೋದಲ್ಲೆಲ್ಲಾ ಪೌರುಷದ ಭಾಷಣ ಜಡಿಯುವ ಗೌಡತಿ ಶೋಭಾ ಕ[illegible] ತಮ್ಮ ಕುಟುಂಬದ ಯುವಕರು ಅಥವಾ ಯಡಿಯೂರಪ್ಪನ ಮೊಮ್ಮಕ್ಕಳು ತನ್ನ ಜಿಲ್ಲೆಯ ಅರೆಭಾಷೆ, ತುಳು, ಕೊಂಕಣಿ ಯುವಕರು ತಾವು ವೀರರು ದೇಶಭಕ್ತರು ಎಂದು ನಿರೂಪಿಸಲು ಅವರು ಸೇನಾಪಡೆ ಸೇರಿ ದೇಶದ ಗಡಿಗೆ ಹೋ[illegible] ಮನವೊಲಿಸಬಲ್ಲರೇ? ಕೇವಲ ಮುಸ್ಲಿಮರ ಮೇಲೆ ದ್ವೇಷ ಸಾಧಿಸುವುದಕ್ಕೆ ಶೌರ್ಯ ಎನ್ನುವುದಿಲ್ಲ.


- ವೀರಪ್ಪ ಡಿ ಎನ್. ವ[illegible]

ಅಂಡರ್‌ಟೇಕರ್ ಶೋಭಕ್ಕ

"ಒಂದು ವೇಳೆ ಪ್ರಭಾಕರ್ ಭಟ್ ಹಾಗೂ ನನ್ನನ್ನು ಮುಟ್ಟಿದ್ದೇ ಆದಲ್ಲಿ, ಅದು ಕಾಂಗ್ರೆಸ್ ಶವಪೆಟ್ಟಿಗೆಯ ಮೇಲಿನ ಕೊನೆಯ ಮೊಳೆ ಆಗಲಿದೆ" ಎಂದು ಸಂಸದೆ ಶೋಭಾ ಕರಂದ್ಲಾಜೆ ಕಿರುಚಿದ್ದಾಳೆ. ಯಡ್ಡಿ ಇರುವಷ್ಟು ದಿನ ಈ ಶೋಭಾಳ ಕಿರುಚಾಟ ಬಿಜೆಪಿಯವರು ಸಹಿಸಿಕೊಳ್ಳುತ್ತಾರೆ. ಯಡ್ಡಿಯ ನಂತರ ಇವಳನ್ನು ಯಾರೂ ಮೂಸುವುದಿಲ್ಲ. ಆಂಧ್ರದ ಎನ್‌ಟಿಆರ್‌ನ ಎರಡನೇ ಪತ್ನಿ ಲಕ್ಷ್ಮೀಪಾರ್ವತಿಯ ಗತಿ ಎನ್‌ಟಿಆರ್ ತೀರಿಕೊಂಡ ನಂತರ ಏನಾಯಿತು ಎಂಬುದನ್ನು ಎಲ್ಲರೂ ನೋಡಿರುವರು. ಪಾಶ್ಚಾತ್ಯ ದೇಶಗಳಲ್ಲಿ ಶವಪೆಟ್ಟಿಗೆ, ಶವ ಸಂಸ್ಕಾರದ ವಸ್ತು ಅಥವಾ ಹೆಣ ಸುಡಲು ಸೌದೆ ಸೀಮೆಎಣ್ಣೆ ಬೆಂಕಿ ಪೊಟ್ಟಣ ಪೂರೈಸುವವರಿಗೆ ಅಂಡರ್‌ಟೇಕರ್ ಎಂದು ಕರೆಯುತ್ತಾರೆ. ಈಗ ಶೋಭ ಕರಂದ್ಲಾಜೆ ಶವಪೆಟ್ಟಿಗೆ ಹಾಗೂ ಅವುಗಳ ಮೊಳೆಗಳ ಬಗ್ಗೆ ಮಾತಾಡುವ ಜತೆಗೆ ಬೆಂಕಿ ಹಚ್ಚುವ ಮಾತುಗಳನ್ನೂ ಆಡುತ್ತಿರುವುದರಿಂದ ಅವಳು ಅಂಡರ್‌ಟೇಕರ್ ಕೆಲಸಕ್ಕೆ ತುಂಬಾ ಲಾಯಕ್ಕು.

ಶೋಭ ದ.ಕ. ಜಿಲ್ಲೆಗೆ ಬೆಂಕಿ ಹಚ್ಚುವ ಮಾತು ಆಡುತ್ತಿದ್ದರೆ ಯಡ್ಡಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಇಡೀ ರಾಜ್ಯಕ್ಕೆ ಬೆಂಕಿ ಹಚ್ಚುವ ಮಾತು ಆಡುತ್ತಿದ್ದಾರೆ. ಯಾವನೋ ಒಬ್ಬ ಕರಾವಳಿಯ ಮುದಿ ಭಟ್ಟನ ಸಲುವಾಗಿ ತನ್ನನ್ನು ಸಾಕಿ ಸಲುಹಿದ ನಾಡಿಗೇ ಬೆಂಕಿ ಹಚ್ಚುವುದಾಗಿ ಹೇಳುವುದಕ್ಕಿಂತ ದೊಡ್ಡ ದೇಶದ್ರೋಹ ಯಾವುದಿದೆ?

ಶೋಭಕ್ಕ ಹೊಸದಾಗಿ ಅಂಡರ್‌ಟೇಕರ್ ಕೆಲಸ ವಹಿಸಿಕೊಂಡಿರುವುದರಿಂದ ಕರಾವಳಿಯ ಕ್ರೈಸ್ತರು ಶವಪೆಟ್ಟಿಗೆಗಳಿಗೆ ಹಾಗೂ ಮೊಳೆಗಳಿಗೆ ಇವರ ಹತ್ತಿರ ಆರ್ಡರ್ ಕೊಡಬಹುದು. ಶವಯಾತ್ರೆಗೆ ಬೇಕಾಗುವ ಶವ-ವಾಹನ, ಬಿಳಿವಸ್ತ್ರ, ಒಣ ಗಂಧದ ಮಾಲೆ, ಬೆಂಡುಬತ್ತಾಸು, ಸುಗಂಧ ಬತ್ತಿಗಳು, ಬ್ಯಾಂಡ್ ಭಜಂತ್ರಿ ಹಾಗೂ ಕೊನೆಗೆ ಶವಯಾತ್ರೆಯ ಮೇಲೆ ತೂರಲು ಜಲ್ಲಿಕಲ್ಲುಗಳು ತುಂಬಾ ಸ್ಪರ್ಧಾತ್ಮಕ ದರದಲ್ಲಿ ಇವರಲ್ಲಿ ಲಭ್ಯವಿದೆಯಂತೆ. ಯಾರದಾದರೂ ಶವಯಾತ್ರೆಯಲ್ಲಿ ಶವವೇ ಇಲ್ಲದಿದ್ದರೆ ಅವರು ತಾಜಾ ಶವಕ್ಕಾಗಿ ಕಲ್ಲಡ್ಕ ಭಟ್ಟನಲ್ಲಿ ಆರ್ಡರ್ ಮಾಡಬಹುದು. ಕಾರಣ ಹೆಣ ಬೀಳಿಸುವುದರಲ್ಲಿ ಅವನಿಗೆ 1970 ರಿಂದ ಹಿಡಿದು ಇವತ್ತಿನವರೆಗೂ 47 ವರ್ಷಗಳ ಸುದೀರ್ಘ ಅನುಭವವಿದೆ! ಶೋಭಾಳ ಅರಚಾಟಕ್ಕೆ ಮೂಲಕಾರಣ ಅವಳಿಗೆ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಪುತ್ತೂರು ಕ್ಷೇತ್ರದಿಂದ ಸ್ಪರ್ಧಿಸುವ ಇರಾದೆ ಇದೆ. ಪುತ್ತೂರಿನ ಈಗಿನ ಕಾಂಗ್ರೆಸ್ ಶಾಸಕಿ ಶಕುಂತಲಾ ಶೆಟ್ಟಿ ಮೂಲತಃ ಹಿಂದೂತ್ವವಾದಿ ಆಗಿದ್ದು ಕಾಂಗ್ರೆಸ್ ಸೇರಿದ ಮೇಲೂ ಅದೇ ಚಿಡ್ಡಿಣಿ




ಮನೋರೋಗ ಒಳಗೊಳಗೆ ಉಳಿದುಕೊಂಡಿದೆ. ಹಾಗಾಗಿ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಬೆಳೆದಿಲ್ಲ. ಇದರಿಂದ ಶೋಭಕ್ಕಳ ಲೆಕ್ಕಾಚಾರವೆಂದರೆ ಶಕುಂತಲಾ ಶೆಟ್ಟಿಯ ಎದುರು ಪುತ್ತೂರಲ್ಲಿ ತಾನು ಸುಲಭವಾಗಿ ಗೆಲ್ಲಬಹುದು ಹಾಗೂ ಯಡ್ಡಿ ಮುಖ್ಯಮಂತ್ರಿ ಆದರೆ ತಾನು ಫಲವತ್ತಾದ ಇಲಾಖೆಯ ಮಂತ್ರಿಯೂ ಆಗಬಹುದು ಎಂಬುದಾಗಿದೆ. ಆದಕ್ಕಾಗಿ ಶೋಭಾಳಿಗೆ ಪುತ್ತೂರಿನ ನೆರೆಯ ಬಂಟ್ವಾಳದಲ್ಲಿ ಬೆಂಕಿ ಹಚ್ಚುವಷ್ಟು ಭೀಕರ ಹಿಂದೂ ಪ್ರೇಮ!

- ಸುಜೀರ್ ರಶ್ಮಿತ್ ಗೌಡ, ಪುತ್ತೂರು

...ಆರೆಸ್ಸೆಸ್ ನಾಯಕನಾಗಿದ್ದಾನೆ ಹಾಗೂ ಅವನೇ ಈಗ ಕರಾವಳಿಯ ಆರೆಸ್ಸೆಸ್‌ಅನ್ನು ಸಂಪೂರ್ಣ ನಿಯಂತ್ರಿಸುತ್ತಿದ್ದಾನೆ. ...ಮ್ಮಪ್ಪ ಹೆಗ್ಗಡೆ ಯೆಕ್ಕಾರ್ ಎಂಬ ಬಂಟರ ಜಾತಿಯ ಪ್ರಸಿದ್ಧ ವಕೀಲರು ಹೆಚ್ಚು ಫೀಸ್ ತೆಗೆದುಕೊಳ್ಳದೇ ಈ ಹವ್ಯಕ ಕೊಲೆಗಾರನ ಪರವಾಗಿ ಕೋರ್ಟಿನಲ್ಲಿ ವರ್ಷಗಳ ಕಾಲ ಹೋರಾಡಿ ಅವನನ್ನು ಖುಲಾಸೆಗೊಳಿಸಿದ್ದರು. ಆಗ ಈ ವಕೀಲರೂ ಆರೆಸ್ಸೆಸ್ ಸದಸ್ಯರಾಗಿದ್ದರು. ಆದರೆ ಇಸ್ಮಾಯಿಲ್ ಕೊಲೆ ಕೇಸಲ್ಲಿ ಇವರು ತಮ್ಮ ಹವ್ಯಕ ಕಕ್ಷಿದಾರನನ್ನು ಗೆಲ್ಲಿಸಿದ ನಂತರ ಏನಾಯಿತು ಗೊತ್ತೇ? ಕೆಲ ಸಮಯದ ನಂತರ ಆರೆಸ್ಸೆಸ್‌ನ ಬ್ರಾಹ್ಮಣರೆಲ್ಲಾ ಸೇರಿಕೊಂಡು ಏನೋ ಕುಂಟುನೆವದಲ್ಲಿ ಈ ಬಂಟ ವಕೀಲರನ್ನು ಸಂಘದಿಂದ ಹೊರನೂಕಿದರು. ಆನಂತರ ಆ ವಕೀಲರು ಆರೆಸ್ಸೆಸ್‌ನ ಕಟ್ಟರ್ ವಿರೋಧಿಯಾದರು. ಅವರು ತಮ್ಮ ಸ್ವಂತ ಅನುಭವದ ಆಧಾರದಲ್ಲಿ ಕೊನೆಯವರೆಗೂ ಒಂದೇ ಮಾತು ಹೇಳುತ್ತಿದ್ದರು: "ಬಂಟರು/ ಶೂದ್ರರು ಯಾವುದೇ ಸಂಘಟನೆ ಸೇರಿಕೊಳ್ಳಲಿ ಪರವಾಗಿಲ್ಲ, ಆದರೆ ಜೀವ ಹೋದರೂ ಆರೆಸ್ಸೆಸ್ ಮಾತ್ರ ಸೇರಬಾರದು. ಕಾರಣ ಅದು ಕೇವಲ ಜುಟ್ಟು-ಜನಿವಾರದವರ ಸಂಘ."

ಅವರು 80 ವರ್ಷ ದಾಟಿದ ನಂತರ ತೀರಿಕೊಂಡರು. ತೀರಿಕೊಳ್ಳುವ ಹಿಂದಿನ ದಿನವೂ ಅವರು ಆರೆಸ್ಸೆಸ್‌ಅನ್ನು ಬಾಯಿಗೆಬಂದಂತೆ ಬೈದಿದ್ದರಂತೆ! ಅವರಿಗೆ ಮಕ್ಕಳಿರಲಿಲ್ಲ, ಆದರೆ ಅವರ ಒಬ್ಬ ಸಂಬಂಧಿಕರೇ ಈ ವಿಷಯ ನನಗೆ ಹೇಳಿದ್ದು.

- ಅಭಿಷೇಕ್ ಪಡಿವಾಳ್, ಸುಳ್ಯ



...ಎಂಬ ತಲೆಬರಹದಡಿಯಲ್ಲಿ ಪತ್ರ ಬರೆದು 23 ಪ್ಲಸ್ 6 ಸಂಘಿ ಜನರ ದೊಡ್ಡ ಲೀಸ್ಟನ್ನೇ ರವಾನಿಸಿದ್ದಾರೆ. ಸಿದ್ದರಾಮಯ್ಯನವರ ಸರಕಾರದಲ್ಲಿ ಸ್ವತಃ ಸಿದ್ದರಾಮಯ್ಯನೇ ಗನ್, ಚಾಕು, ಚೂರಿ ಹಿಡಿದು ಎಲ್ಲ ಸಂಘಿ ಭಕ್ತರನ್ನು ಕೊಲ್ಲ ಹೊರಟಿದ್ದಾರೆ ಎಂದು ಅಲವತ್ತುಕೊಂಡಿದ್ದಾರೆ. ವಿಚಿತ್ರವೆಂದರೆ ಈ ಸತ್ತವರ ಪಟ್ಟಿಯಲ್ಲಿ ಬದುಕಿದ್ದವರ ಹೆಸರುಗಳೂ ಸೇರಿರುವುದು. ಅದಕ್ಕೂ ಮುಖ್ಯವಾಗಿ, ಕಟ್ಟಾ ಆರೆಸ್ಸೆಸ್ಸಿಗರಾಗಿ ಇದೇ ಸಿದ್ದು ಅಧಿಕಾರಾವಧಿಯಲ್ಲೇ ಬರ್ಬರವಾಗಿ ಹತ್ಯೆಗೀಡಾಗಿದ್ದ ವಿನಾಯಕ ಬಾಳಿಗಾರ ಹೆಸರೇ ಕಾಣೆಯಾಗಿದೆ. ಅದೇರೀತಿ ಬಿಜೆಪಿಗರೇ ಆಗಿದ್ದ ಪ್ರವೀಣ್ ಪೂಜಾರಿ, ಕಾರ್ತಿಕ್ ರಾಜರಂತವರ ಹೆಸರುಗಳೂ ಕರಂದ್ಲಾಜೆಯವರ ಪಟ್ಟಿಯಿಂದ ಕಾಣೆಯಾಗಿರುವುದು ವಿಶೇಷ.

ಮಂಗಳೂರಿನ ಪ್ರಸಿದ್ಧ ಫಾದರ್ ಮುಲ್ಲರ್ ಆಸ್ಪತ್ರೆ ಬಳಿ ಇರುವ ಕಿರಿಸ್ತಾನರ ರೋಶನಿ ನಿಲಯದಲ್ಲಿ ಅದೂ ಸಾಮಾಜಿಕ ಸೇವೆಯ ಬಗ್ಗೆ MSW ಪದವಿ ಪಡೆದಿದ್ದ ಶೋಭಕ್ಕ (ಅಲ್ಲಿ ಅವರು ದಾಖಲಾಗಿದ್ದದು ಬೇಬಿ ಎನ್ನುವ ಹೆಸರಿನಲ್ಲಿ), ನಂತರ ಕಸ್ತೂರಬಾ ಮೆಡಿಕಲ್ ಕಾಲೇಜಿನಲ್ಲಿ ದಾದಿಯಾಗಿಯೂ ಕೆಲಸ ಮಾಡಿದ್ದರಂತೆ. (ಬಹುಶಃ ಈಗಲೂ ಮುಂದುವರೆದಿದ್ದರೆ ಮುಸಲ್ಮಾನ ರೋಗಿಗಳನ್ನೆಲ್ಲ ದೇವರೇ ಕಾಪಾಡಬೇಕಿತ್ತೇನೋ.) ಇತ್ತೀಚೆಗೆ ಮಾತು ಮಾತಿಗೂ ಸಾಬರೆಂದರೆ ಕೆಂಡ ಕಾರುವ ನಮ್ಮ MSW ಶೋಭಕ್ಕ ಮೊನ್ನೆ ಮೊನ್ನೆ ಬೆಂಗಳೂರು ರೈಲ್ವೇ ನಿಲ್ದಾಣದಲ್ಲಿ ನೂರಿನ್ನೂರು ಟೋಪಿಧಾರಿ ಮುಸಲ್ಮಾನ ಮಕ್ಕಳು ಕಾಣಿಸಿಕೊಂಡಿರುವ ಬಗ್ಗೆಯೂ ಕೆಂಡ ಕಾರಿದ್ದಾರೆ.

ರಂಜಾನ್ ಹಬ್ಬ ಮುಗಿಸಿ ಒಟ್ಟಿಗೆ ವಾಪಸ್ಸಾಗುತ್ತಿರುವ ಮಕ್ಕಳನ್ನು ಕೇರಳಕ್ಕೆ ಮತಾಂತರಿಸಲು ಸಾಗಣೆ ಮಾಡಲಾಗುತ್ತಿದೆ ಎಂದು ಬ್ರೇಕಿಂಗ್ ನ್ಯೂಸ್ ಸುದ್ದಿ ಹಬ್ಬಿಸಲಾಗಿತ್ತು. ಒಟ್ಟಾರೆ ಯಡಿಯೂರಪ್ಪ ಮರಳಿ ಸಿಎಮ್ ಆಗೋತನಕ ಸಾಬರಿಗೆ ಮಾತ್ರ ಕಂಟಕ ತಪ್ಪಿದ್ದಲ್ಲ. ಆ ದಯಾಮಯ "ಇಫ್ತಾರ್ ಸ್ವಾಮಿ"ಯೇ ಸಾಬರನ್ನು ಕಾಪಾಡಬೇಕಷ್ಟೆ.

- ಓದುಗ, ಮಂಗಳೂರು

ಬೇಬೀಸ್ ಡೇ ಔಟ್ ಭಾಗ-2

ಕರಾವಳಿ ಜಿಲ್ಲೆಯಲ್ಲೀಗ ಬೇಬಿಗಳದ್ದೇ ಹವಾ. ಒಂದು ಕಡೆ ಬಂಟ್ವಾಳದಲ್ಲಿನ ಗಲಾಟೆಗಳಿಗೆಲ್ಲ ಮೂಲಕಾರಣವೆಂದು ಸಂಘಿಗಳಿಂದ ದೂಷಣೆಗೊಳಗಾಗುತ್ತಿರುವ ಬೇಬಿಯಣ್ಣ ಎಂದೇ ಸ್ಥಳೀಯವಾಗಿ ಕರೆಯಿಸಿಕೊಳ್ಳುವ ದಕ ಜಿಲ್ಲೆಯ ಉಸ್ತುವಾರಿ ಸಚಿವ ರಮಾನಾಥ ರೈ. ಮತ್ತೊಂದು ಕಡೆ ಪಕ್ಕದ ಕ್ಷೇತ್ರದ ಸಂಸದೆಯಾಗಿ ಇಲ್ಲಿನ ತರಲೆಗಳಿಗೆ ಮೂಗುತೂರಿಸಿ ಬೇಳೆ ಬೇಯಿಸಿಕೊಳ್ಳಲು ಹೊಂಚು ಹಾಕುತ್ತಿರುವ ಮಾಜಿ ಸಚಿವೆ ಬೇಬಿಯಕ್ಕ ಯಾನೆ ಶೋಭಾ ಕರಂದ್ಲಾಜೆಯ ಹೋರಾಟ ಒದರಾಟಗಳು. 20 ವರ್ಷಗಳ ಹಿಂದೆ ಬಂದಿದ್ದ 'ಬೇಬೀಸ್ ಡೆ ಔಟ್' ಎನ್ನುವ ಹಾಲಿವುಡ್ಡಿನ ಕಾಮಿಡಿ ಚಲನಚಿತ್ರದಲ್ಲೂ ಎರಡು ಬೇಬಿಗಳು ಲೈಟು- ಕ್ಯಾಮರಾ ಎಂದು ತೀರಾ ಹಿಂಸೆಯಾಗದಿರಲಿ ಎಂದು ಅವಳಿ ಮಕ್ಕಳಿಂದ ಒಂದು ಪಾತ್ರವನ್ನು ಚಿತ್ರೀಕರಿಸಲಾಗಿತ್ತು) ಕಳ್ಳರನ್ನು ಹೈರಾಣಾಗಿಸುವ ಕಥೆಯಿದ್ದರೆ ಈ 'ಬೇಬಿ'ಗಳು ಇಲ್ಲಿ ಜನರನ್ನೇ ಹೈರಾಣಾಗಿಸ ಹೊರಟಿದ್ದಾರೆ.

ಶೋಭಾ ಕರಂದ್ಲಾಜೆಯವರಂತೂ ತಮ್ಮದೇ ಪಕ್ಷದ ಕೇಂದ್ರ ಗೃಹ ಸಚಿವ ರಾಜನಾಥ ಸಿಂಗ್‌ಗೆ "ಕಾಂಗ್ರೆಸ್ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಡಳಿತದಡಿ ರಕ್ತದ ಕೋಡಿ ಹರಿದು ರಾಜಕೀಯ ಕೊಲೆಗಳು ಸಂಭವಿಸುತ್ತಿವೆ. ಕಾಂಗ್ರೆಸ್‌ನ ಕಳೆದ ನಾಲ್ಕುಗಳ ಅವಧಿಯಲ್ಲಿ ಹತ್ಯೆಗೀಡಾಗಿರುವ ಹಿಂದೂ/ಆರೆಸ್ಸೆಸ್ ಕಾರ್ಯಕರ್ತರ ಪಟ್ಟಿ"

ಗುಜರಾತ್ ಚುನಾವಣೆ ಮತ್ತು ಅಮರನಾಥ ಯಾತ್ರಿಗಳು

ಎಲ್ಲವೂ ಎಷ್ಟೊಂದು ಕಾಕತಾಳೀಯ ನೋಡಿ. ಗುಜರಾತ್ ಚುನಾವಣೆ ಹತ್ತಿರ ಬರುತ್ತಿದೆ, ಕಾಶ್ಮೀರದಲ್ಲಿ ಗುಜರಾತಿನಿಂದ ಬಂದ ಬಸ್ ಮೇಲೆ ಮಾತ್ರ ಉಗ್ರರ ದಾಳಿ ನಡೆಯುತ್ತದೆ. ಅಮರನಾಥ್ ಯಾತ್ರಾ ಮಂಡಳಿಯೊಂದಿಗೆ ನೋಂದಾಯಿಸದೇ ಇರುವ ಏಕೈಕ ಬಸ್ಸಿದು! ಸಂಜೆ ಏಳರನಂತರ ಯಾತ್ರಿಕರ ಬಸ್ಸುಗಳು ಈ ರಸ್ತೆಯಲ್ಲಿ ಸಂಚರಿಸಬಾರದು ಎಂದು 30 ವರ್ಷಗಳಿಂದ ಇದ್ದ ಕಠಿಣ ನಿಯಮವನ್ನು ಮುರಿದ ಏಕೈಕ ಬಸ್ಸಿದು. ಯಾವುದೇ ಸೇನಾಪಡೆ ಬೆಂಗಾವಲಿಲ್ಲದೇ ರಾತ್ರಿ ಹೊತ್ತು ಸಂಚರಿಸಿದ ಏಕಮೇವ ಬಸ್ಸಿದು! ಉಗ್ರರು ಮುಂಬದಿಯಿಂದ ಗುಂಡು ಹಾರಿಸಿದ್ದರೂ ಡ್ರೈವರ್ ಮತ್ತು ಸಹಾಯಕನಿಗೆ ಏನೂ ಆಗುವುದಿಲ್ಲ, ಆದರೆ ಏಳು ಗುಜರಾತಿ ಯಾತ್ರಿಗಳು ಉಗ್ರರ ಗುಂಡೇಟಿನಿಂದ ಸಾಯುತ್ತಾರೆ. ಗುಜರಾತ್ ಸರಕಾರ ಮೃತರಿಗೆ ಹಾಗೂ ಗಾಯಾಳುಗಳಿಗೆ ಪರಿಹಾರ ಪುರಸ್ಕಾರ ಘೋಷಿಸುತ್ತದೆ. ಯಾತ್ರಿಗಳ ಪಾರ್ಥೀವ ಶರೀರಗಳ ಮೆರವಣಿಗೆ ಗುಜರಾತಿನಲ್ಲಿ ನಡೆದಿದೆ. ಗೋಧ್ರಾ ಮರುಕಳಿಸಲು ಇದು ಮುನ್ನುಡಿಯಂತಿದೆ.

ಹೌದು ಗುಜರಾತ್ ಚುನಾವಣೆ ಹತ್ತಿರ ಬರುತ್ತಿದೆ. ಮುಗ್ಧರು ಹರಕೆಯ ಕುರಿಗಳಾಗುತ್ತಿದ್ದಾರೆ. ಮತದಾರ ಕುರಿಗಳು ಬಿಳಿ-ಗಡ್ಡ ಕರಿ-ಗಡ್ಡ ಇರುವ ರಕ್ತಪಿಪಾಸು ತೋಳಗಳ ಹಿಂದೆ ಕಣ್ಣುಮುಚ್ಚಿ ಸಾಗುತ್ತಿವೆ. ಅಮಾಯಕರ ಹೆಣಗಳನ್ನೇ ಪೇರಿಸಿ ಮೆಟ್ಟಿಲು ಮಾಡಿ ಮೇಲೆ ಏರಿ ಸಾಮಾನ್ಯ ಜನರ ಕಣ್ಣೀರು-ನೆತ್ತರ ಕೊಳದಲ್ಲಿ ಮೀನು ಹಿಡಿದು ಅಧಿಕಾರಕ್ಕೆ ಬರುವವರೂ ಇದ್ದಾರೆ ಬಿಡಿ.

ಅವೆಲ್ಲಾ ಕಾಕತಾಳೀಯ. ಘೋರ ನಾಟಕವನ್ನು ನಿಜ ಘಟನೆ ಎಂದು ತಿಳಿಯುವ ಕುರಿಗಳು ಇರುವುದೂ ಕಾಕತಾಳೀಯ. 2001 ರಲ್ಲಿ ವಾಜಪೇಯಿ ಸರಕಾರವಿದ್ದಾಗ ಒಮ್ಮೆ ಅಮರನಾಥ ಯಾತ್ರಿಗಳ ಮೇಲೆ ಉಗ್ರರ ದಾಳಿ ನಡೆದಿತ್ತು, ನಂತರ 16 ವರ್ಷ ಅಮರನಾಥ ಯಾತ್ರೆ ಸುರಕ್ಷಿತವಾಗಿತ್ತು. ಈಗ 16 ವರ್ಷಗಳ ನಂತರ ಮತ್ತೆ ಬಿಜೆಪಿ ಸರಕಾರವಿರುವಾಗಲೇ ಯಾತ್ರಿಗಳ ಮೇಲೆ ಉಗ್ರರ ದಾಳಿ ನಡೆದಿದೆ. ಎಲ್ಲವೂ ಕಾಕತಾಳೀಯ. ಇದು ಎಷ್ಟೊಂದು ಕಾಕತಾಳೀಯವೆಂದರೆ ಗುಜರಾತಿನ ನಕಲಿ ಎನ್‌ಕೌಂಟರ್ ವೀರ ಪೋಲಿಸ್ ಅಧಿಕಾರಿ ಬಂಜಾರಾ ಎಂಬಾತ ತನ್ನ ನಿವೃತ್ತಿ ಸಮಯ ಕಳೆಯಲು ಕಾಶ್ಮೀರದಲ್ಲಿ ಇದ್ದ! ಒಟ್ಟಾರೆ ಎಲ್ಲವೂ ಭಯಂಕರ ಕಾಕತಾಳೀಯ.

ಉರ್ದು ಬರಹಗಾರ ಸಾದತ್ ಹಸನ್ ಮಂಟೊ ಹೀಗೆ ಹೇಳಿಲ್ಲವೇ: "ಗಡಿಯಲ್ಲಿ ಗಡಿಬಿಡಿಯಾಗುತ್ತಿದೆಯೇ? ಸೈನಿಕರ ಹೆಣ ಬೀಳುತ್ತಿದೆಯೇ? ದೇಶಭಕ್ತಿಯ ಭಜನೆ ತಾರಕಕ್ಕೇರಿದೆಯೇ? ಹಾಗಾದರೆ ಚುನಾವಣೆ ಹತ್ತಿರ ಬರುತ್ತಿದೆ."

- ಪ್ರಶೀಶ್ ಕುಮಾರ್ ಎಸ್, ಬೆಂಗಳೂರು



Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 02-08-2017 RNI No. KARKAN

'ಬೆತ್ತಲೆ ಸೀನ್'ನ ಬಯೋಗ್ರಫಿ



ಕಳೆದ ವಾರ ತೆರೆಕಂಡ 'ದಂಡುಪಾಳ್ಯ-2' ಸಿನಿಮಾದ್ದು ಎನ್ನಲಾದ ನಟಿ ಸಂಜನಾಳ ಬೆತ್ತಲೆ ಸೀನು ಸಾಮಾಜಿಕ ಜಾಲತಾಣದಲ್ಲಿ ವಿಪರೀತ ಸದ್ದು ಮಾಡಿತ್ತು. ಪೊಲೀಸ್ ಟಾರ್ಚರ್ ಅತಿಯಾಯ್ತು ಎಂಬ ಕಾರಣಕ್ಕೆ ಸೆನ್ಸಾರ್ ಕಮಿಟಿ ಈ ದೃಶ್ಯಕ್ಕೆ ಕತ್ತರಿ ಹಾಕಿದ್ದರೂ ಅದು ಸಾಮಾಜಿಕ ತಾಣಗಳಲ್ಲಿ ಹರಿದಾಡಿದ್ದರ ಹಿಂದೆ ಚಿತ್ರತಂಡದ ಪಬ್ಲಿಸಿಟಿ ಗಿಮಿಕ್ ಇರಬಹುದೆನ್ನುವ ಗುಮಾನಿ ಇದೆ. ಸಂಜನಾಳ ಸಮ್ಮತಿಯಿಲ್ಲದೆ ಈ ವೀಡಿಯೋ ವೈರಲ್ ಮಾಡಲಾಗಿದೆ ಎಂಬ ಅನುಮಾನವಿತ್ತು. ಆದರೆ ಸಂಜನಾ ಮಾತು ಕೇಳುತ್ತಿದ್ದರೆ ಅದಕ್ಕೆ ಆಕೆಯ ಸಂಪೂರ್ಣ ಸಮ್ಮತಿ ಇರುವಂತಿದೆ. ವೀಡಿಯೋದಲ್ಲಿ ಸಂಜನಾಳನ್ನು ಸಂಪೂರ್ಣ ನಗ್ನವಾಗಿ ಕಟ್ಟಿಹಾಕಿರೋದನ್ನು ಹಿಂಬದಿಯಿಂದ ತೋರಿಸಲಾಗಿತ್ತು, ಅದಕ್ಕೆ ಸ್ಪಷ್ಟನೆ ಕೊಟ್ಟಿರುವ ಸಂಜನಾ 'ಪೊಲೀಸ್ ಟಾರ್ಚರ್ ಸನ್ನಿವೇಶದಲ್ಲಿ ನಾನು ಒಬ್ಬ ಕಲಾವಿದೆಯಾಗಿ ನ್ಯಾಯ ಒದಗಿಸಿದ್ದ ಖುಷಿ ಇತ್ತು. ಆ ದೃಶ್ಯ ತೆರೆ ಮೇಲೆ ಬಂದಿದ್ದರೆ ನನ್ನ ಅಭಿನಯ ಪ್ರೇಕ್ಷಕರಿಗೆ ಗೊತ್ತಾಗುತಿತ್ತು. ಆದರೆ ಸೆನ್ಸಾರ್ ಆ ಸೀನ್‌ಗೆ ಕತ್ತರಿ ಹಾಕಿದೆ.

ಇದು ನನಗೆ ತೀವ್ರ ಬೇಸರ ತಂದಿದೆ" ಎಂದಿದ್ದಾರೆ. ಅಂದಹಾಗೆ, ವೀಡಿಯೋದಲ್ಲಿ ತೋರಿಸಿದಂತೆ ಸಂಜನಾ ಖುಲ್ಲಂಖುಲ್ಲ ನಗ್ನವಾಗಿರಲಿಲ್ಲವಂತೆ. ಬೆನ್ನಿನ ಭಾಗದಿಂದ ಸಂಪೂರ್ಣ ಬೆತ್ತಲಾಗಿದ್ದರೂ ಮುಂಭಾಗವನ್ನು ಮುಚ್ಚಿಕೊಂಡಿದ್ದರಂತೆ. ನಂತರ ಸಿ.ಜಿ ವರ್ಕ್‌ನಲ್ಲಿ ಸಂಪೂರ್ಣ ಬೆತ್ತಲಾದಂತೆ ಕನ್ವರ್ಟ್ ಮಾಡಲಾಗಿದೆ ಎನ್ನುವ ಸಂಜನಾ "ಕಲಾವಿದರು ಪಾತ್ರಕ್ಕೆ ತಕ್ಕಂತೆ ಅಭಿನಯಿಸದಿದ್ದರೆ ಔಟ್ ಡೇಟೆಡ್ ಆಗಿಬಿಡುತ್ತೇವೆ" ಅನ್ನೋ ಸಿನಿಮೋಪದೇಶ ಮಾಡಿ ಕೃತಾರ್ಥರಾಗಿದ್ದಾರೆ.


■ ಗಿರೀಶ್ ತಾಳಿಕಟ್ಟೆ

ಚಿಕ್ಕಣ್ಣನ ರಿಸ್ಕಾಯಣ

ಕಾಮಿಡಿ ನಟರು ಹೀರೋಗಳಾಗೋದು ಸಿನಿಮಾ ಪರಂಪರೆಗೆ ಹೊಸದೇನೂ ಅಲ್ಲ, ಆದರಲ್ಲೂ ಕನ್ನಡ ಸಿನಿಮಾದಲ್ಲಿ ಅಂತಹ ಸಾಲುಸಾಲು ಸ್ಯಾಂಪಲ್‌ಗಳು ಸಿಗುತ್ತವೆ. ಆದರೆ ಹೀರೋ ಆಗಿ ಬರ್ಕತ್ತಾಗಿದ್ದು ತುಂಬಾ ಕಮ್ಮಿ. ದ್ವಾರಕೀಶ್ ಮತ್ತು ಜಗ್ಗೇಶ್ ತರದ ಕೆಲವರನ್ನು ಬಿಟ್ಟರೆ ಅಂತಹ ಸಾಹಸದಲ್ಲಿ ಸಕ್ಸಸ್ ಆದವರು ವಿರಳ. ಆದರೂ ಕಾಮಿಡಿ ನಟ ಸ್ಟಾರ್ ಕುದುರುತ್ತಿದ್ದಂತೆಯೇ ಅವರು ಹೀರೋ ದಾರಿ ಹಿಡಿದು ಅತ್ತ ನಾಯಕನೂ ಆಗದೆ, ಇತ್ತ ನಗೆನಾಯಕನೂ ಆಗದೆ ಅತಂತ್ರಕ್ಕೆ ಸಿಲುಕುತ್ತಾರೆ. ಜೊತೆಗೆ ಪ್ರೇಕ್ಷಕರಿಗೆ ಹಾಸ್ಯನಟರ ಕೊರತೆಯನ್ನೂ ಹೇರಿಸಿ ಬಿಡುತ್ತಾರೆ. ಆದರೆ ಕನ್ನಡದಲ್ಲಿ ಸದ್ಯ ಕಾಮಿಡಿ ನಟರ ಪೈಕಿ ಸಖತ್ ಶೈನ್ ಆಗುತ್ತಿರುವ ಚಿಕ್ಕಣ್ಣನಿಗೆ ಹೀರೋ ಉಸಾಬರಿಯೇ ಬೇಡ ವಂತೆ. ಕಾಮಿಡಿ ನಟನಾಗಿ ಮಿಂಚುತ್ತಿರುವ ಚಿಕ್ಕಣ್ಣ



ಮುಂದೊಂದು ದಿನ ಫುಲ್‌ಟೈಂ ಹೀರೋ ಆಗುವ ಅನಾಹುತ ಸಂಭವಿಸುವ ಸಾಧ್ಯತೆಯೂ ಉಂಟೆಂಬ ಮಾತುಗಳು ಗಾಂಧಿನಗರ ಸಂದಿಗೊಂದಿಯಿಂದ ತೂರಿಬರುತ್ತಿದ್ದವು. ಆದ್ರೆ ಚಿಕ್ಕಣ್ಣ ಅಂಥ ಅಪಘಾತವನ್ನು ತಳ್ಳಿಹಾಕಿದ್ದಾರೆ. ಅಬ್ಬಾ ಅಪರೂಪಕ್ಕಾದರೂ ತನ್ನ ಚೌಕಟ್ಟನ್ನು ಅರ್ಥ ಮಾಡಿಕೊಂಡ ಒಬ್ಬ ನಗೆ ಕಲಾವಿದ ಸಿಕ್ಕನಲ್ಲ ಎಂದು ನಿಟ್ಟುಸಿರುವ ಬಿಡುವ ಮೊದಲೇ "ಹೀರೋ ಆದರೆ ರಿಸ್ಕ್ ಜಾಸ್ತಿ. ಸಿನಿಮಾ ಶುರುವಾದಾಗಿನಿಂದಲೂ ಹಿಡಿದು ಅದು ಬಿಡುಗಡೆಯಾದ ಮೇಲೂ ಒತ್ತಡ ಇರುತ್ತದೆ. ಹೀಗಾಗಿ ರಿಸ್ಕ್ ತೆಗೆದುಕೊಳ್ಳುವ ಬದಲು ಕಾಮಿಡಿ ನಟನಾಗಿಯೇ ಮುಂದುವರೆಯುತ್ತೇನೆ" ಅಂತ ಶಾಕ್ ಕೊಟ್ಟಿದ್ದಾರೆ!!




ಮತ್ತೆ ಒಂದಾದ 'ಪವರ್-ಲೈ…

ಕನ್ನಡದ ದುಬಾರಿ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ… ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಜೋಡಿ 11 ವರ್ಷಗ… ಮತ್ತೆ ಒಂದಾಗುತ್ತಿದೆ. ತಮಿಳು ಡೈರೆಕ್ಟರ್ ವೆಟ್ರಿಮಾರನ್ ನಿರ್ದೇಶ… ರೀಮೇಕ್ ಸಿನಿಮಾ ಆಗಿರಲಿದೆ ಎಂಬ ಮಾತುಗಳು ಕೇಳಿಬ… ಆದರೆ ಸ್ವತಃ ರಾಕ್‌ಲೈನ್ ಅದನ್ನು ಅಲ್ಲಗಳೆದಿದ್ದು ಪುನೀತ್‌ಗೆ ಒಪ… ಬಜೆಟ್‌ನ ಸ್ವಮೇಕ್ ಚಿತ್ರ ಇದಾಗಲಿದೆಯಂತೆ. ತಮಿಳಿನ 'ವಿಸಾರಣೈ'… ಹಕ್ಕನ್ನು ರಾಕ್‌ಲೈನ್ ಖರೀದಿಸಿಟ್ಟುಕೊಂಡಿದ್ದರಿಂದ ಅಂತಹದ್ದೊಂದು… ಹರಡಿತ್ತು. ಆದ್ರೆ ಈ ಕಥೆ ಪುನೀತ್‌ಗೆ ಸೂಕ್ತವಲ್ಲ ಎಂಬ ಕಾರಣಕ್ಕೆ … ಸ್ವಮೇಕ್ ಕಥೆಯತ್ತ ಹೊರಳಿದ್ದಾರಂತೆ. ಈಗಾಗಲೇ ವೆಟ್ರಿಮಾರ… ಚಿತ್ರಕಥೆ ರೆಡಿ ಮಾಡಿದ್ದು ಪುನೀತ್ ಕೂಡಾ ಗ್ರೀನ್‌ಸಿಗ್ನಲ್ ತೋರಿಸಿ… ಸದ್ಯ ಪುನೀತ್ 'ಅಂಜನಿ ಪುತ್ರ' ಸಿನಿಮಾದಲ್ಲಿ ಬ್ಯುಸಿಯಾಗಿರೋದ್ರಿ… ಮುಗಿದನಂತರ ರಾಕ್‌ಲೈನ್ ಹೊಸ ಚಿತ್ರ ಸೆಟ್ಟೇರಲಿದೆ.

ದಯಾಳ್ ಮೇಷ್ಟ್ರ ಪಾ…

'ಓಬಾ ಬಾರೋ ರಸಿಕ'ದಂತಹ ಬಿಸಿಬಿಸಿ ಸಿನಿಮಾ ಮಾ… ದಯಾಳ್ ಇದೀಗ ಮೇಷ್ಟ್ರಾಗಿದ್ದಾರಂತೆ. ಸಿಕ್ಕಸಿಕ್ಕಲ್ಲಿ ನೀತಿಪಾಠ … ಶುರುಹಚ್ಚಿಕೊಂಡಿದ್ದಾರಂತೆ. ಅಂದಹಾಗೆ, ಈ ಹೊಸ ಮೇಷ್ಟ್ರು ತನ್ನ … ಸ್ವೀಕರಿಸಿರೋದು ಡೀಸೆಂಟ್ ಹುಡುಗ ಚಿನ್ನಾರಿ ಮುತ್ತನನ್ನು. ಕನ್ನಡ ಚಿತ… ವಿವಾದಗಳಿಂದ ದೂರವಿರುವ ನಟನೆಂದರೆ ಅದು ವಿಜಯ್ ರಾ… ಅಂಥಾ ರಾಘುಗೆ ಭಟ್ಟರ ಡ್ಯಾಕುಲ ಖ್ಯಾತಿಯ ಪಿ. ದಯಾಳ್ … ಮಾಡಲು ಮುಂದಾಗಿದ್ದಾರೆ.

ಅದಕ್ಕೆ ಕಾರಣ 'ಟಾಸ್' ಅನ್ನೋ ಅವರ ಸಿನಿಮಾ. ಅಜಮಾಸು… ವರ್ಷಗಳ ಹಿಂದೆ ಆರಂಭಗೊಂಡು ಕುಂಟುತ್ತಾ, ತೆವಳುತ್ತಾ … 'ಒಂದು ರೂಪಾಯಿಗೆ ಎರಡು ಪ್ರೀತಿ' ಅನ್ನೋ ಹೆಸರಿನಿಂದ … ಮರುನಾಮಕರಣಗೊಂಡ ಸಿನಿಮಾಕ್ಕೆ ಈ ದಯಾಳನೇ ನಿರ್ದೇಶಕ… ಮುತ್ತನೇ ಹೀರೊ. ಅಂತೂಇಂತೂ ಬಿಡುಗಡೆಗೆ ಸಿದ್ಧವಾಗಿದೆ. ಆದರೆ, … ಪಬ್ಲಿಸಿಟಿಗೆ ವಿಜಯ್ ರಾಘವೇಂದ್ರ ಬರುತ್ತಿಲ್ಲ ಅನ್ನೋದು ದಯಾಳ್ … ಆರೋಪ. ಸಿನಿಮಾದ ತನ್ನೆಲ್ಲ ಕೆಲಸವನ್ನೂ ಅಚ್ಚುಕಟ್ಟಾಗಿ ಮುಗಿಸಿಕೆ… ವಿಜಯ್ ಪಬ್ಲಿಸಿಟಿ ವಿಚಾರದಿಂದ ದೂರ ಉಳಿಯುತ್ತಿದ್ದಾರಂತೆ. ಹಾಗೆ ನೋ… ವಿಜಯ ರಾಘವೇಂದ್ರ ಅವರಷ್ಟು ದಯಾಳ್ ಹೆಸರು, ನಂಬಿಕೆ ಉಳಿಸಿಕೊಂಡ ವ್ಯಕ್ತಿಯಲ್ಲ. ಯೋಗರಾಜ್ ಭಟ್ಟರು ನಿರ್ದೇಶಿಸಿದ್ದ 'ಗಾಳಿಪಟ' ಚಿತ್ರಕ್ಕೆ ಕಾರ್ಯಕಾರಿ ನಿರ್ಮಾಪಕನಾಗಿ ದಯಾಳ್ ಮಾಡಿದ ಭಾನಗಡಿಯಿಂದ ಚಿತ್ರದ ನಿರ್ಮಾಪಕ ಸೂರ್ಯಪ್ರಕಾಶ್ ರಾವ್ ಜೇಬಿಗೆ ದೊಡ್ಡ ಗಾತ್ರದಲ್ಲೇ ತೂತು ಬಿದ್ದಿತ್ತು. ಅಂಥಾ ದಯಾಳ್ ಪಬ್ಲಿಸಿಟಿ ನೆಪವಿಟ್ಟು ಕೊಂಡು ವಿಜಯ್‌ಗೆ ನೀತಿ ಪಾಠ ಹೇಳುತ್ತಿರೋದು ಹಾಸ್ಯಾಸ್ಪದವೇ ಸರಿ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com